BUDGET ESTIMATES FOR 1968-69—DEMANDS FOR GRANTS

DEMAND NOS. : 6, 29, 30, 30A, 31, 32, 43, 45, 46, 47, 48 and 50.

(*Debate Continued*)

† ಶ್ರೀ ಕೆ. ಎಂ. ಪುಟ್ಟಸ್ವಾಮಿ (ಚಿಕ್ಕಬಳ್ಳಾಪುರ)—ಮಾನ್ಯ ಸಭಾಪತಿಗಳೇ, ಮಾನ್ಯ ಲೋಕೋಪಯೋಗಿ ಮಂತ್ರಿಗಳು ತಂದಿರತಕ್ಕ ಈ ಬೇಡಿಕೆಯನ್ನು ಸ್ವಾಗತಿಸುತ್ತಾ ಒಂದೆರಡು ಮಾತುಗಳನ್ನು ಆಡಬೇಕೆಂದು ಇಚ್ಛಿಸುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ಅನೇಕ ಕೆಲಸಕಾರ್ಯಗಳು ಬಹಳ ದಿನಗಳಿಂದ ಮುಲ್ಕಬಿದ್ದಿರುವುದನ್ನು ಈ ದಿನ ಮಾಡುವುದಕ್ಕೆ ಅವಕಾಶವನ್ನು ಮಾನ್ಯ ಮಂತ್ರಿಗಳು ಕಲ್ಪಿಸಿಕೊಟ್ಟಿದ್ದಾರೆ, ಅದಕ್ಕಾಗಿ ಮೊದಲು ಅವರಿಗೆ ನನ್ನ ಧನ್ಯವಾದಗಳನ್ನು ಅರ್ಪಿಸಬೇಕಾಗಿದೆ.

ಶ್ರೀ ಎಚ್. ಸಿದ್ದವೀರಪ್ಪ.—ನಮ್ಮ ತಾಲ್ಲೂಕಿನಲ್ಲಿ ಏನೂ ಮಾಡಿಲ್ಲವಲ್ಲಾ ?

ಶ್ರೀ ಕೆ. ಎಂ. ಪುಟ್ಟಸ್ವಾಮಿ.—ನೀವು ಮಾಡಿಸಿಕೊಳ್ಳಲಿಲ್ಲ ಅಷ್ಟೆ, ಅದು ನಿಮ್ಮ ತಪ್ಪು.

ಶ್ರೀ ಎಚ್. ಸಿದ್ದವೀರಪ್ಪ.—ಅದು ಹೇಗೆ ಎಂಬುದನ್ನು ಹೇಳಿ ಕೊಡಿ.

ಶ್ರೀ ಕೆ. ಎಂ. ಪುಟ್ಟಸ್ವಾಮಿ.—ನಮ್ಮ ಮಾನ್ಯ ಮಿತ್ರರಿಗೆ ಯಾವಾಗಲೂ 'ಮಾರಿ ಕಣ್ಣು ಹೋತನ ಮೇಲೆ' ಅಂತ ಹೇಳುವ ಹಾಗೆ ಹೇಳುವ ಸ್ವಭಾವವಿದೆಯೇ ವಿನಾ ನಮ್ಮ ಸರ್ಕಾರದವರು ಏನು ಒಳ್ಳೆಯ ಕೆಲಸ ಮಾಡಿದ್ದಾರೆ ಯಾವ ಕೆಲಸ ಮಾಡಲಿಲ್ಲ ಎಂದು ಹೇಳಿ ಸರಿಯಾಗಿ ರಚನಾತ್ಮಕವಾದ ಟೀಕೆಯನ್ನು ಮಾಡುವ ಸ್ವಭಾವ ಅವರಿಗೆ ಇಲ್ಲ. ಸುಮ್ಮನೆ ಯಾವುದೋ ಒಂದು ಟೀಕೆ ಮಾಡಬೇಕು ಮಾಡುತ್ತಾ ಇದ್ದೇವೆ ಎಂಬ ಭಾವನೆಯ ಮೇಲೆ ಅವರು ಇದ್ದಾರೆ, ಅದನ್ನು ದಯವಿಟ್ಟು ಅವರು ಬಿಡಬೇಕು.

ನಮ್ಮ ತಾಲ್ಲೂಕಿನಲ್ಲಿ ಉತ್ತರ ಪಿನಾಕಿನಿ ನದಿ ಇದೆ, ಅದು ಸುಮಾರು ನಮ್ಮ ಊರಿನಲ್ಲಿ ಹುಟ್ಟಿ ಆಂಧ್ರಪ್ರದೇಶಕ್ಕೆ ಹೋಗಿ ಅವರಿಗೆ ಸಹಾಯ ಮಾಡುತ್ತಾ ಇದೆ. ಈ ದಿನ ಚಿಕ್ಕಬಳ್ಳಾಪುರದಲ್ಲಿ ವಾಟರ್ ವರ್ಕ್ಸ್‌ಗೆ ಹಿಂದೆ ನಾವು ಅಲ್ಲಿ ಬಾವಿ ತೆಗೆಸಿ ನೀರು ಕೊಡಬೇಕೆಂದು ಪ್ರಯತ್ನ ಮಾಡಿದೆವು, ಸರ್ಕಾರದವರು ಸುಮಾರು 14 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿ ಈಗ ಕೆಲಸ ನಡೆಯುತ್ತಾ ಇದೆ. ಅಲ್ಲಿ ಆ ಒಂದು ರಿವರ್ ಬೆಡ್‌ನಲ್ಲಿ ಸುಮಾರು 12 ಅಡಿ ಅಗಲದಲ್ಲಿ ಒಂದು ಬಾವಿ ಹಾಕಿ ಸುಮಾರು 10 ಎಚ್. ಪಿ. ಯ 13 ಪಂಪ್ ಸೆಟ್ಟುಗಳಿಂದ 130 ಎಚ್. ಪಿ. ಯಲ್ಲಿ ಆ ಬಾವಿಯಿಂದ ನೀರು ಸರಬರಾಯಿ ಆಗುತ್ತಾ ಇದೆ. ಅಂತಹ ಬಾವಿಗಳಿಂದ ನಮ್ಮ ಊರಿಗೆ ಬೇಕಾದಷ್ಟು ನೀರು ಕೊಡುವುದಕ್ಕೆ ಶಕ್ತಿ ಇದೆ. ಉತ್ತರ ಪಿನಾಕಿನಿ ನದಿ ದಂಡೆಮೇಲೆ ಮೈನರ್ ಇರಿಗೇಷನ್ ಅಂತ ಹೇಳಿ 10–12 ಬಾವಿಗಳನ್ನು ತೆಗೆಸಿದರೆ 1500–2000 ಎಕರೆಯಷ್ಟು ಬೆಳೆ ಅಲ್ಲಿ ತೆಗೆಯಬಹುದು. ಈಗ ಸುಮಾರು 6 ಲಕ್ಷ ರೂಪಾಯಿಗಳನ್ನು ನಮ್ಮ ಜಿಲ್ಲೆಗೆ ಫ್ಯಾಮಿನ್ ರಿಲೀಫ್ ವರ್ಕ್ಸ್‌ಗಾಗಿ ಕೊಟ್ಟಿದ್ದೀರಿ, ಅದರಲ್ಲಿ 40–50 ಸಾವಿರ ರೂಪಾಯಿ ಮಾತ್ರ ಖರ್ಚಾಗಿದೆ. ಇನ್ನು ಬಾಕಿಯದು ಖರ್ಚಾಗಿಲ್ಲ. ಅಲ್ಲಿ ಬಾವಿಗಳನ್ನು ಕಟ್ಟಿ ಆ ರಿವರ್ ಬೆಡ್ ಮೇಲೆ ಇರತಕ್ಕ ಖುಷ್ಕಿ ಜಮೀನಿಗೆ ನೀರು ಕೊಟ್ಟರೆ ಬೇಕಾದಷ್ಟು ದವಸ ನಮ್ಮ ತಾಲ್ಲೂಕಿನಲ್ಲಿ ಬೆಳೆದುಕೊಳ್ಳಬಹುದು. ಮಾನ್ಯ ಲೋಕೋಪಯೋಗಿ ಮಂತ್ರಿಗಳು ಆ ಕೆಲಸವನ್ನು ಜಾಗ್ರತೆ ಮಾಡಿಸಿಕೊಡಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀಶೈಲ ಮತ್ತು ಗುಟ್ಟಹಳ್ಳಿಯಲ್ಲಿ ವೆಂಕಟರಮಣಸ್ವಾಮಿ ಗುಡಿ ಇದೆ. ಹಿಂದೆ ಇವು ಎರಡಕೂ ಒಂದೇ ಸಲ ಎಸ್ಟಿಮೇಟು ತಯಾರು ಮಾಡಿದ್ದರು ಕೆಲಸ ತೆಗೆದುಕೊಳ್ಳಬೇಕೆಂದು ಹೇಳಿದ್ದರು. ಗುಟ್ಟಹಳ್ಳಿಯಲ್ಲಿರತಕ್ಕ ದೇವಸ್ಥಾನದಿಂದ ಅಲ್ಲಿ ಛತ್ರ ಕಟ್ಟುವುದಕ್ಕೆ 10–12 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಶ್ರೀಶೈಲಕ್ಕೆ ಸುಮಾರು 3 ಲಕ್ಷದ 50 ಸಾವಿರ ಜನರು ಒಂದು ವರ್ಷಕ್ಕೆ ನಮ್ಮ ಮೈಸೂರು ದೇಶದಿಂದ ಯಾತ್ರಾರ್ಥಿಗಳು ಹೋಗುತ್ತಾ ಇದ್ದಾರೆ. ಅಲ್ಲಿ ನಮಗೆ ಅನುಕೂಲವಾಗಿರತಕ್ಕ ಛತ್ರ ಆಗಿಲ್ಲ. ಮಾಡಿದ್ದೇವೆ, ಕಳಿಸಿದ್ದೇವೆ ಅಂತ ಹೇಳುವುದರಲ್ಲಿ ಅರ್ಥವಿಲ್ಲ. ಮಾನ್ಯ ಲೋಕೋಪಯೋಗಿ ಮಂತ್ರಿಗಳು ಜಾಗ್ರತೆ ಅಲ್ಲಿ ಛತ್ರ ಕಟ್ಟಿಸಿ ಕೊಡುತ್ತಾರೆ ಎಂದು ನಂಬುತ್ತೇನೆ.

ಚಿಕ್ಕ ಕೆರೆಗಳನ್ನು ತಾಲ್ಲೂಕು ಬೋರ್ಡಿನವರಿಗೆ ವಹಿಸಿದ್ದೇವೆ ಎಂದು ಹೇಳುತ್ತಾರೆ, ಅನೇಕ ಕೆರೆಗಳು ಬಹಳ ಹಿಂದಿನ ಕೆರೆಗಳು, 10–15–20 ಎಕರೆ ನೀರಾವರಿಯಾಗತಕ್ಕ ಕೆರೆಗಳು ಒಡೆದು ಹೋದ ಅನೇಕ ಕೆರೆಗಳು ಇವೆ ಅವನ್ನು ತಾಲ್ಲೂಕು ಬೋರ್ಡಿನವರಿಗೆ ವಹಿಸಿದ್ದೀರಿ. ಅವರು ಮಾಡುವುದಿಲ್ಲ, ಅದು ಅವರಿಂದ ಮಾಡುವುದಕ್ಕೆ ಸಾಧ್ಯವಿಲ್ಲ, ಕಾರಣ ಅವರಿಗೆ ಸರಿಯಾದ ಸಿಬ್ಬಂದಿ ಇಲ್ಲ,

ಮತ್ತೊಂದು ಇಲ್ಲ. ಆದ್ದರಿಂದ ಚಿಕ್ಕಕೆರೆಗಳಿಂದ ಹಿಡಿದು ದೊಡ್ಡ ಪ್ರಾಜೆಕ್ಟುಗಳವರೆಗೂ ಪಿ. ಡಬ್ಲ್ಯೂ. ಡಿ. ಅವರೇ ತೆಗೆದುಕೊಂಡು ಅವನ್ನು ಜಾಗ್ರತೆ ಮಾಡಿಸಿಕೊಟ್ಟರೆ ನಮ್ಮ ಕ್ಷಾಮ ಜಿಲ್ಲೆಗಳಿಗೆ ಮಹದು ಪಕಾರ ಮಾಡಿದಂತಾಗುತ್ತದೆ ಎಂದು ಮಾನ್ಯ ಮಂತ್ರಿಗಳವರಲ್ಲಿ ಬಿನ್ನೈಸಿಕೊಳ್ಳುತ್ತೇನೆ.

ವಿದ್ಯುಚ್ಛಕ್ತಿ ವಿಚಾರವಾಗಿ ಒಂದೆರಡು ಮಾತುಗಳನ್ನು ಆಡಬೇಕೆಂದು ಇದ್ದೇನೆ. ಸುಮಾರು ನಾಲ್ಕೂವರೆ ಪೈಸೆ ದಂತೆ ನಾವು ಮದರಾಸು ಮತ್ತು ಇತರರಿಗೆ ಮಾರಾಟ ಮಾಡುತ್ತಾ ಇದ್ದೇವೆ. ನಮ್ಮಲ್ಲಿ ಉಪಯೋಗಮಾಡತಕ್ಕವರಿಗೆ 12 ಪೈಸೆಯಂತೆ ಕೊಡುತ್ತಾ ಇದ್ದೇವೆ. ಪುನಃ ಈಗ ಒಂದು ಎಚ್. ಪಿ. ಗೆ ಸಾವಿರ ರೂಪಾಯಿ ಕೊಡಬೇಕೆಂದು ಕಾನೂನು ಮಾಡಬೇಕೆಂದು ಇದ್ದಾರೆ, ಆ ರೀತಿ ಮಾಡಬಾರದು. ಏಕೆಂದರೆ ರೈತನಿಗೆ ಬಾವಿ ಕಟ್ಟಿಸುವುದಕ್ಕೆ ಸರ್ಕಾರದವರು ಸಾಲ ಕೊಡುತ್ತಾರೆ, ಪಂಪ್ ಸೆಟ್ಟುಗಳನ್ನು ಹಾಕುವುದಕ್ಕೆ ಸಾಲ ಕೊಡುತ್ತಾರೆ, ಜಮೀನು ಸಾಗುವಳಿ ಮಾಡುವುದಕ್ಕೆ ಸಾಲ ಕೊಡುತ್ತಾರೆ, ಹೀಗೆ ಸಾಲಗಳನ್ನು ಕೊಡುತ್ತಾ ಇರುವಾಗ ತಿರುಗಿ ಒಂದು ಎಚ್. ಪಿ. ಗೆ ಒಂದು ಸಾವಿರ ರೂಪಾಯಿ ಹಾಕುವುದಾದರೆ ಅದನ್ನು ಕೊಡುವುದಕ್ಕೆ ಯಾವ ರೈತ ಮುಂದೆ ಬರುತ್ತಾನೆ ? ಅತನಿಗೆ ತಾವು ಯಾವ ರೀತಿಯ ಪ್ರೋತ್ಸಾಹ ಕೊಟ್ಟಂತಾಗುತ್ತದೆ ? ಆದ್ದರಿಂದ ಇದನ್ನು ಕೈ ಬಿಡಬೇಕೆಂದು ಮಾನ್ಯ ವಿದುಚ್ಛಕ್ತಿ ಮಂತ್ರಿಗಳವರಿಗೆ ನಾನು ಬೇಡಿಕೊಳ್ಳುತ್ತೇನೆ. ಇನ್ನೂ ಹೆಚ್ಚು ಕರೆಂಟು ಕೊಟ್ಟು ಮತ್ತು ಬಾವಿಗಳಿಗೆ ಪಂಪ್ ಸೆಟ್ಟುಗಳನ್ನು ಕೊಟ್ಟು ಅದಕ್ಕೆ ಆಗಬೇಕಾದ ಕೆಲಸಕಾರ್ಯಗಳನ್ನು ಇನ್ನೂ ಹೆಚ್ಚಾಗಿ ಮಾಡಿಸಿಕೊಡಬೇಕೆಂದು ಮಾನ್ಯ ಪಬ್ಲಿಕ್‌ವರ್ಕ್ಸ್ ಮಿನಿಸ್ಟರವರನ್ನು ಕೇಳಿಕೊಳ್ಳುತ್ತೇನೆ. ನಮ್ಮ ಜಿಲ್ಲೆ ಯಾವಾಗಲೂ ಅಭಾವ ಪೀಡಿತವಾದದ್ದು, ಕೋಲಾರ, ಚಿತ್ರದುರ್ಗ ಮತ್ತು ತುಮಕೂರು ಈ ಮೂರು ಜಿಲ್ಲೆಗಳು ಒಂದು ಕಾಲದಲ್ಲಿ ದೇಖೀಲು 20–30 ಇಂಚು ಮಳೆ ಬಂದಿಲ್ಲ. ಒಂದು ವರ್ಷ ಚೆನ್ನಾಗಿದ್ದರೆ ಎರಡು ವರ್ಷ ಬರಗಾಲ ಇರುತ್ತದೆ. ಅಲ್ಲಿ ಕಂದಾಯವನ್ನಂತೂ ಹೇಳುವುದಕ್ಕೇ ಸಾಧ್ಯವಿಲ್ಲ. ಇದರ ಮೇಲೆ ಒಂದು ಎಚ್. ಪಿ. ಗೆ ಒಂದು ಸಾವಿರ ರೂಪಾಯಿ ಕೊಡಬೇಕೆಂದರೆ ಎಲ್ಲಿಂದ ರೈತ ತರುವುದು ? ಆದ್ದರಿಂದ ನಾನು ಮೊದಲೇ ಹೇಳಿದಂತೆ ಇದನ್ನು ಕೈಬಿಡಬೇಕೆಂದು ಹೇಳುತ್ತೇನೆ.

ನಮ್ಮ ಡಿಸ್ಟ್ರಿಕ್ಟ್‌ನಲ್ಲಿ ಸಣ್ಣ ನೀರಾವರಿ ಕೆಲಸಗಳು ಮತ್ತು ಬಾವಿಗಳು ಇನ್ನೂ ಅನೇಕ ಕೆಲಸಗಳನ್ನು ಪಿ. ಡಬ್ಲ್ಯೂ. ಡಿ. ನವರೇ ತಗೆದುಕೊಂಡು ರೈತರಿಗೆ ಏನು ಅನುಕೂಲ ಆಗಬೇಕೋ ಅದನ್ನು ಮಾನ್ಯ ಮಂತ್ರಿಗಳವರು ಮಾಡಿಸಿಕೊಡಬೇಕೆಂದು ಅವರಲ್ಲಿ ಪ್ರೀತಿಯಿಂದ ಕೇಳಿಕೊಳ್ಳುತ್ತೇನೆ.

[CHAIRMAN (SMT. NAGARATHNAMMA HIREMATH) in the Chair].

ಒಬ್ಬ ಮಾನ್ಯ ಸದಸ್ಯರು.—ಜಕ್ಕಲಮಡಗು ಪ್ರಾಜೆಕ್ಟ್ ವಿಚಾರ ಹೇಳಿ, ಸ್ವಾಮಿ.

ಶ್ರೀ ಕೆ. ಎಂ. ಪುಟ್ಟಸ್ವಾಮಿ.—ಆ ಕೆಲಸ ಈಗಾಗಲೇ ಆರಂಭವಾಗಿದೆ ಅದು ನಡೆಯುತ್ತಾ ಇದೆ. ಕಂಟ್ರಾಕ್ಟ್ ಕೊಟ್ಟಿದ್ದಾರೆ. ಅದನ್ನು ನಾವು ನೋಡುತ್ತಾ ಇದ್ದೇವೆ. ಅದಕ್ಕಾಗಿ ಮಾನ್ಯ ಮಂತ್ರಿಗಳಿಗೆ ನಮ್ಮ ಧನ್ಯವಾದಗಳು. ನಮ್ಮ ಚಿಕ್ಕಬಳ್ಳಾಪುರ ತಾಲ್ಲೂಕಿನವರು ಮಾನ್ಯ ಪಿ.ಡಬ್ಲ್ಯೂ. ಡಿ. ಮಿನಿಸ್ಟರ್‌ರವರಿಗೆ ಅದಕ್ಕಾಗಿ ಕೃತಜ್ಞರಾಗಿದ್ದೇವೆ ಎಂದು ಜನರ ಪರವಾಗಿ ಹೇಳುತ್ತಾ ಇದ್ದೇನೆ, ಇಷ್ಟು ಹೇಳಿ ಅಧ್ಯಕ್ಷಿಣಿಯವರು ಒಂದೆರಡು ಮಾತುಗಳನ್ನಾಡುವುದಕ್ಕೆ ಅವಕಾಶ ಕೊಟ್ಟದ್ದಕ್ಕಾಗಿ ಅವರಿಗೆ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಪಿ. ನಾಡಗೌಡ (ಮುಧೋಳ್)—ಮಾನ್ಯ ಅಧ್ಯಕ್ಷಿಣಿಯವರೇ, ಈ ಲೋಕೋಪಯೋಗಿ ಶಾಖೆಯ ಬೇಡಿಕೆಗಳಲ್ಲಿ ಕೆಲವನ್ನು ಮಾತ್ರ ವಿವರಿಸುತ್ತಾ ಕೆಲವು ವಿಚಾರಗಳನ್ನು ಈ ಸಭೆಯ ಗಮನಕ್ಕೆ ತರಬಯಸುತ್ತೇನೆ. ಮುಖ್ಯವಾಗಿ ನಮ್ಮ ರಾಜ್ಯದ ಬೊಕ್ಕಸದಿಂದ ಅರ್ಧದಷ್ಟು ಹಣವನ್ನು ಈ ಲೋಕೋಪಯೋಗಿ ಶಾಖೆಯ ಮುಖಾಂತರವಾಗಿ ಖರ್ಚು ಮಾಡುತ್ತಾ ಇದ್ದಾರೆ ಇಷ್ಟೊಂದು ಪ್ರಮಾಣದಲ್ಲಿ ಖರ್ಚು ಮಾಡುತ್ತಾ ಇರುವ ಶಾಖೆ ಹೇಗಿರಬೇಕು ? ಇದರಲ್ಲಿ ಏನೇನು ನ್ಯೂನತೆಗಳಿವೆ ಎನ್ನುವುದನ್ನು ಈ ಪ್ರಸಂಗದಲ್ಲಿ ಹೇಳಿದರೆ ತಪ್ಪಾಗಲಿಕ್ಕಿಲ್ಲ ಎಂದು ತಿಳಿಸಬಯಸುತ್ತೇನೆ. ಈ ಲೋಕೋಪಯೋಗಿ ಶಾಖೆಗೆ ಕ್ಯಾನ್ಸರ್ ರೋಗ ಹತ್ತಿಕೊಂಡಿದೆ. ಇದನ್ನು ಮಾನ್ಯ ಮಂತ್ರಿಗಳು ಈಗಾಗಲೇ ಅರಿತಿರಬಹುದು. ಇದರಲ್ಲಿ ದಕ್ಷತೆ ಪ್ರಾಮಾಣಿಕತೆ ಉಳಿದಿರುವುದಿಲ್ಲ. ಈ ಶಾಖೆಯ ಬಗ್ಗೆ ಒಂದು ಮಾತನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತೇನೆ.

(ಶ್ರೀ ಕೆ. ಪಿ. ನಾಡಗೌಡ)

ಬೆಳಗಾಂವಿ ಸರ್ಕಲ್‌ನಲ್ಲಿ ಕೆಲಸ ಮಾಡತಕ್ಕಂಥ ಸೂಪರಿಂಟೆಂಡಿಂಗ್ ಇಂಜನಿಯರ್ ಮೊದಲು ಇದು ಮುಂಬಯಿನಲ್ಲಿ ಇರುವಾಗ 10 ಲಕ್ಷ ರೂಪಾಯಿಯ ಟೀಕ್‌ವುಡ್‌ನ್ನು ಬೇರೆ ಕಡೆಗೆ ಸಾಗಿಸಿ ಸರ್ಕಾರಕ್ಕೆ ಹೇರಳವಾಗಿ ಲುಕ್ಸಾನು ಮಾಡಿದರು. ಅವರ ಮೇಲೆ ಈ ಅಪಾದನೆ ಇದ್ದು ತನಿಖೆ ಮಾಡುತ್ತಾ ಇರುವಾಗ, ಇಲ್ಲಿ ಅವರಿಗೆ ಪ್ರಮೋಷನ್ ಕೊಟ್ಟರು. ಅವರಿಗೆ ಈ ಎಕ್ಸಿಕ್ಯೂಟೀವ್ ಕೆಲಸದಲ್ಲಿ ದಕ್ಷತೆ ಇಲ್ಲ, ಯೋಗ್ಯತೆ ಇಲ್ಲ ಎಂದು ಅವರನ್ನು ಬೇರೆ ಕಡೆಯಲ್ಲಿ ಇಟ್ಟಿದ್ದರು. ಆದರೂ ಕೂಡ ಅವರನ್ನು ಪುನಃ ಬೆಳಗಾಂವಿಗೆ ಸೂಪರಿಂಟೆಂಡಿಂಗ್ ಇಂಜನಿಯರ್ ಆಗಿ ನೇಮಿಸಿದ್ದಾರೆ. ಆವರು ಮಾಡಿರುವ ಕೆಲಸ ಏನು ? ಹಿಂದೆ ಮಾನ್ಯ ಮಂತ್ರಿಗಳು ಬಿಜಾಪುರಕ್ಕೆ ಬಂದಾಗ ಮುಧೋಳ್ ಬ್ರಿಡ್ಜ್ ಓಪನಿಂಗ್‌ಗೆ ಬರುವಂತೆ ಪ್ರಾರ್ಥಿಸಿಕೊಂಡರು. ಆಮೇಲೆ ಇನ್ನೂ ಎರಡು ತಿಂಗಳವರೆಗೆ ಬ್ರಿಡ್ಜ್ ಕೆಲಸ ಮಾಡಬೇಕಾಗಿರುವುದನ್ನು, 8 ದಿವಸದಲ್ಲಿ ಮುಗಿಸಬೇಕೆಂದು ಎಕ್ಸಿಕ್ಯೂಟೀವ್ ಇಂಜನೀಯರು ಅಸಿಸ್ಟೆಂಗ್ ಇಂಜನೀಯರಿಗೆ ಅದೇಶ ಕೊಟ್ಟು ಅವಸರವಸರವಾಗಿ ಹಗಲೂ ರಾತ್ರಿಯೂ ಕೆಲಸ ಮಾಡಿಸಿ ಮುಗಿಯುವುದಕ್ಕೆ ಬರುತ್ತಾ ಇತ್ತು. ಈ ಅವಸರದ ಕೆಲಸದಿಂದಾಗಿ ಬ್ರಿಡ್ಜ್ ಮೇಲೆ ಇರುವ ಗಾರ್ಡ್ ಪಿಲ್ಲರ್ಸ್ ಮುರಿದುಹೋಗಿದೆ. ಓವರ್ ಸ್ಪೈಜ್ ಪೈಪ್ಸ್ ಹಾಕಿದ್ದಾರೆ. ಅಂತಹವರನ್ನು ಈ ಜಿಲ್ಲೆಗೆ ಹಾಕಿದ್ದೀರಿ. ಅವರನ್ನು ಬೇಕಾದರೆ ಗುಲ್ಬರ್ಗ ಡಿವಿಷನ್‌ಗೆ ಹಾಕಿಕೊಂಡು ಅಲ್ಲಿಗೆ ಬೇರೆಯವರನ್ನು ಹಾಕಿಕೊಡಿರಿ.

ಆಮೇಲೆ ಘಟಪ್ರಭಾ ಅಣೆಕಟ್ಟು ನಿರ್ಮಾಣ ಕಾರ್ಯ ತೀವ್ರಗತಿಯಿಂದ ನಡೆದಿದೆಯೆಂದು ಸ್ವತಃ ನೋಡಿ ಬಂದಿದ್ದೇನೆ. ಇದರ ವಿಷಯವಾಗಿ ಮಾನ್ಯ ಮಂತ್ರಿಗಳ ಗಮನಕ್ಕೆ ಒಂದು ಮಾತನ್ನು ತರಬಯಸುತ್ತೇನೆ. ಹಿಡಕಲ್ ಹತ್ತಿರ ಇನ್ನು 2–3 ವರ್ಷಗಳಲ್ಲಿ ಡ್ಯಾಮ್ ಆಗಬಹುದು ಆಮೇಲೆ ನೀರಿನ ಸಂಚಾರಕ್ಕೆ ಬಲದಂಡೆ ಛಾನಲ್ ಮಾಡಬೇಕಾಗಿರುವುದರಿಂದ ಬಲದಂಡೆ ಕಾಲುವೆಯನ್ನು ಅಗೆಸುವುದಾದರೆ ಸುಮಾರು ಹಣ ಆಗುತ್ತದೆ. ಈಗ ಬಲದಂಡೆಗೆ ಒಂದು ಸುರಂಗ ಮಾರ್ಗವನ್ನು ಶೀಘ್ರಗತಿಯಿಂದ ಮಾಡಿದರೆ ಬಲದಂಡೆಯ ರೈತರಿಗೆ ತುಂಬಾ ಅನುಕೂಲವಾಗುತ್ತದೆಂದು ಭಿನ್ನವಿಸಿಕೊಳ್ಳುತ್ತೇನೆ. ಆದರೆ ಈ ವರ್ಷದ ಬಡ್ಜೆಟ್ಟಿನಲ್ಲಿ ಇದರ ಬಗ್ಗೆ ಏನೂ ವ್ಯವಸ್ಥೆ ಮಾಡಿದಂತೆ ತೋರುವುದಿಲ್ಲ, ಮುಧೋಳ್ ತಾಲ್ಲೂಕಿನ ರಸ್ತೆಯಲ್ಲಿ 3 ಹಳ್ಳಗಳು ಇವೆ. ಇದರಿಂದ ವಾಹನ ಸಂಚಾರಕ್ಕೆ 4 ತಿಂಗಳಿನಿಂದಲೂ ತೊಂದರೆಯಾಗಿದೆ. ಈ ವಿಷಯ ಅಲ್ಲಿನ ಸದಸ್ಯರಾದ ಶ್ರೀಮಾನ್ ದೇಸಾಯಿ ಅವರಿಗೆ ಗೊತ್ತು. ಅವರು ಹೋಗಬೇಕಾದರೆ 10–15 ಮೈಲು ಬಳಸಿಕೊಂಡು ಹೋಗಬೇಕು. ಇದಕ್ಕೆ ಒಂದು ಲಕ್ಷ ರೂಪಾಯಿ ಆಗಬಹುದು. ಈ ಬಡ್ಜೆಟ್ಟಿನಲ್ಲಿ ಸೇರಿಸಿದಂತೆ ತೋರುವುದಿಲ್ಲ. ಆದ್ದರಿಂದ ಇದರ ಬಗ್ಗೆ ಗಮನ ಕೊಡಬೇಕು ಎಂದು ಭಿನ್ನವಿಸಿಕೊಳ್ಳುತ್ತೇನೆ.

ಮುಧೋಳ ಚಿಕ್ಕೋಡಿ ರೋಡ್, ಜಮಖಂಡಿ-ಕುಡಚಿ ಹತ್ತಿರ ಇರುವ ರೈಲ್ವೆಸ್ಟೇಷನ್ ರೋಡ್ ಮಾಲಿಂಗಪುರ ಇವುಗಳಿಗೆ ರಿಪೇರಿ ಇಲ್ಲ, ಮೆಟಲಿಂಗ್ ಇಲ್ಲ. ಇದು 36 ಮೈಲ ಉದ್ದದ ರಸ್ತೆ. ಇದನ್ನು ಮುಧೋಳ್ ಸಬ್‌ಡಿವಿಷನ್‌ಗೆ ಸೇರಿಸಿ. ಕುಡಚಿಯನ್ನು ಜಮಖಂಡಿ ಸಬ್‌ಡಿವಿಷನ್‌ಗೆ ಸೇರಿಸಿ. ಆ ಗ್ರಾಮಗಳಲ್ಲಿ 10 ವರ್ಷಗಳಿಂದಲೂ ಯಾವ ರಸ್ತೆಯೂ ಹೊಸದಾಗಿ ರಿಪೇರಿ ಆಗಿಲ್ಲ ಎಂದು ತಮ್ಮ ಗಮನಕ್ಕೆ ತರಬಯಸುತ್ತೇನೆ. ಆದುದರಿಂದ ಕುಡಚಿಯನ್ನು ಜಮಖಂಡಿ ಸಬ್ ಡಿವಿಷನ್‌ಗೆ ಒಪ್ಪಿಸಿಕೊಡಬೇಕು ಎಂದು ಬೇಡಿಕೊಳ್ಳುತ್ತೇನೆ. ಆ ಹಳ್ಳಿಗಳ ಜನ ಒಳ್ಳೆಯವರು. ಅದೂ ಅಲ್ಲದೆ ಈ ಗ್ರಾಮಾಂತರ ಪ್ರದೇಶಗಳಲ್ಲಿ ಯಾವ ಹೊಸ ರಸ್ತೆಗಳನ್ನೂ ಈ ವರ್ಷದ ಬಡ್ಜೆಟ್ಟಿನಲ್ಲಿ ಸೇರಿಸಿಲ್ಲ. ಆದುದರಿಂದ ಈ ವರ್ಷ 18 ಮೈಲಿಯಾದರೂ ಸೇರಿಸಿಕೊಳ್ಳುತ್ತಾರೆಂದು ಹೇಳಿ ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷಿಣಿಯವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† **Sri H. C. LINGA REDDY** (Malur).—Madam Chairman, It is with great pleasure I rise to welcome the Demands of the Hon'ble Minister for Public Works amounting to as much as about Rs. 93 crores. While so doing, I would like to say a few words. I am glad that the Department has been doing very good work in the State with regard to the several schemes that have been taken up under the several items of programme that come within his purview, the Public Works and Electricity. But, it is necessary that a survey has to be made with regard to the Minor irrigation programme that has to be executed, because a large

track of our State comes under the arid zone—Bangalore, Tumkur, Kolar, Bellary and many other districts in the new Mysore area also.

3-00 P.M.

But most of the minor tanks are in the old Mysore area. There are, as many as, 41,000 tanks. Of these, about 166 come under the jurisdiction of Taluk Boards. They have neither funds nor staff. They are given away to the Taluk Boards as though the Public Works Department is not in a position to manage them. I wish when they transfer these tanks to the Taluk Boards they make available sufficient funds and staff to the Taluk Boards, and when the Taluk Boards are not in a position to do any work with regard to those tanks whose atchkat would be below 10 acres no purpose would serve by transferring them to Taluk Boards, though founds are there. Therefore, it is necessary that sufficient funds are made available for this purpose. As regards tanks managed by the Revenue Department, the Hon'ble Finance Minister in his speech said that only those works which were taken up would be completed and about 4 crores had been provided for completion of these tanks. But there are a number of other works which are not taken up at all. They would require lot of money for repairs also. Tank is very important because unless there is water in these small tanks sub-soil water cannot be tapped through well programme that has been taken up by the Co-operation Department in the several tanks of these arid area. Under the Majar Irrigation programme, very meagre amounts are provided for the Upper Krishna and many other major irrigation schemes and medium irrigation schemes and also for hydel projects in the State. There is paucity of funds for taking up of other minor irrigation works or major irrigation works, if we go on depending upon the Central Government for funds. At the rate of 50 lakhs if we set-apart for Upper Krishna every year for the scheme estimated to cost 120 crores we do not know when we will be in a position to complete it. It will take a few decades. On an average we have 9.2 per cent of irrigation, while in Andhra it is 45 per cent, in Madras 25 per cent and the All India average is more than 20 per cent and though our State is stated to be a model State, we have a veay low percentage in respect of irrigation. It is high time that our State makes up its mind to float some debentures and raise sufficient funds and build up irrigation. If we go on depending upon the Central Government for meagre sums, we will not be in a position to carry out either minor irrigation programme or major irrigation programme within the next foreseeable few decades. Therefore, just as the Land Mortgage Bank has been raising debentures, now and then and has been making money available in plenty for irrigation wells throughout our State, in a similar manner we should raise debentures, through L.I.C. and through several Scheduled Banks and many other financial agencies we should build up a sizeable irrigation development in our State. It is only that way we will be in a position to make sufficient funds available for carrying out of either minor irrigation schemes or major irrigation schemes.

(SRI H. C. LINGA REDDY)

Another suggestion I would like to make is that we have been, now and then urging the Central Government to take up the bigger schemes either electrical or irrigation. Schemes costing 20 crores and above should be made Centrally sponsored schemes and they should become national schemes. These schemes should be taken up by Central Government just as the Nagarjunasagar Project and the Bhakranangal Project and some other projects were taken up by |the Central Government. In the same manner schemes like the Upper Krishna and some other schemes in our State should be financed by Central Government.

Sri H. D. DEVE GOWDA.—In the case of Nagarjunasagar in the initial stage, the State Government has sufficiently put up funds from their own resources.

Sri H. C. LINGA REDDY.—That we are not in a position to do because our funds are meagre. Therefore the Central Government should be made to come to the rescue of our State, so far as these bigger projects are concerned.

With regard to the availability of electricity we are making available power at cheaper rates to neighbouring States like Madras, Kerala and of late Goa and when we are producing enough electricity in our own State the first priority should be given to our ryots for improvement of agriculture for improvement of our industries and for other purposes within our own State. We should make power available at cheaper rate to our own people first of all and then make it available at a little higher rate to others. But we see it is done in a reverse direction. We are giving it at cheaper rates to others and at higher rates to our own people in the State. Heavy sums have been invested in the Sharavathy Valley Project and so much power is available, first of all, we should see that power is fully utilised by our own people within our State and the surplus power, if any, should be made available to others at a higher rate than what it is charged for our own people. The point urged by several members regarding payment of 1,000 rupees per H.P. for taking power before they take power for their irrigation pump-sets. It would work very adversely and that would be very arbitrary and very unjust and will upset agricultural production programme in the State and just at the time when the programme is picking up in our country.

With regard to well irrigation programme and servicing of pumsets, if we insist upon the payment of thousand rupees per H. P. I think the programme will be retarded to a very great extent and therefore Sir, its is very necessary that the Government has to revise its own orders, if they are thinking of enforcing this order and as I suggested earlier even here just as the Land Development Banks is raising funds by debentures we can also raise funds.

With regard to the development of river valley and carring out of several schemes it is necessary that we should have river boards, for Cauvery River, Ghataprabha river, Upper Krishna river etc., The river boards should consist of expert engineers and administrators to prepare plans and execute the same, and also to regulate and maintain the river schemes in several rivers. These river boards should be set-up so that problems of the kind that have arisen with regard to the Krishna-Godavari waters dispute could be more easily settled. With these few words, I welcome these demands.

ಶ್ರೀ ಎಂ. ಬಸವರಾಜು (ಕೃಷ್ಣರಾಜನಗರ).—ಸನ್ಮಾನ್ಯ ಅಧ್ಯಕ್ಷಣಿಯರೇ, ನಾನು ಈಗ ಈ ಪಿ. ಡಬ್ಲ್ಯು. ಡಿ. ಡಿಮ್ಯಾಂಡಿನ ಮೇಲೆ ಮಾತನಾಡುವುದಕ್ಕೆ ಮುನ್ನ ಸರ್ಕಾರದವರು ನಮ್ಮ ರಾಜ್ಯದಲ್ಲಿನ ರೈತರಿಗೆ ಒಂದು ಹೆಚ್ಚಿನ ನೆರವನ್ನು ಮಾಡಿಕೊಟ್ಟಿರುವುದರಿಂದ ನಾನವರಿಗೆ ನನ್ನ ಅಭಿನಂದನೆಗಳನ್ನರ್ಪಿಸಬೇಕಾಗಿದೆ. ಅಂಥ ಒಂದು ಅನುಕೂಲವೇನು ಎಂದರೆ, ನಮ್ಮ ಇಂಡಿಯಾ ದೇಶದಲ್ಲಿ ಇರತಕ್ಕ ಒಟ್ಟು 14 ರಾಜ್ಯಗಳಲ್ಲಿ ಕಬ್ಬನ್ನು ಬೆಳೆಯತಕ್ಕ ವಿಚಾರದಲ್ಲಿ ನಮ್ಮ ಮೈಸೂರು ರಾಜ್ಯವು ಎರಡನೆಯದೋ ಅಥವಾ ಮೂರನೆಯದೋ ಸ್ಥಾನವನ್ನು ಗಳಿಸಿದೆ. ಇದು ಬಹಳ ಸಂತೋಷದ ವಿಷಯ. ಇದು ನಮ್ಮ ದೇಶದ ರೈತರ ಹಿತಚಿಂತನೆಯನ್ನು ಸಾಧಿಸತಕ್ಕಂಥ ಕೆಲಸ. ಅದಕ್ಕಾಗಿ ನಾನು ಅವರಿಗೆ ನನ್ನ ಅಭಿನಂದನೆಗಳನ್ನರ್ಪಿಸುತ್ತೇನೆ.

ಒಂದು ಕಡೆಯಲ್ಲಿ ಪಂಚ ತಂತ್ರದ ಕರ್ತೃ ಹೀಗೆ ಹೇಳಿದ್ದಾನೆ :—ಎಲ್ಲಿ ದೌರ್ಬಲ್ಯ ಮತ್ತು ದಾರಿದ್ರ್ಯ ಇರುತ್ತವೋ ಅಲ್ಲಿ ಅವು ಅವರಿಗೆ ವಿಧಿಸಲ್ಪಟ್ಟ ಮರಣದಂಡನೆಗಳಿದ್ದ ಹಾಗೆ—ಎಂಬುದಾಗಿ ಹೇಳಿದ್ದಾನೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದ ಇತ್ತೀಚೆಗೆ ಮೈಸೂರಿನ ಒಂದು ಮುಖಂಡತ್ವದಲ್ಲಿ ಒಂದು ಇಂಥಾ ದೌರ್ಬಲ್ಯವಿದೆ ಎಂಬುದು ನಮಗೆ ಕಂಡುಬಂದಿದೆ. ಇದನ್ನು ಸಿದ್ಧಪಡಿಸುವುದಕ್ಕೆ ನಾವು ಬಹಳ ದೂರ ಹೋಗಬೇಕಾಗಿಲ್ಲ. ನಮ್ಮ ಈ ದೌರ್ಬಲ್ಯವನ್ನು ಆ ಕೇಂದ್ರ ಸರ್ಕಾರದವರು ಉಪಯೋಗಿಸಿಕೊಂಡು ನಮ್ಮ ಗಮನವನ್ನೆಲ್ಲಾ ಬೇರೊಂದು ಕಡೆಗೆ ಸೆಳೆದುಕೊಂಡು ನಮ್ಮ ಕಾಲಹರಣ ಆಗುವಂತೆ ಅವರು ಕೆಲಸಗಳನ್ನು ಮಾಡುತ್ತಿದ್ದಾರೆ. ಈ ದಿವಸ ನಾವು ಯಾವ ಒಂದು ವಿಚಾರವನ್ನೇ ತೆಗೆದುಕೊಳ್ಳಲಿ ಮೈಸೂರಿಗೂ ಮತ್ತು ಮದ್ರಾಸಿಗೂ ನದಿ ನೀರಿನ ಹಂಚಿಕೆ ವಿಚಾರದಲ್ಲಿ ಮೊನ್ನೆತಾನೆ ಇದೇ ಸಭೆಯಲ್ಲಿ ಒಂದು ಪ್ರಶ್ನೆಗೆ ಉತ್ತರವನ್ನು ಕೊಡತಕ್ಕ ಕಾಲದಲ್ಲಿ ನಮ್ಮ ಪಿ.ಡಬ್ಲ್ಯು.ಡಿ. ಮಂತ್ರಿಗಳು ಉತ್ತರ ಕೊಡುತ್ತಾ ಆ ಹಾರಂಗಿ ನೀರಿನ ಷೇರಿನ ವಿಚಾರದಲ್ಲಿ, ಅದು ನಾನ್ ಷೆಡ್ಯೂಲ್ ರಿವರ್ ಆಗಿದ್ದರೂ, ಮತ್ತು 1924 ರ ಅಗ್ರಿಮೆಂಟಿಗೆ ಒಳಪಡತಕ್ಕ ನದಿಯಾಗದಿದ್ದರೂ ಅದನ್ನು ಉಪಯೋಗ ಮಾಡತಕ್ಕ ವಿಚಾರದಲ್ಲಿ ನಮ್ಮ ಸರ್ಕಾರದವರು ಕೇಂದ್ರಕ್ಕೆ ಬರೆದಿದ್ದರೆ ಅವರು ಅದನ್ನು ಅಲ್ಲಿಂದ ಮದ್ರಾಸಿಗೆ ಅವರ ಒಪಿನಿಯನ್‌ಗೆ ಕಳುಹಿಸಿದ್ದಾರೆ. ಹಾಗೆ ಅದನ್ನು ಕಳುಹಿಸಬೇಕಾದ ಅಗತ್ಯವೇ ಇರಲಿಲ್ಲ. ಅವರು ನಮ್ಮ ದೌರ್ಬಲ್ಯವನ್ನು ಉಪಯೋಗ ಮಾಡಿಕೊಂಡು ನಮ್ಮ ಹಕ್ಕುಗಳಿಗೆಲ್ಲಾ ಧಕ್ಕೆಯನ್ನುಂಟುಮಾಡುತ್ತಿದ್ದಾರೆ. ದಕ್ಷಿಣ ಭಾರತದಲ್ಲಿರತಕ್ಕ ನಾಲ್ಕು ರಾಜ್ಯಗಳೂ ಒಂದಾಗಿ ಒಂದು ಧೃಡವಾದ ನೀತಿಯನ್ನಿಟ್ಟುಕೊಂಡು ಮುಂದುವರಿಯುವುದಕ್ಕೆ ಅವರು ಅವಕಾಶವನ್ನೇ ಕೊಡುತ್ತಿಲ್ಲ ; ಹಾಗೂ ಅವರು ಇದಕ್ಕೆ ಒಪ್ಪುತ್ತಲೂ ಇಲ್ಲ. ಹೀಗೆ ಇದನ್ನು ನೋಡಿದರೆ ಇದರಲ್ಲೂ ಏನೋ ಒಂದು ರಾಜಕೀಯವಿದೆ ಎಂದು ಕಂಡುಬರುತ್ತಿದೆ. ಇನ್ನು ಆ ನಮ್ಮ ಮೈಸೂರು—ಮಹಾರಾಷ್ಟ್ರಗಳ ಗಡಿ ವಿಷಯವನ್ನು ತೆಗೆದುಕೊಂಡರೂ ಅದರಲ್ಲೂ ಕೂಡ ಒಂದು ರಾಜಕೀಯ ಅವರದು ಇದ್ದೇ ಇದೆ. ಹೀಗೆ ಅವರು ನಮ್ಮ ಗಮನವನ್ನು ಅಲ್ಲಸಲ್ಲದ ವಿಚಾರಗಳತ್ತ ಸೆಳೆದು ನಮ್ಮ ರಾಜ್ಯದ ಅಭ್ಯುದಯಕ್ಕೆ ಧಕ್ಕೆಯನ್ನುಂಟುಮಾಡುತ್ತಿದ್ದಾರೆ. ಆದ ಕಾರಣನಮ್ಮ ರಾಜ್ಯ ಸರ್ಕಾರದವರು ಈ ವಿಚಾರದಲ್ಲಿ ಒಂದು ದೃಢವಾದ ನಿಲುವನ್ನು ತಾಳಬೇಕು ಎಂದು ಹೇಳುತ್ತೇನೆ. ನಾನು ಏತಕ್ಕೆ ಇದನ್ನೆಲ್ಲಾ ಹೇಳುತ್ತಿದ್ದೇನೆಂದರೆ, ನಮ್ಮದು ಅತ್ಯಂತ ಬಡರೈತರಿರತಕ್ಕ ರಾಜ್ಯ. ಇಲ್ಲಿ ಈ ರೈತರಿಗೆ ನಾವು ಏನೇ ಅನುಕೂಲವನ್ನು ಮಾಡಬೇಕಾಗಿದ್ದರೂ ಅದನ್ನು ಪಿ.ಡಬ್ಲ್ಯು.ಡಿ. ಮೂಲಕವೇ ಮಾಡಬೇಕಾಗಿದೆ. ಅದುದರಿಂದ ನಮ್ಮ ಈ ಕೆಲಸ ಕಾರ್ಯಗಳ ಬಗ್ಗೆ ಸರ್ಕಾರದವರು ಒಂದು ದೃಢವಾವ ನಿಲುವನ್ನು ಜಾಗ್ರತೆ ತೆಗೆದುಕೊಳ್ಳಬೇಕು. ನಮ್ಮಲ್ಲಿ ನೀರಿನ ಸೌಲಭ್ಯವಿದೆ, ವಿದ್ಯುಚ್ಛಕ್ತಿ ಇದೆ. ಆದರೆ ಇಲ್ಲಿ ಇರಿಗೇಷನ್ನಿಗೆ ಸಂಬಂಧಪಟ್ಟ ಕೆಲಸಗಳು ಮಾತ್ರ ಬೇಗ ಆಗುತ್ತಿಲ್ಲ. ಆದುದರಿಂದ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಮತ್ತು ನಮ್ಮ ಪಿ.ಡಬ್ಲ್ಯು.ಡಿ. ಮಂತ್ರಿಗಳು ಇಂಥ ವಿಚಾರಗಳಲ್ಲಿ ಕೇಂದ್ರ ಸರ್ಕಾರದೊಂದಿಗೆ ಪತ್ರವ್ಯವಹಾರ ಮಾಡತಕ್ಕ ಕಾಲದಲ್ಲಿ ತಾವು ಒಂದು ದೃಢವಾದ ನಿಲುವನ್ನು ತಾಳಿ ಕೆಲಸ ಮಾಡಬೇಕೆಂದು ಹೇಳುತ್ತೇನೆ.

(ಶ್ರೀ ಎಂ ಬಸವರಾಜ್)

ಇನ್ನು ನಮ್ಮ ಆ ತುಂಗಭದ್ರ ಪ್ರಾಜೆಕ್ಟನ್ನು ನಿರ್ಮಾಣ ಮಾಡುವಾಗ ನಮ್ಮ ನಿಲುವು ಏನಿತ್ತು ಎನ್ನುವುದರ ಬಗ್ಗೆ ಸರ್ಕಾರದವರಿಂದಲೇ ಹೊರಡಿಸಲ್ಪಟ್ಟ ಒಂದು ಬರವಣಿಗೆ ನನಗೆ ಸಿಕ್ಕಿದೆ. ಆ ಪುಸ್ತಕದಲ್ಲಿ ಇದರ ಬಗ್ಗೆ ಒಂದು ಒಳ್ಳೆಯ ನಿಲುವನ್ನೇ ತೆಗೆದುಕೊಂಡಿದ್ದಾರೆ. ಅಲ್ಲಿ ನೀರಾವರಿ ಬೇಸಾಯಕ್ಕೂ ಅನುಕೂಲ ಮಾಡಿದ್ದಾರೆ. ಮತ್ತು ಕೆಲವು ಕೈಗಾರಿಕೆಗಳನ್ನು ನಡೆಸುವುದಕ್ಕೂ ಅಲ್ಲಿ ಅನುಕೂಲ ಮಾಡಿದ್ದಾರೆ. ನಮ್ಮಲ್ಲಿ ವ್ಯವಸಾಯ ಕೆಲಸಕ್ಕೆ ಆಗಿ ಉಳಿಯತಕ್ಕ ಜನರೇನಿದ್ದಾರೆ ಅವರಿಗೆ ಆ ಕೈಗಾರಿಕೆಗಳಲ್ಲಿ ತೊಡಗುವುದಕ್ಕೆ ಒಂದು ಅವಕಾಶವನ್ನುಂಟು ಮಾಡಿದ್ದಾರೆ. ಇದೇ ರೀತಿ ನಮ್ಮ ರಾಜ್ಯದ ಇನ್ನುಳಿದ ಪ್ರಾಜೆಕ್ಟುಗಳನ್ನೂ ಮಾಡಿದ್ದರೆ ಇಲ್ಲಿರತಕ್ಕ ಜನರು ಇಷ್ಟು ಕಷ್ಟಗಳಿಗೂ ಮತ್ತು ತೊಂದರೆಗಳಿಗೂ ಒಳಗಾಗುವುದಕ್ಕೆ ಅವಕಾಶವಾಗುತ್ತಿರಲಿಲ್ಲ. ಕಳೆದ ಎರಡು ವರ್ಷಗಳಿಂದ ನಮ್ಮ ನುಗು ಪ್ರಾಜೆಕ್ಟಿನ ಕೆಳಗೆ ನೀರಿಲ್ಲದೆ ಸುಮಾರು 18 ಸಾವಿರ ಎಕರೆ ಭೂಮಿ ಬೆಳೆಯಿಲ್ಲದೆ ಪಾಳು ಬೀಳುವಂತಾಯಿತು. ಆ ತುಂಗಭದ್ರ ಪ್ರಾಜೆಕ್ಟಿನ ಬಳಿ ನೀರು ಅಲಾಕಾಗದಂತೆ ಯಾವ ಒಂದು ಅನುಕೂಲವನ್ನು ಮಾಡಿದ್ದಾರೋ ಅದೇ ಅನುಕೂಲಗಳನ್ನು ಇಲ್ಲಿಯೂ ಮಾಡಿದ್ದರೆ ನುಗು ಪ್ರಾಜೆಕ್ಟಿನ ಬಳಿ ಬೆಳೆ ಹಾಳಾಗುವುದಕ್ಕೆ ಅವಕಾಶವಿರಲಿಲ್ಲ. ಜನರು ಅನ್ನಕ್ಕಾಗಿ ಕಳವಳಪಡಬೇಕಾದ್ದಿರಲಿಲ್ಲ. ಆದುದರಿಂದ ಆ ತುಂಗಭದ್ರಾ ಜಲಾಶಯದಲ್ಲಿ ಹೇಗೆ ಒಂದು ವಿತರಣೆಯಿಂದ ಕೆಲಸ ಕಾರ್ಯಗಳನ್ನು ಮಾಡಿದ್ದಾರೋ ಅದೇ ಮಾದರಿಯಲ್ಲಿ ಇನ್ನುಳಿದ ಭಾಗಗಳಲ್ಲೂ ಮಾಡಬೇಕೆಂಬ ವಿಷಯವನ್ನು ಈ ಮಾನ್ಯ ಸಭೆಯು ಬಹಳ ತೀಕ್ಷಣತೆಯಿಂದ ಪರಿಶೀಲಿಸಬೇಕಾದ ವಿಷಯವಾಗಿದೆ. ನಾನು ಈ ಹಿಂದೆ ರೆವಿನ್ಯೂ ಇಲಾಖೆಯ ವಿಚಾರದಲ್ಲಿ ಮೊನ್ನೆ ಮಾತನಾಡತಕ್ಕ ಕಾಲದಲ್ಲಿ ಇದೇ ವಿಚಾರವನ್ನು ಹೇಳಿದ್ದೆನು. ಜಪಾನ್ ದೇಶದ ಒಬ್ಬ ನ್ಯೂಟ್ರಿಷನ್ ತಜ್ಞರು ಒಂದು ಮಾತನ್ನು ಹೇಳಿದ್ದಾರೆ. ಮನುಷ್ಯನು ಗಟ್ಟಿಮುಟ್ಟಾಗಿದ್ದು ಭಾರವಾದ ಕೆಲಸಗಳನ್ನು ಮಾಡಬೇಕಾಗಿದ್ದರೆ ಆ ಮನುಷ್ಯನಿಗೆ ದಿನವಹಿ 5 ಸಾವಿರ ಕ್ಯಾಲರಿ ಆಹಾರ ಬೇಕೆಂದು ಹೇಳಿದ್ದಾನೆ. ನಮಗೆ ಇಲ್ಲಿ 2 ಸಾವಿರ ಕ್ಯಾಲರಿಯನ್ನೂ ಕೊಡಲು ಸಾಧ್ಯವಿಲ್ಲ. ಆ 5 ಸಾವಿರದಲ್ಲೂ ಶೇಕಡ 18ರಷ್ಟು ಸ್ಟಾರ್ಚ್ ಮತ್ತು ಷುಗರ್ ಇರಬೇಕೆಂದು ಹೇಳಿದ್ದಾನೆ. ಇದು ನಮ್ಮ ಇಂದಿನ ಆಹಾರ ಎಷ್ಟು ಸತ್ವ ಹೀನವಾದುದ್ದಾಗಿದೆ ಎಂಬುದನ್ನು ಎತ್ತಿ ತೋರಿಸುತ್ತದೆ. ನಾವು ಆ ಸ್ಥಿತಿಗೆ ಬರಬೇಕಾದರೆ ಇಲ್ಲಿ ನಾವು ಒಂದು ತೊಟ್ಟು ನೀರನ್ನೂ ಹಾಳು ಮಾಡದಂತೆ ಉಪಯೋಗ ಮಾಡಬೇಕು. ನಾವು ಯಾರಾದರೂ ಈ ದಿವಸ ಮೈಸೂರಿನಿಂದ ಬೆಂಗಳೂರಿಗೆ ಬರುತ್ತಿರುವಾಗ ದಾರಿಯಲ್ಲಿ ನೋಡಿರಬಹುದು, ಎಷ್ಟು ನೀರು ಜಮೀನಿನ ಮೇಲೆ ಬಂದದ್ದು ಈಚೆಗೆ ಹರಿದು ಬಂದು ನಿಷ್ಪ್ರಯೋಜನವಾಗಿ ಮತ್ತೆ ಕಾವೇರಿಯನ್ನೇ ಸೇರುತ್ತಿದೆ. ಇಂಥ ನೀರನ್ನು ತಡೆದು ಅದನ್ನು ಕೆಲಸಕ್ಕೆ ಬಳಸಬೇಕು. ಈ ದಿವಸ ಹಾಗೆ ವೃಥಾ ಹರಿದು ನದಿಯನ್ನು ಸೇರತಕ್ಕ ನೀರನ್ನು ತಡೆಗಟ್ಟಿದ್ದೇ ಆದರೆ ಆ ನೀರಿನಿಂದ ಇನ್ನೂ 17 ಸಾವಿರ ಎಕರೆ ಭೂಮಿಯನ್ನು ತರಿ ಸಾಗುವಳಿ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇಂದು ಇಷ್ಟು ನೀರು ಯಾವ ಪ್ರಯೋಜನವೂ ಇಲ್ಲದೆ ವೃಥಾ ವ್ಯರ್ಥವಾಗುತ್ತಿದೆ. ಈ ನೀರನ್ನು ನಾವು ಹಾಳಾಗುವುದಕ್ಕೆ ಬಿಡದಿದ್ದರೆ ಇದರಿಂದ ಇನ್ನೆಷ್ಟು ಜನರಿಗೆ ಉದ್ಯೋಗ ದೊರೆಯುತ್ತಿತ್ತೋ ಮತ್ತು ಇನ್ನೆಷ್ಟು ಭೂಮಿಗೆ ನೀರು ಸರಬರಾಯಿ ಆಗುತ್ತಿತ್ತೋ ಅದನ್ನು ನಾವು ಮರೆಯಬಾರದು. ಇನ್ನಾದರೂ ಸರ್ಕಾರದವರು ಇತ್ತ ಕಡೆಗೆ ತಮ್ಮ ಹೆಚ್ಚಿನ ಗಮನ ಕೊಡುತ್ತಾರೆಂದು ಆಶಿಸುತ್ತೇನೆ. ಇನ್ನು ನಮ್ಮಲ್ಲಿ ಹಣ ಹೇಗೆ ಪೋಲಾಗುತ್ತಿದೆ ಎನ್ನುವುದರ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಸರ್ಕಾರದವರು ಅನೇಕಸಾರ್ತಿ ತಮ್ಮಲ್ಲಿ ಫಂಡ್ಸ್ ಇಲ್ಲ ಎಂದು ಹೇಳುತ್ತಿರುವುದನ್ನು ನಾವೆಲ್ಲರೂ ಕೇಳಿದ್ದೇವೆ. ನನ್ನ ತಾಲ್ಲೂಕಿನಲ್ಲೇ ಈ ವಿಚಾರದಲ್ಲಿ ನಡೆದ ಒಂದು ವಿಷಯವನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಅಲ್ಲಿ ಅನೇಕ ರೈತರು ಒಂದು ಹಳ್ಳಕ್ಕೆ ಒಂದು ಪಿಕಪ್‌ನ್ನು ಹಾಕಿ ಕೊಡಿ, ಅದರಿಂದ ಅನೇಕ ಎಕರೆ ನೀರು ಸಾಗುವಳಿಗೆ ಬರುತ್ತದೆ ಎಂದರೆ ಅದನ್ನು ಮಾಡಲಿಲ್ಲ. ಆದರೆ ಅಲ್ಲಿ ಯಾರೋ ಒಬ್ಬ ವ್ಯಕ್ತಿಗೆ ಅನುಕೂಲಮಾಡಿಕೊಡಲು ಒಂದು ಪಿಕಪ್‌ನ್ನು ಕಟ್ಟಲು 23 ಸಾವಿರ ರೂಪಾಯಿಗಳನ್ನು ಹಾಳು ಮಾಡಿದ್ದಾರೆ. ಆ ಪಿಕಪ್‌ಗೆ 10 ಸಾವಿರಕ್ಕೆ ಮೇಲೆ ಖರ್ಚಾಗುವುದಿಲ್ಲ. ಅಲ್ಲಿ ನೀರುಸಾಗುವಳಿಗೆ ಬಂದಿರತಕ್ಕ ಭೂಮಿ ಕೇವಲ 123 ಎಕರೆ ಮಾತ್ರ. ಆದರೆ ಇದನ್ನು ಇವರು ಆ ಸ್ಕೇರ್ಸಿಟಿ ಫಂಡಿನಲ್ಲಿ ಮಾಡಿಸಿದ್ದಾರೆ.

ಆ 123 ಎಕರೆ ಜಮೀನು ಏನಿದೆ ಅದು 18 ಜನಗಳಿಗೆ ಸೇರಿದೆ. ನಾನು ಸರ್ಕಾರಕ್ಕೆ ಪ್ರಾರ್ಥನೆ ಮಾಡಿಕೊಳ್ಳುವುದು ಇಷ್ಟೇ. ರಾಜಕೀಯ ಒತ್ತಡ ಇರುವ ಕಡೆ ಕೆಲಸಗಳಾಗುತ್ತವೆ ಎನ್ನುವ ಮಾತು ಕೇಳಿ ಬರುತ್ತಿದೆ. ಆದ್ದರಿಂದ ರಾಜ್ಯ ಸರ್ಕಾರದವರು ಪಬ್ಲಿಕ್ ವರ್ಕ್ಸ್ ಇಲಾಖೆಯವರು ಯಾವ ರಾಜಕೀಯ ಒತ್ತಡವೂ ಶಿಫಾರಸ್ಸೂ ಇಲ್ಲದೆ ಜನತೆಯ ಅವಶ್ಯಕತೆ ಮತ್ತು

ಅನುಕೂಲತೆಯನ್ನು ಅರಿತು ಈ ಪಬ್ಲಿಕ್ ವರ್ಕ್ಸ್ ಇಲಾಖೆಯ ಕೆಲಸಕಾರ್ಯಗಳನ್ನು ಮಾಡಬೇಕೆಂದು ನಾನು ಹೇಳುತ್ತೇನೆ. ಇನ್ನು ಮುಂದಾದರೂ ಎಲ್ಲೆಲ್ಲಿ ಮೈನರ್ ಇರಿಗೇಷನ್ ಕೆಲಸಗಳಾಗಬೇಕು, ಮೀಡಿಯಂ ಇರಿಗೇಷನ್ ಕೆಲಸಗಳಾಗಬೇಕು, ಎಲ್ಲೆಲ್ಲಿ ಮೇಜರ್ ಇರಿಗೇಷನ್ ಕೆಲಸಗಳಾಗಬೇಕು ಅವುಗಳನ್ನೆಲ್ಲಾ ಸರ್ಕಾರದವರು ತೆಗೆದುಕೊಂಡು ಜನತೆಗೆ, ರೈತರಿಗೆ ನೀರಾವರಿ ಸೌಲಭ್ಯಗಳನ್ನು ಒದಗಿಸಿಕೊಡಬೇಕು. ಗ್ರಾಮಾಂತರ ಪ್ರದೇಶಗಳಲ್ಲಿ ಚಿಕ್ಕ ಪುಟ್ಟ ಕಾಟೇಜ್ ಇಂಡಸ್ಟ್ರಿಗಳನ್ನು ಸ್ಥಾಪನೆ ಮಾಡಬೇಕು, ಇದರಿಂದ ನೂರಾರು, ಸಾವಿರಾರು ಜನಗಳಿಗೆ ಉದ್ಯೋಗ ಸಿಕ್ಕುವಂತೆ ಮಾಡಬೇಕು, ಹಳ್ಳಿಗಾಡಿನ ಪುರೋಭಿವೃದ್ಧಿಯ ಕಡೆ ರಾಜ್ಯ ಸರ್ಕಾರದವರು ಹೆಚ್ಚಿನ ಗಮನವನ್ನು ಕೊಡಬೇಕೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† SRI MANIK RAO SHAMA RAO (Aurad).—Sir, I rise to support the demands in respect of the Public Works Department presented by the Government for the year 1968–69.

Sir, many of my friends said much about the lapses of the Public Works Department. I would like to say something about the progress achieved by the Public Works Department and by our great engineers during the last 10 years. If they consider the figures that I am going to give, I am sure they will extend their appreciation. I will place before the House a few statistical data.

During the last ten years, we may consider the figures in terms of percentages under several heads. So far as the irrigable area is concerned, in the year 1956–57 it was only 7·35 whereas in the year 1964–65, it has gone up to 9·82. During the course of 7 to 8 years it has increased by 38 per cent. Like-wise power supply. During the last 10 years, in 1956, the total consumption in the State was only 630 m. kw. whereas today, we find in the year 1964–65, it is about 1,359 m. kw. That means a total of 150.6 per cent it has increased. In the same manner, if we take road-development in the State, in 1956 it was only 44,000 kilo meters, whereas in 1965–66, it has risen to 55,000 which is an increase by 25 per cent. I appeal to my friends to go through this data and consider what progress the P.W.D. has achieved during the last ten years. Although the progress achieved by the Public Works Department is something tremendous and although the department deserves the approbation and appreciation, I am sorry to say that it has done nothing to remove the imbalances and disparties that exist in the various parts of the State. I will put before you certain statistical data also.

Sir, if we take irrigation in Bidar District, in terms of percentage, only one per cent of the area comes under irrigation, Whereas—

Chidradurga has	4.1 per cent
Bijapur has	4.00 per cent
Belgaum has	6.00 per cent.

In road development, we find that in Bidar there are only 12.7 per cent per 100 k. sq. miles, whereas in

Belgaum	it is 24 per cent.
Kolar	it is 35 per cent.

(SRI MANIK RAO SHAMA RAO)

So far as electricity is concerned, in Bangalore district about 939 villages have been electrified, in Chitradurga 531 villages are electrified, whereas in Bidar district only 24 villages have been electrified.

So Sir, I do not understand why the Government has taken this attitude towards a backward area like Bidar. Although from time to time all the Ministers, including the Hon'ble Minister for Finance while speaking on the floor of the other House said in a roaring voice, explaining before the House, that every top-priority will be given to development in Bidar district. But I do not find any change with respect to the P.W.D.

Sir, I would like to mention that at the time of the States Reorganisation in 1956, while we were in Hyderabad, we were entertaining very pleasant dreams and we were thinking that when we join united Karnataka, a bigger family, we will get all the privileges and equal treatment with the other areas. Unfortunately all these hopes have been shattered and we feel disappointed.

(*Interruption*)

Therefore I would like to invite the attention of the Hon'ble Minister for Public Works to this important factor.

Now I wanted to say something regarding the well sinking division. No doubt the Government of Mysore through the co-operative Banks have placed enormous sums of money at the disposal of the raiyats of the State. The raiyats are also taking pains to come out with the full zeal and contribute their mite towards the progress of this State. But, they have not been provided with technical know-how, with proper equipment like blasting material and boring machines. Therefore, I suggest to the Government to kindly establish some of the well-sinking Divisions under the P.W.D. in that area so that the raiyat could get the full benefit of the financial help they are getting from the Government.

Sir, with regard to lift irrigation, I wanted to say something. During the last 15 days we are sitting here, we have found from all corners there is a demand for lift irrigation. Certainly, I am one of those who have thought in the case of tank irrigation, somebody has to be benefited at the cost of somebody else but in the case of lift irrgation, there is no question of submersion involved. Therefore I suggest to the Government that lift irrigation should be taken on top priority basis and on a mass scale.

Moreover, a number of financial agencies are coming forward for providing adequate funds. Therefore, I would request the Public Works Department to enable the raiyat to avail himself of all the financial help that is given by giving him better facilities for lift irrigation and keep this department under one of the most eneregetic Chief Engineeer.

I say one more thing, that is with regard to water rate. I do not know under what provision of the Constitution the several parts of the State are being treated so far as levy of water rate is concerned. For other modes of irrigation, they charge something else and so far as lift irrigation and flow irrigation is concerned, they charge on the no-profit and no-loss basis. I do not see any reason why this sort of a difference should be made. So far as providing irrigation failities is concerned, it is the concern of the Government not the concern of the raiyat. The raiyats do want irrigation facility. Merely for the simple reason that somebody is getting the facility of lift irrigation, and somebody flow irrigation, they should not be discriminated against by charging different rates of water rate. I do hope that the Government will consider this question sympathetically and prescribe equal rates of water rates without making any discrimination among the raiyats.

3-30 P.M.

Secondly, I would like to refer to the Godavari Basin in which Bidar District unfortunately lies. A few days back the hon'ble Minister for Public Works declared before this House that there is no risk in Andhra utilising the water under the Godavari Basin. I do not know under what strength or confidence the hon'ble Minister made that bold reply because so far I find that not a single drop of water is available from this Basin to us. In support of it, I will put before the House the statistical data prepared by the Government of Mysore itself. Out of the dependable yield of 2,500 TMC in the Godavari Basin, we get about 27.5 TMC, Maharashtra 97.5 TMC, Andhra Pradesh 40 TMC. So far as Andhra Pradesh is concerned, unfortunately for us, it has used 57 TMC under the Nizamsagar Project. That means. though their legitimate share was 40 TMC, they have exceeded their share and used 57 TMC. If we take the total quantum available in the Andhra Basin, that is 165.5 TMC, 108 TMC is available for utilisation by Mysore and Maharastra. If we calculate on the basis of catchment area and other factors which the Engineers know better, out of this 108 TMC, we must get 24 TMC. Our Government is kind enough to prepare a positive scheme for utilising its share in the Godavari Basin. The following distribution is suggested :

Karanja	6.54 TMC
Manjra	2.00 ,,
Nagur Project	1.00 ,,
Minor Irrigation	14.00 ,,

Unfortunately, up to this day, out of the 24 TMC ft., not a single drop has been utilised by us ; whereas the Andhra Pradesh Government, which is enjoying the lower riparian rights, without the consent of the Maharashtra and Mysore Government, is going ahead with Manghar Project including the Nizamsagar Project. They are going ahead with the

(SRI MANIK RAO SHAM RAO)

Puchampad project. They have constructed a resevoir also. Further they have tried to raise the dam height of Nizamsagar. I do not know where they are going to stop this reckless use of water. The Maharashtra Government is enjoying the upper riparian right and this House knows that that gigantic State is insisting on its wrong claims. I do not know whether they will also stick to their legitimate share. Ultimately, in the Godavari Basin, it will be the Mysore State that will be now here and it is very doubtful whether that Basin itself will remain in the State. I want to give a note of warning to the Government and caution them that it is high time that they must consider doing something for the utilisation of this Godavari water in this State. Otherwise, the interests of Mysore State in general and the interests of the people of Bidar District in particular are at stake.

With these words, I conclude my speech and thank the Chair for having given me this opportunity.

Sri B. B. SAYANAK (Belgaum).—Madam Chairman, I rise to oppose the Demand tabled by the Hon'ble Minister for Public Works department brought before this august House.

The construction of buildings, maintenance of roads minor and major irrigation schemes and provision of electricity are a bit satisfactory in the Mysore State but coming to the Marathi border area, we are totally neglected by the Mysore Government. As regards roads, last year, the Mysore Government has taken for construction three roads, namely Belgaum-Bannali, Belgaum-Handignoor, Belgaum-Kadala-*Via* Kanjoli. But after the declaration of the Mahajan Commission Report, the work of construction of these roads has been held up. I personally approached the Executive Engineer, Belgaum, and asked him the reason for stopping this work. He told me that no funds were available with the Government. They have stopped this work because this area will merge with Maharashtra according to the Report of the Mahajan Commission; that is why, they have suspended this work, in this area. There is no road from Belgaum to Kankumbi, *Via* Zamboti; that road is the worst road. Mungeti Nala is passing through this road. There is no bridge on this road and this has caused a lot of inconvenience to 20 villages during the rainy season. Twenty villages of this area have no road to go to Belgaum for attending bazaar.

Formerly there was Amalgamated Electric Co. in Belgaum, which was suppling electricity. It was started in 1937 and throughout 20 years it worked very efficiently. But after the Sharavathi power came to us in the year 1965, we are regularly having power break-down for three to four days in a week, Belgaum City is in complete black-out for 3 to 4 days in a Week. When we complain to the concerned officers or the higher authorities, they never care for public complaints. When we take the trouble of giving a ring, the concerned officer never gives any

response to the phone call. We have made a grievance of it before the Divisional Commissioner, the Deputy Commissioner the Chief Engineer when they visited Belgaum and told him that after Sharavathi power came, our position has become worse and when the Amalgamated Electric Co. was supplying power things were far better. This is our sad plight in Belgaum. Now coming to villages, out of 490 villages in Belgaum and Khanapur Taluks, only 15 villages have been supplied with electricity. Is this the way of treating the Marathi people of the border area ? In spite of the fact that we are quite ready to give whatever amount the Government wants, the Government is not willing to provide power to our villages and electrify them. Out of 23,000 villages in the Mysore State, only 7,000 villages have been supplied with electricity. What is this policy of Government ? While electricity is supplied to other States, it is denied to the people of our own State who are clamouring for it and who are prepared to pay for it.

Now coming to major and minor irrigation, I regret to point out that not a single major or minor irrigation scheme is taken for Belgaum border area. I wonder if this is the treatment given to the Maharashtrians in this State. Why do you want to have Maharashtrians in the Mysore State ? Let them go to Maharashtra. Send them to Maharashtra. By going to Maharashtra, at least let them seek their salvation, serve their interests and fulfil their ambitions. The buildings which are constructed by the P.W.D. in Belgaum, are the worst because sand and cement are not mixed in proper proportion and used. Why is it so ? The Executive Engineers, the Superintending Engineer and the Sub-overseers want their share in good percentage from the contractors. Naturally a good job is not done and strong buildings won't come up. A Civil Hospital is constructed by the Mysore Government recently, spending Rs. 44 lakhs. What is the fate of that building ? In the rainy seasson, water will be pouring down from the slabs. There will not be a single bed in the civil hospital which would be dry. There would not be any space to step in in the first floor.

About Kali River bridge project, contract has been given to G. D. and Company for Rs. 35 lakhs. Only the foundation of the Piller in the river is laid and not a single Piller is erected. No work is being done by the company and nobody is working at Karwar and Government states that the Kali River Bridge Project is in progress. I may tell the House Sir, that work of Kali River bridge Project is in a stand-still position.

In Belgaum tracers and draughtsmen were appointed by the then Bombay Government without qualifications. But, when their salaries were fixed in the Mysore State after integration, they have suffered heavy losses. Some of them have filed writ petitions in the High Court and they have succeeded. Justice to Bombay-Karnatak people and Hyderabad-Karnatak people is not done by Mysore Government. I request the hon'ble Minister to consider these facts.

The Executive Engineer in Belgaum is working there for more than four years though the general rule is that an officer should not be in one

(SRI B. B. SAYANAIK)

place for more than three years. Why is he not transferred from that area ? No bridge work or tank work is undertaken in Belgaum taluka or in Khanapur taluka whereas such works have been taken up in the other areas not belonging to the Maharashtrian villages. This is the treatment given by Mysore Government to the Maharashtra people in the border areas.

Dr. R. NAGAN GOWDA (Hospet).—Madam, Chairman, I rise to support this motion by the hon'ble Public Works Minister. Before speaking generally on the subject, I wish to deal with one or two points that were raised two days ago while he was answering a question of mine regarding Hospet-Ramgad road. He was kind enough to say that he had some arrangements to develop Ramgad into a summer resort station, but the work was held up because of some difference of opinion about the ownership of the land on the plateu. I wish to inform the hon'ble Minister. through the Chair that today I have received a letter from Sri M. Y. Ghorepade, Member of this House setting at rest the difference of opinion about the ownership of the plateu. He says that when the Minister last visited Ramgad he and his father specifically informed the Minister that he or his father did not own the pleateu on the Ramgad. Hill except two houses. I shall forward this letter received by me to the Hon'ble Minister.

This makes it plain that there is no difference of opinion regarding the owneship of the land and the plateu and so the hon'ble Minister will be now free to go and develop this area into a summer resort and repair the road that leads from Hospet to Ramgad *via* Kallahalli.

Speaking on the Demand, I wish to congratulate the hon'ble Minister that under 50 Public Works, he has been able to provide Rs. 824 lakhs in this year's budget as against Rs. 740 lakhs of the last year. I know the difficulties under which he is labouring and still I am glad that he has made this provision. One point I want to bring to his notice is, this year under Development Schemes there has been some short-fall from 244 lakhs rupees provided in 67-68, only 161 lakhs rupees has been spent and this is mainly in respect of minor irrigation works in chronically drought affected areas for which no provision was made. Now I am glad to note that he is making about Rs. 70 lakhs provision for 68-69 and I congratulate him for this.

Sir, in the matter of sugarcane cess fund roads and other roads that are constructed in the wet land areas, not much provision has been made except Rs. 68,000 Not only in the old Vijayanagar canal area but also the Tungabhadra right bank and left bank area, much more provision has to be made and roads will have to be repaired and put them in a very good condition to provide transport facilities to the people in this 10 lakhs acres irrigated area.

For construction of new tanks only Rs. 95 lakhs have been provided and for repairs to old tanks only a small amount has been provided this

year. There are so many parts in the State like Kudligi in my district and parts of Chitradurga, Tumkur, where nothing else is possible except minor irrigation works and I suggest that Government should take up many more minor irrigation works in these areas. The old Mysore had a programme like this for our district. I wish to make a suggestion regarding Hagaribommanahalli for which large amount has been provided. I wish to suggest that a canal can be taken outside Chinthanapalli tank and the bed of the tank might be irrrgated by Hagaribommanahalli project.

I wish to congratulate the Minister that he has provided a lakh of rupees for a Rest House in Hampi. I think we ought to spend some more money and make it an attractive place for visitors.

I do not know why we are keeping this fifth wheel in the coach-Tungabhadra Board. In 1954–55, the Mysore Government created this Board in conjunction with the Government of India. It is they who wanted it because some construction had to be done in which Both Andhra and we were interested. Now all that construction is over and I do not see any reason why we should maintain that Tungabhadra Board any longer. The remaining work can be taken care of easily by the Mysore Government and the Andhra Government ought to rely on us for maintaining the Dam and the canals that pass from Mysore area.

I am glad you are making a provision for a ring road around my town Hospet. It is one that was required so that the traffic can be taken out of the town. You had mentioned of Settikerai tank repairs in the Vihangamanota of Bellary District. But I notice that it has been omitted in this year's detailed estimates. I would be glad if you could see your way to include it in that area.

I thank you for the time you have given me. I am finishing the speech with this.

†ಶ್ರೀ ಸದಾಶಿವಪ್ಪ ಪಾಟೀಲ (ದೇವದುರ್ಗ). —ಮಾನ್ಯ ಅಧ್ಯಕ್ಷಿಣಿಯವರೇ, ಇಂದಿನ ದಿವಸ ನಮ್ಮ ಮುಂದೆ ಇರತಕ್ಕಂಥ 1968-69 ನೇ ಸಾಲಿನ ಪಿ.ಡಬ್ಲ್ಯು.ಡಿ. ಖಾತೆಗೆ ಸಂಬಂಧಪಟ್ಟ ಬೇಡಿಕೆಗಳಿಗೆ ವಿರೋಧ ವ್ಯಕ್ತಪಡಿಸುತ್ತಾ ಒಂದೆರಡು ಸಲಹೆ ಕೊಡಲು ಬಯಸುತ್ತೇನೆ. ಈಗ ಈ ಖಾತೆಯಲ್ಲಿ 92 ಕೋಟಿ ರೂಪಾಯಿ ಬೇಡಿಕೆ ಇದೆ. ಇದರ ಪೈಕಿ ಅದಷ್ಟು ಹೆಚ್ಚಿಗೆ ಹಣ ಆಡಳಿತಕ್ಕೆ ಖರ್ಚಾಗುತ್ತದೆಂದು ನನ್ನ ಭಾವನೆ ಇದೆ. ಈ ಖಾತೆಯಲ್ಲಿ ಇಲೆಕ್ಟ್ರಿಸಿಟಿ, ವಾಟರ್ ವರ್ಕ್ಸ್ ಮುಂತಾದವುಗಳಿಗೆ ಸುಮಾರು ಒಂಭತ್ತು ಜನ ಚೀಫ್ ಎಂಜಿನಿಯರುಗಳು ಕೆಲಸ ಮಾಡುತ್ತಾರೆ ಎಂದು ತಿಳಿದುಬಂದಿದೆ. ಈ ಚೀಫ್ ಇಂಜಿನಿಯರುಗಳ ಬಗ್ಗೆ ಒಂದು ಅಪಾದನೆ ಇದೆ. ಈ ವಿಷಯ ವಾಗಿ ವಿಧಾನ ಪರಿಷತ್ತಿನಲ್ಲಿ ಒಂದು ಪ್ರಶ್ನೆ ಸಹ ಬಂದಿತ್ತು. ಈ ಅಪಾದನೆ ಏನು ಅಂದರೆ, ಈ ಎಲ್ಲ ಚೀಫ್ ಎಂಜಿನಿಯರುಗಳು ಒಂದೇ ಒಂದು ಪಂಗಡಕ್ಕೆ ಸೇರಿದವರಾಗಿದ್ದಾರೆ ಎಂದು ತಿಳಿದು ಬರುತ್ತವೆ.

ಶ್ರೀ ಡಿ. ಎಂ. ಸಿದ್ದಯ್ಯ. —ಅವರೆಲ್ಲರೂ ಬುದ್ಧಿವಂತರಾಗಿದ್ದಾರೆ, ಸಿನಿಯಾರಿಟಿ ಇದೆ, ಬಂದಿದ್ದಾರೆ.

ಶ್ರೀ ಸದಾಶಿವಪ್ಪ ಪಾಟೀಲ.— ಇವರ ಬಗ್ಗೆ ಅಪಾದನೆಗಳು ಬರುತ್ತಾ ಇವೆ. ಮಂತ್ರಿಗಳು ಈ ಅಪಾದನೆ ಬಗ್ಗೆ ತೀರ್ಪು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಟಿ. ಪಿ. ಗಂಗಾಧರ್ (ತುಮಕೂರು). —ಅನ್ಯಾಯ ಆಗಿದ್ದರೆ ಹೈಕೋರ್ಟ್ ಇದೆ, ರಿಟ್ ತೆಗೆದುಕೊಂಡು ಹೋಗುತ್ತಾರೆ.

ಶ್ರೀ ಸದಾಶಿವಪ್ಪ ಪಾಟೀಲ್.—ಈ ಚೀಫ್ ಇಂಜಿನಿಯರುಗಳಿಗೆ ಕೊಟ್ಟಿರತಕ್ಕಂಥ ಸ್ಕೇಲು, ಕೊಡತಕ್ಕಂಥ ಸವಲತ್ತು ನೋಡಿದರೆ, 1968–69ನೇ ಸಾಲಿನ ಬಜೆಟ್ಟಿನಲ್ಲಿ ಬಹುಭಾಗ ಇವರ ವೈಭವಕ್ಕಾಗಿ ಹಣ ಖರ್ಚಾಗಿ ಹೋಗುತ್ತದೆಂದು ನನ್ನ ಭಾವನೆ. ಬೇರೆ ಇಲಾಖೆಯಲ್ಲಿ ಕೂಡ ಡೈರೆಕ್ಟರ್, ಜಾಯಿಂಟ್ ಡೈರೆಕ್ಟರ್ ಪೋಸ್ಟ್‌ಗಳನ್ನು ಬೇಕಾದಷ್ಟು ಕ್ರಿಯೇಟ್ ಮಾಡಿದ್ದಾರೆ. ಈ ಡಿಪಾರ್ಟ್‌ಮೆಂಟಿನಲ್ಲಿಸಹ ಬೇರೆ ಡಿಪಾರ್ಟ್‌ಮೆಂಟಿನಲ್ಲಿರುವ ಹಾಗೆ ತಮಗೆ ಬೇಕಾಗಿದ್ದವರಿಗೆ ಕೊಡುವುದಕ್ಕೆ ಸ್ವಾರ್ಥ ದೃಷ್ಟಿಯಿಂದ ಈ ಪೋಸ್ಟ್ ಕೂಡ ಕ್ರಿಯೇಟ್ ಮಾಡಿದ್ದಾರೆ ಎಂದು ಹೇಳಬಯಸುತ್ತೇನೆ.

ಈಗ ಒಟ್ಟು ರಾಯಚೂರು ಗುಲ್ಬರ್ಗ ಡಿಸ್ಟ್ರಿಕ್ಟಿನಲ್ಲಿ ಕಾಮಗಾರಿಗಳನ್ನು ಎಷ್ಟು ತೆಗೆದುಕೊಂಡಿದ್ದಾರೆ ಎಂಬುದನ್ನು ಹೇಳಲು ಬಯಸುತ್ತೇನೆ. ಗುಲ್ಬರ್ಗ ಡಿಸ್ಟ್ರಿಕ್ಟ್ ಬಗ್ಗೆ ಮಾನ್ಯ ಮಂತ್ರಿಗಳಿಗೆ ಪ್ರಶ್ನೆ ಕೇಳಿದರೆ ನಮ್ಮಲ್ಲಿ ಯಾವ ತರಹದ ಸ್ವಾರ್ಥತೆ ಇಲ್ಲ, ಎಲ್ಲಾ ತಾಲ್ಲೂಕುಗಳಿಗೆ ಎಲ್ಲಾ ಜಿಲ್ಲೆಗಳಿಗೆ ಬಜೆಟ್ಟಿನಲ್ಲಿ ಸರಿಯಾಗಿ ಹಣ ಒದಗಿಸುತ್ತೇವೆ ಎಂದು ಹೇಳುತ್ತಾರೆ. ಈಗ ಇವರ ಮುಂದೆ ಲೆಕ್ಕ ಇಡುತ್ತೇನೆ. ಗುಲ್ಬರ್ಗ ಜಿಲ್ಲೆಗೆ ಸುಮಾರು 17 ಲಕ್ಷ ರೂಪಾಯಿ ರಸ್ತೆಗಾಗಿ ಹಣ ಹಾಕಿದ್ದಾರೆ. ರಾಯಚೂರು ಡಿಸ್ಟ್ರಿಕ್ಟ್‌ಗೆ ರಸ್ತೆ ಕೆಲಸಕ್ಕೆ 3 ಲಕ್ಷ ರೂಪಾಯಿ ಒದಗಿಸಿದ್ದಾರೆ. ಇದರಿಂದ ಮಾನ್ಯ ಮಂತ್ರಿಗಳ ನಿಸ್ವಾರ್ಥ ಸೇವೆಯ ಕಲ್ಪನೆ ಬರುತ್ತದೆ. ಇದು ಒಂದೇ ಒಂದು ಎಂದು ಅಲ್ಲ, ಯಾವ ಒಂದು ಕೆಲಸ ತೆಗೆದುಕೊಂಡರೂ ಕೂಡ ಇದೇ ರೀತಿ ಇದೆ. ಯಾವ ಒಂದು ಕೆಲಸವಾಗಬೇಕಾದರೆ ಅದು ಗುಲ್ಬರ್ಗದಲ್ಲಿ. ಗುಲ್ಬರ್ಗದಲ್ಲಿ ಗೆಸ್ಟ್ ಹೌಸಕ್ಕಾಗಿ ಹಣ ಕೊಟ್ಟಿದ್ದಾರೆ. ಕೃಷ್ಣಾ ಮೇಲ್ದಂಡೆ ಯೋಜನೆ ಪ್ರಾರಂಭಮಾಡಲು ಹಣವಿಲ್ಲದ ಮೂಲಕ ಮಾಡಲು ಸಾಧ್ಯವಿಲ್ಲ ಎಂದು ಹೇಳುವ ಕಾಲದಲ್ಲಿ ಈ ಮಂತ್ರಿಗಳು ಈ ರೀತಿ ಮಜಾ ಮಾಡುವುದಕ್ಕಾಗಿ ಸ್ವಾರ್ಥಕ್ಕಾಗಿ ಹಣ ಖರ್ಚು ಮಾಡಬಾರದು ಎಂದು ಹೇಳಬಯಸುತ್ತೇನೆ.

ಗುಲ್ಬರ್ಗ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಹೆಚ್ಚಾಗಿ ಕೆಲಸ ನಡೆದಿರುವುದನ್ನು ನೋಡಿದರೆ ಅದರಲ್ಲಿಯೂ ಕೂಡ ನಿಜವಾಗಿ ಚಿಂಚೋಳಿ ತಾಲ್ಲೂಕು ಬಿಟ್ಟರೆ ಗುಲ್ಬರ್ಗ ಜಿಲ್ಲೆಯ ಬೇರೆ ತಾಲ್ಲೂಕುಗಳಲ್ಲಿ ಅಷ್ಟು ಹೆಚ್ಚಾಗಿ ಕೆಲಸ ತೆಗೆದುಕೊಂಡಿಲ್ಲ. ಪ್ರತಿಯೊಬ್ಬ ಕಾಂಗ್ರೆಸ್ ಮೆಂಬರನಿಗೂ ಇದು ಗೊತ್ತಿದೆ. ಸದಸ್ಯರೆಲ್ಲರಿಗೂ ವಿನಂತಿ ಮಾಡಿಕೊಳ್ಳುತ್ತೇನೆ. 1968–69 ನೇ ಸಾಲಿನ ಮುಂಗಡ ಪತ್ರದಲ್ಲಿ ಗುಲಬುರ್ಗ ಜಿಲ್ಲೆಗೆ ಒದಗಿಸಿರುವಷ್ಟು ಹಣ ಬೇರೆ ಯಾವ ಜಿಲ್ಲೆಗೂ ಒದಗಿಸಿಲ್ಲ ಎನ್ನುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಇದನ್ನು ಎಲ್ಲರೂ ನೋಡಬೇಕು.

ಇನ್ನು ನೀರಾವರಿ ಯೋಜನೆ ವಿಚಾರದಲ್ಲಿ ತುಂಗಭದ್ರ ಪ್ರಾಜೆಕ್ಟಿಗೆ ಇಷ್ಟು ಲಕ್ಷ ರೂಪಾಯಿ ಒದಗಿಸಿದ್ದೇವೆ, ಇಷ್ಟು ಲಕ್ಷ ಎಕರೆ ನೀರಾವರಿಯಾಗಿದೆ ಎಂದು ಹೇಳುವುದನ್ನು ನೋಡಿದಗೆ, ಈ ಸವಲತ್ತುಗಳು ಬರಿ ಲೆಕ್ಕದಲ್ಲಿ ಉಳಿದಿವೆಯೋ ಹೊರತು ಕಾರ್ಯತಃ ಯಾವ ಸವಲತ್ತೂ ಬಂದಿಲ್ಲ ಎಂದು ಹೇಳುತ್ತೇನೆ. ದೇವದುರ್ಗ ತಾಲ್ಲೂಕಿನಲ್ಲಿ ಎರಡು ಸಾವಿರ ಎಕರೆ ನೀರಾವರಿಯಾಗುತ್ತದೆ ಎಂದು ಲೆಕ್ಕದಲ್ಲಿ ಡಿಕ್ಲೇರ್ ಮಾಡಿದ್ದೀರಿ. ಆದರೆ ಅಲ್ಲಿ ನಿಜವಾಗಿ ನಡೆಯುತಕ್ಕಂಥಾದ್ದು 48 ಎಕರೆ ಮಾತ್ರ ನೀರಾವರಿಯಾಗಿದೆ. ಮಂತ್ರಿಗಳಿಗೆ ಪ್ರಶ್ನೆ ಕೇಳಿದರೆ ಕ್ರಮ ತೆಗೆದುಕೊಳ್ಳುತ್ತೇವೆ, ವಿಚಾರಿಸುತ್ತೇವೆ, ಎಂದು ಹೇಳುತ್ತಾರೆ. ಪತ್ರ ಬರೆದರೆ ವಿಚಾರ ಮಾಡುತ್ತೇವೆ, ಕನ್‌ಸಿಡರ್ ಮಾಡುತ್ತೇವೆ, ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳುತ್ತಾರೆ. ಆದರೆ ಇದುವರೆಗೆ ಕಾರ್ಯತಃ ಒಂದು ಕೆಲಸವನ್ನೂ ತೆಗೆದುಕೊಂಡಿಲ್ಲ. ಆದುದರಿಂದ ಒಂದು ಅನುಮಾನ ಬರುತ್ತದೆ. ಇತ್ತ ಕಡೆ ಇರತಕ್ಕ ವಿರೋಧ ಪಕ್ಷದ ಸದಸ್ಯರು ಹೇಳಿದ ಕೆಲಸ ತೆಗೆದುಕೊಳ್ಳಲಿಲ್ಲ ಎಂದು. ಮುಂದೆ ಕೂಡ ಇವರ ಇಲಾಖೆಯಲ್ಲಿ ಇದೇ ರೀತಿ ಆಗುತ್ತದೋ ಏನೋ ಎಂದು ಸಂಶಯ ಭಯ ಬರುತ್ತದೆ. ಈ ರೀತಿ ಕೆಲಸ ತೆಗೆದುಕೊಂಡಿಲ್ಲ ಎಂಬ ಭಾವನೆ ಬರುತ್ತದೆ. ದೇವದುರ್ಗ ತಾಲ್ಲೂಕಿನಲ್ಲಿ 1968–69 ರಲ್ಲಿ ಒಂದೇ ಒಂದು ಹೊಸ ಹೊಸ ಕೆಲಸ ಕೂಡ ತೆಗೆದುಕೊಂಡಿಲ್ಲ. ಬೇರೆ ಡಿಸ್ಟ್ರಿಕ್ಟಿನಲ್ಲಿ ಗುಲ್ಬರ್ಗ ಡಿಸ್ಟ್ರಿಕ್ಟಿನ ಬೇರೆ ತಾಲ್ಲೂಕುಗಳಲ್ಲಿ ತೆಗೆದುಕೊಂಡಿಲ್ಲವೇ ? ದೇವದುರ್ಗ ತಾಲ್ಲೂಕಿನಲ್ಲಿ ಏತಕ್ಕೆ ತೆಗೆದುಕೊಂಡಿಲ್ಲ ? ಹೊಸ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಪ್ರಾರ್ಥನೆ ಮಾಡುತ್ತೇನೆ.

ಈ ವರ್ಷ ಹೊಸ ಕೆಲಸಗಳನ್ನು ತೆಗೆದುಕೊಂಡಿರುವುದರಲ್ಲಿ ನೋಡಿದರೆ ಅದರಲ್ಲಿ ಬೇರೆ ಡಿಸ್ಟ್ರಿಕ್ಟ್‌ಗಳಲ್ಲಿ ಎಷ್ಟು ತೆಗೆದುಕೊಂಡಿದೆ, ತಮ್ಮ ಸ್ವಂತ ಡಿಸ್ಟ್ರಿಕ್ಟಿನಲ್ಲಿ ಎಷ್ಟು ತೆಗೆದುಕೊಂಡಿದ್ದಾರೆ ಎನ್ನುವುದು ಗೊತ್ತಾಗುತ್ತದೆ. ಅದೇ ರೀತಿ ರಾಯಚೂರು ಡಿಸ್ಟ್ರಿಕ್ಟಿನಲ್ಲಿ ಎಷ್ಟು ತೆಗೆದುಕೊಂಡಿದೆ ಅಥವಾ ತೆಗೆದುಕೊಂಡಿಲ್ಲ ಎನ್ನುವುದು ಕಾಂಗ್ರೆಸ್ ಸದಸ್ಯರಿಗೂ ಗೊತ್ತಿದೆ. ಆದರೆ ನಮ್ಮ ಜಿಲ್ಲೆಯ ಕಾಂಗ್ರೆಸ್ ಸದಸ್ಯರು ಇದನ್ನು ಬಾಯಿಂದ ಹೇಳಲು ತಯಾರಿಲ್ಲ. ಯಾಕೆಂದರೆ, ಅವರಿಗೆ ಪಾರ್ಟಿ ಬ್ರೈಂಡಿಂಗ್ ಇರುತ್ತದೆ ಅದರಿಂದ ಅನಿವಾರ್ಯವಾಗಿ ಹಾಗೆ ಹೇಳಬೇಕಾಗುತ್ತದೆ. ಅದೇ ರೀತಿ ನಮ್ಮ ಮಾನ್ಯ ಮಂತ್ರಿಗಳು ಎಲ್ಲ ಕಡೆ ನಿಸ್ವಾರ್ಥ ಸೇವೆ ಮಾಡಿದರೆ, ಎಲ್ಲಾ ಮಂತ್ರಿಗಳು ಅದೇ ರೀತಿ ಮಾಡಿದರೆ ನಮ್ಮಂಥ ವಿರೋಧ ಪಕ್ಷದ ಸದಸ್ಯರು ಹೀಗೆ ಹೇಳುವ ಅವಶ್ಯಕತೆ ಇಲ್ಲಿ ಇರಬೇಕಾದ

ಆವಶ್ಯಕತೆ ಬೀಳುವುದಿಲ್ಲ ಅಲ್ಲವೇ? ವೇಳೆ ನನಗೆ ಸಾಕಷ್ಟು ಇಲ್ಲದ್ದರಿಂದ ಇಷ್ಟು ಹೇಳಿ ನನ್ನ ಈ ಎರಡು ಮಾತು ಮುಗಿಸುತ್ತೇನೆ.

[MR. DEPUTY SPEAKER in the Chair]

4.00 P.M.

†ಶ್ರೀ ಬಿ. ವಿಠಲದಾಸ ಶೆಟ್ಟಿ (ಪುತ್ತೂರು).—ಸನ್ಮಾನ್ಯ ಅಧ್ಯಕ್ಷರೇ, ಲೋಕೋಪಯೋಗಿ ಇಲಾಖೆಯ ಮಂತ್ರಿಗಳು ಮಂಡಿಸಿದ ಬೇಡಿಕೆಯನ್ನು ಸ್ವಾಗತಿಸುತ್ತ ಕೆಲವು ಸಲಹೆಗಳನ್ನು ಕೊಡಲು ಇಚ್ಛಿಸುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾಕಷ್ಟು ಕೆಲಸವಾಗಿದೆ. ಇಲ್ಲಿ ಅನೇಕ ಗೆಳೆಯರು ಹೇಳುತ್ತಿದ್ದಾರೆ, ಬಹಳ ಕೆಲಸವಾಗಿದೆ ಎಂಬುದಾಗಿ. ಅಲ್ಲಿ ಕೆಲಸ ಆಗಿದ್ದು ಹೌದು. ಆದರೆ ಯಾವ ಕೆಲಸವಾಗಿದೆ ಎಂದರೆ ಅಲ್ಲಿ ಬಂದರು, ಐರನ್ ಓರ್ ರೋಡ್ ಇಂಥ ಕೆಲಸಗಳಾಗಿವೆ. ಬಂದರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಗಿದೆ. ಅಂದ ಮಾತ್ರಕ್ಕೆ ಅದು ದಕ್ಷಿಣ ಕನ್ನಡ ಜಿಲ್ಲೆಗೆ ಮಾತ್ರ ಸಂಬಂಧಿಸಿದ್ದಲ್ಲ, ಇಡೀ ರಾಜ್ಯಕ್ಕೆ ಸಂಬಂಧಪಟ್ಟದ್ದಿದೆ. ವೆಸ್ಟ್ ಕೋಸ್ಟ್ ರೋಡ್ ಕೂಡ ಅಷ್ಟೇ. ಅದೂ ನಮ್ಮ ರಾಜ್ಯಕ್ಕೆ ಸಂಬಂಧಿಸಿದ್ದು. ಇಲ್ಲಿ ವಿಧಾನ ಸೌಧ ಇದೆ. ಇದನ್ನು ನೋಡಿ ಬೆಂಗಳೂರು ಜಿಲ್ಲೆಯಲ್ಲಿ ಬಹಳ ಕೆಲಸವಾಗಿದೆ ಎಂದರೆ ಅದು ಬಹಳ ಅನ್ಯಾಯವಾದೀತು. ಅದೇ ದೃಷ್ಟಿಯಲ್ಲಿ ಅನೇಕ ಕೆಲಸಗಳು ಮಂಗಳೂರಿನಲ್ಲಿ ಆಗಿವೆ. ಆದರೆ ಮಂಗಳೂರಿನಲ್ಲಿ ಬಹಳ ಕೆಲಸಗಳಾಗಿವೆ ಎಂದು ಹೇಳುವುದನ್ನು ನಾನು ಒಪ್ಪಿಕೊಳ್ಳುವುದಕ್ಕೆ ಸಿದ್ಧನಾಗಿಲ್ಲ, ಅದು ಸರಿಯಲ್ಲ.

ನನ್ನ ಕ್ಷೇತ್ರ ಪುತ್ತೂರು. ಟೌನ್ ವಾಟರ್ ಸಪ್ಲೈ ಕೆಲಸ ಐದು ವರ್ಷಗಳಿಂದ ಪರಿಶೀಲನೆಯ ಮಟ್ಟದಲ್ಲಿಯೇ ಇದೆ. ಲೋಕೋಪಯೋಗಿ ಶಾಖೆಯವರನ್ನು ಕೇಳಿದರೆ ಮುನಿಸಿಪಾಲಿಟಿ ಮಂತ್ರಿಗಳಿಗೆ ಸಂಬಂಧಿಸಿದ್ದು ಎಂದು ಹೇಳುತ್ತಾರೆ. ಅವರ ಹತ್ತಿರ ಹೋದರೆ ಲೋಕೋಪಯೋಗಿ ಮಂತ್ರಿಗಳಿಗೆ ಸಂಬಂಧಿಸಿದ್ದು ಎಂದು ಹೇಳುತ್ತಾರೆ. ಐದು ವರ್ಷಗಳಿಂದ ಇದು ಹೀಗೆಯೇ ಉಂಟು. ಇದಕ್ಕೆ ಹೆಚ್ಚಿನ ಹಣ ಕೇಂದ್ರ ಸರ್ಕಾರದಿಂದ ನಮಗೆ ಸಿಕ್ಕುವಂಥ ಭರವಸೆ ಇದ್ದರೂ ಸಂಬಂಧಪಟ್ಟ ಕಾಗದಗಳು ಇನ್ನೂ ಕೇಂದ್ರ ಸರ್ಕಾರಕ್ಕೆ ಹೋಗಿಲ್ಲ; ಅಂಥ ಬೇಡಿಕೆಯನ್ನು ಸರ್ಕಾರ ಮಾಡಿಕೊಂಡಿಲ್ಲ. ಈ ದೃಷ್ಟಿಯಿಂದ ಇದನ್ನು ಆದಷ್ಟು ತೀವ್ರವಾಗಿ ಪರಿಶೀಲಿಸಿ ಈ ಕೆಲಸವನ್ನು ಮಾಡಿಸಿಕೊಡಬೇಕು ಎಂದು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಬಂಟವಾಳ ತಾಲ್ಲೂಕಿನಲ್ಲಿ ಒಳ್ಳೆಯ ಕೆಲಸವಾಗಿದೆ ಎಂದು ಹೇಳುತ್ತೇನೆ. ಇಲ್ಲಿ ಹಾದು ಹೋಗುವ ಮಣಿ ಉಳ್ಳಾಲ ರಸ್ತೆಗೆ 35 ಲಕ್ಷ ರೂಪಾಯಿನಲ್ಲಿ 15 ಲಕ್ಷ ರೂಪಾಯಿ ಖರ್ಚು ಮಾಡಿದ್ದಾರೆ. ಇದು ಬಹಳ ದೊಡ್ಡ ರಸ್ತೆ. ಇಲ್ಲಿ ಒಂದು ಸೇತುವೆಯಾದರೂ ಸರಿಯಾಗಿ ಆಗಿಲ್ಲ. ಒಂದು ಸೇತುವೆ ಆಗಿದೆ. ನಂದಾವರ ಸೇತುವೆ ಆಗುವಾಗ ಒಂದು ಅಬಟ್‌ಮೆಂಟ್ ವೆಲ್ ಅರ್ಧ ಬಂಡೆಯಲ್ಲಿ, ಅರ್ಧ ಮಣ್ಣಿನಲ್ಲಿ ಇದೆ. ಒಂದು ವರ್ಷದಿಂದ ಹಾಗೆಯೇ ಇದೆ. ಅದಕ್ಕೆ ಒಂದು ಆರ್ಡರ್ ಬರಲಾರದೆ ಕಂಟ್ರಾಕ್ಟರ್ ಹಾಗೆಯೇ ಇಟ್ಟುಕೊಂಡಿದ್ದಾನೆ. ಇಂಥ ಅನೇಕ ಸೇತುವೆಗಳು ಅಲ್ಲಿ ಆಗದೆ ಇವೆ, ಇಷ್ಟೆಲ್ಲ ಹಣ ಖರ್ಚು ಮಾಡಿದಂಥ ರಸ್ತೆಯಿಂದ ಪ್ರಯೋಜನವೇನು ಇವೊತ್ತು ಕಾಣಿಸುವುದಿಲ್ಲ. ಆದುದರಿಂದ ಕೂಡಲೆ ಪರಿಶೀಲನೆ ಮಾಡಿ ಇದಕ್ಕೆ ಒಂದು ಆರ್ಡರ್ ಮಾಡಬೇಕೆಂದು ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ರೂರಲ್ ಕಮ್ಯುನಿಕೇಷನ್ ರಸ್ತೆಗಳ ವಿಷಯ ಕಳೆದ ಬಾರಿ ಹೇಳಿದ್ದೇನೆ. ಆ ರಸ್ತೆಗಳಿಗೆ ಬೇಕಾದಷ್ಟು ಹಣ ಖರ್ಚು ಮಾಡಿದ್ದಾರೆ. ಅದರಲ್ಲಿ ಏನೂ ಪ್ರಯೋಜನವಿಲ್ಲ. ಆಗಿರತಕ್ಕ ರಸ್ತೆಗಳಿಗೆ ಎಷ್ಟೋ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದರೂ ಅದೇ ರೀತಿಯಲ್ಲಿ ಇವೆ, ಏನು ಮಾಡಿದರೂ ಅದರಲ್ಲಿ ವಾಹನ ಹೋಗಲಿಕ್ಕೆ ಸಾಧ್ಯವಿಲ್ಲ. ಒಂದೆರಡು ವರ್ಷ ಹೀಗೆಯೇ ಆದರೆ ಮಾರ್ಗವಿದೆಯೇ ಇಲ್ಲವೋ ಎಂದು ಗುರುತಿಸುವುದಕ್ಕೆ ಕಷ್ಟವಾಗುವ ಪರಿಸ್ಥಿತಿ ಇದೆ. ಆದುದರಿಂದ ಮಾನ್ಯ ಮಂತ್ರಿಗಳು ಇದನ್ನು ತಾಲ್ಲೂಕು ಬೋರ್ಡುಗಳಿಗೆ ವಹಿಸುವಂತೆ ವಿಧಾಯಕ ಮಾಡಿ, ಅದಕ್ಕೆ ಹಣದ ವ್ಯವಸ್ಥೆ ಮಾಡಿ ದಾರಿ ತೋರಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಮಾನ್ಯ ಸದಸ್ಯರಾದ ಶ್ರೀ ಭಾಸ್ಕರ ಶೆಟ್ಟರು ಹೇಳಿದರು, ವಿರೋಧ ಪಕ್ಷದವರ ಕ್ಷೇತ್ರಗಳಲ್ಲಿ ಈ ಸರ್ಕಾರ ಕೆಲಸ ಮಾಡಿಸುವುದಿಲ್ಲ ಎಂದು. ಪ್ರಕೃತ ಪರಿಸ್ಥಿತಿಯಲ್ಲಿ ವಿರೋಧ ಪಕ್ಷ ಉಂಟೋ ಇಲ್ಲವೋ ಎಂದು ನನಗೆ ಅನುಮಾನ. ರಾಜ್ಯಸಭೆ ಮತ್ತು ವಿಧಾನ ಪರಿಷತ್ತಿನ ಸ್ಥಾನಗಳಿಗೆ ನಿಂತಿರುವ ಅಭ್ಯರ್ಥಿಗಳನ್ನು ನೋಡುವಾಗ ವಿರೋಧಪಕ್ಷದ ಅಭ್ಯರ್ಥಿಗಳು ಯಾರು ಎಂದು ಅರ್ಥವಾಗುವುದಿಲ್ಲ. ಅದು ನಮಗೆ ಸಂಬಂಧಪಟ್ಟ ವಿಷಯವಲ್ಲ. ವಿರೋಧಪಕ್ಷದ ಸದಸ್ಯರ ಕ್ಷೇತ್ರದಲ್ಲೇ ಏನೂ

(ಶ್ರೀ ಬಿ. ವಿಠಲ್‌ದಾಸ್ ಶೆಟ್ಟಿ)

ಕೆಲಸ ಮಾಡಿಲ್ಲ ಎಂದು ಹೇಳಿದ್ದಾರೆ. ಕುಂದಾಪುರ ತಾಲ್ಲೂಕಿನಲ್ಲಿ ಹಾರಾಡಿ ಎಂದು ಒಂದು ಸ್ಥಳ ವಿದೆ, ಒಂದು ನದಿಯೂ ಇವೆ. ಅದು 10 ಮೈಲು ದೂರ ಮೂರು ನಾಲ್ಕು ಗ್ರಾಮಗಳಲ್ಲಿ ಹರಿದು ಹೋಗುತ್ತದೆ. ಅದು ಹೆಚ್ಚಾಗಿ ಕಾಂಗ್ರೆಸ್ ಅಭ್ಯರ್ಥಿಗಳಿಗೆ ಓಟು ಕೊಟ್ಟ ಸ್ಥಳ. ಆ ಸ್ಥಳದಲ್ಲಿ ಇಷ್ಟರವರೆಗೂ ವಿದ್ಯುಚ್ಛಕ್ತಿ ಹೋಗಲಿಲ್ಲ ಎಂದು ಆ ಜನ ಹೇಳುತ್ತಾರೆ. ಈ ಸರ್ಕಾರ ಯಾವುದಾದರೂ ಕೆಲಸವನ್ನು ಮಾಡುವಾಗ ವಿರೋಧಪಕ್ಷದವರ ಕ್ಷೇತ್ರಗಳಲ್ಲಿ ಹೆಚ್ಚು ಕೆಲಸ ಮಾಡುವಂಥ ಯೋಜನೆಯನ್ನು ಇಟ್ಟುಕೊಂಡಿದ್ದಾರೆ. ಅದುದರಿಂದ ತಪ್ಪು ತಿಳಿದುಕೊಂಡು ಯಾವುದನ್ನೂ ಹೇಳ ಬಾರದು. ಬಜೆಟ್ ಅಂದಾಜುಗಳ 275, 285, ಮತ್ತು 384 ಪುಟಗಳನ್ನು ನೋಡಿದರೆ ದಕ್ಷಿಣ ಕನ್ನಡ ಜಿಲ್ಲೆಯ ಯಾವ ಯಾವ ಪ್ರದೇಶಗಳಲ್ಲಿ ನಮ್ಮ ಪಕ್ಷದವರ ಕ್ಷೇತ್ರದಲ್ಲಿ ಕೆಲಸವಾಗಿದೆ, ವಿರೋಧ ಪಕ್ಷದವರ ಕ್ಷೇತ್ರಗಳಲ್ಲಿ ಕೆಲಸವಾಗಿದೆ ಎಂದು ಗೊತ್ತಾಗುತ್ತದೆ.

ವಿದ್ಯುಚ್ಛಕ್ತಿ ವಿಚಾರದಲ್ಲಿ ಒಂದು ಸಲಹೆಯನ್ನು ಕೊಡಲು ಇಚ್ಛಿಸುತ್ತೇನೆ. ಎಲೆಕ್ಟ್ರಿಸಿಟಿ ಬೋರ್ಡ್ ಘನವಾದ ದೊಡ್ಡ ಉದ್ದೇಶದಲ್ಲಿ ರಚಿಸಲ್ಪಟ್ಟಿತು. ನನಗೆ ಕಾಣುವುದು ಏನೆಂದರೆ, ಎಲೆಕ್ಟ್ರಿಸಿಟಿ ಬೋರ್ಡ್ ತೆಗೆದುಹಾಕಿ ಅದನ್ನು ಸರ್ಕಾರದ ಲೋಕೋಪಯೋಗಿ ಇಲಾಖೆಯಂತೆ ನಡೆಸಿ ಕೊಂಡು ಹೋದರೆ ಒಳ್ಳೆಯದೆಂದು ಕಾಣುತ್ತದೆ. ಎಲೆಕ್ಟ್ರಿಸಿಟಿ ಬೋರ್ಡ್ ನಮ್ಮ ರಾಜ್ಯದಲ್ಲಿ ಕೆಲಸ ಮಾಡುವುದಕ್ಕಿಂತ ಚೆನ್ನಾಗಿ ಲೋಕೋಪಯೋಗಿ ಇಲಾಖೆ ಕೆಲಸ ಮಾಡುತ್ತಿದೆ. ಅದನ್ನು ಮಂತ್ರಿ ಗಳ ಕೈಕೆಳಗೆ ಒಬ್ಬ ಚೀಫ್ ಇಂಜಿನಿಯರ್ ಅವರ ಆಡಳಿತದಲ್ಲಿ ಇಟ್ಟುಕೊಂಡರೆ ಬಹಳ ಚೆನ್ನಾಗಿ ಕೆಲಸ ಮಾಡುತ್ತದೆಂದು ನನಗೆ ಕಾಣುತ್ತದೆ. ಎಲೆಕ್ಟ್ರಿಸಿಟಿ ಬೋರ್ಡ್ ಯಾವ ರೀತಿ ಕೆಲಸ ಮಾಡು ತ್ತಿದೆ ಎನ್ನುವುದಕ್ಕೆ ಒಂದೇ ಒಂದು ಉದಾಹರಣೆಯನ್ನು ಕೊಡುತ್ತೇನೆ. ಬಂಟವಾಳ ತಾಲ್ಲೂಕಿ ನಲ್ಲಿ ಒಬ್ಬ ಸೂಪರ್‌ವೈಸರ್ ಬಹಳ ತೊಂದರೆ ಕೊಡುತ್ತಿದ್ದ. ಅತನನ್ನು ಟ್ರಾನ್ಸ್‌ಫರ್ ಮಾಡಿದರು. ಇವೊತ್ತು ಆತ ಆಫೀಸಿಗೆ ಬೀಗ ಹಾಕಿಕೊಂಡು, ಬೀಗ ಕೊಡುವುದಿಲ್ಲ ಎಂದು ಎರಡು ತಿಂಗಳಿನಿಂದ ಅಲ್ಲಿಯೇ ಕುಳಿತುಕೊಂಡಿದ್ದಾನೆ. ಈ ನಮೂನೆ ವ್ಯವಹಾರ, ಆಡಳಿತ, ಎಲೆಕ್ಟ್ರಿಸಿಟಿ ಬೋರ್ಡಿನಲ್ಲಿ ನಡೆಯುತ್ತಿದೆ. ಎಲೆಕ್ಟ್ರಿಸಿಟಿ ಬೋರ್ಡ್ ಈ ರಾಜ್ಯಕ್ಕೆ ಒಳ್ಳೆಯದಲ್ಲ. ಎಲೆಕ್ಟ್ರಿಸಿಟಿ ಬೋರ್ಡನ್ನು ರದ್ದು ಮಾಡಿ ಸರ್ಕಾರದಿಂದಲೇ ಅದನ್ನು ನಡೆಸಿಕೊಂಡು ಬರುವಂಥ ವ್ಯವಸ್ಥೆ ಮಾಡುವುದು ಉತ್ತಮ ಎಂದು ಹೇಳಬಯಸುತ್ತೇನೆ.

ನೀರಾವರಿ ವಿಚಾರದಲ್ಲಿ ಒಂದು ಸಲಹೆಯನ್ನು ಕೊಡಲಿಕ್ಕೆ ಇಚ್ಛಿಸುತ್ತೇನೆ. ನಮ್ಮಲ್ಲಿ ದೊಡ್ಡ ದೊಡ್ಡ ನೀರಾವರಿ ಯೋಜನೆಗಳು ಯಾವುವೂ ಇಲ್ಲ. ಮಾಡಲಿಕ್ಕೆ ಸಾಧ್ಯವೂ ಇಲ್ಲ. ಅದು ಮಲೆ ನಾಡು ಪ್ರದೇಶ. ದೊಡ್ಡ ಅಣೆಕಟ್ಟೆಗಳನ್ನು ಕಟ್ಟಿದರೂ ಬಹುಶಃ ಅಲ್ಲಿನ ಪ್ರದೇಶವೆಲ್ಲ ಮುಳುಗಿ ಹೋಗುವಂಥ ಪರಿಸ್ಥಿತಿ ಬರಬಹುದು. ಆದುದರಿಂದ ನನ್ನ ಸಲಹೆ ಏನೆಂದರೆ ನಮ್ಮ ಜಿಲ್ಲೆಗಳಲ್ಲಿ ಹಲವಾರು ನದಿಗಳಿವೆ. ಒಂದು ನದಿಯಿಂದ ಒಂದು ನದಿಗೆ ಕಾಲುವೆ ಮಾಡಿ ಎಲ್ಲ ನದಿಗಳಲ್ಲಿಯೂ ನೀರು ಹರಿಯುವಂತೆ ಯೋಜನೆಯನ್ನು ಪರಿಶೀಲಿಸಬೇಕು ಎಂದು ಸರ್ಕಾರವನ್ನು ವಿನಂತಿ ಮಾಡಿ ಕೊಳ್ಳುತ್ತೇನೆ.

ಲಿಫ್ಟ್ ಇರಿಗೇಷನ್ ಅನೇಕ ಜಿಲ್ಲೆಗಳಲ್ಲಿ ಮಾಡಬೇಕು. ನಮ್ಮಲ್ಲಿ ಅನೇಕ ನದಿಗಳಿದ್ದರೂ ಅವುಗಳಿಂದ ಲಿಫ್ಟ್ ಇರಿಗೇಷನ್ ಮಾತ್ರ ಮಾಡುವ ಸೌಲಭ್ಯವಿದೆ. ಇದನ್ನು ಕೂಡ ಸರ್ಕಾರದವರು ಪರಿಶೀಲಿಸಿ ದಕ್ಷಿಣ ಕನ್ನಡ ಜಿಲ್ಲೆಗೆ ಲಿಫ್ಟ್ ಇರಿಗೇಷನ್ ಜಾಸ್ತಿ ಕೊಡುವಂತೆ ಮಾಡಬೇಕೆಂದು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಈ ಮಾತುಗಳನ್ನು ಹೇಳಿ, ಇದಕ್ಕೆ ಅವಕಾಶ ಕೊಟ್ಟದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸುತ್ತೇನೆ.

† ಶ್ರೀ ಎಸ್. ಎಸ್. ಶೆಟ್ಟರ್.—ಸನ್ಮಾನ್ಯ ಅಧ್ಯಕ್ಷರೇ, ಈ ಬೇಡಿಕೆಗಳನ್ನು ವಿರೋಧಿಸುತ್ತಾ ನಾಲ್ಕು ಮಾತುಗಳನ್ನಾಡ ಬಯಸುತ್ತೇನೆ. ಇವತ್ತಿನ ದಿನ ಸಂಬಂಧಪಟ್ಟ ಮಂತ್ರಿಗಳು ಮದ್ರಾಸಿ ನವರಿಗೆ ಅತಿ ಉದಾರವಾಗಿ ಮತ್ತು ಕಡಮೆ ಬೆಲೆಯಲ್ಲಿ ವಿದ್ಯುಚ್ಛಕ್ತಿಯನ್ನು ಒದಗಿಸುವುದಾಗಿ ಹೇಳಿದ್ದಾರೆ. ಆದರೆ ನಮ್ಮ ಮೈಸೂರು ರಾಜ್ಯದಲ್ಲಿ ಮನೆಯ ಬಳಕೆಗೆ ಉಪಯೋಗಿಸುವ ವಿದ್ಯು ಚ್ಛಕ್ತಿಗೆ ದರವನ್ನು ಏರಿಸುತ್ತಿದ್ದಾರೆ. ಇದಕ್ಕೆ ಕಾರಣವೇನು, ಏಕೆ ಏರಿಸಬೇಕು, ನಮ್ಮ ಜನರು ಮಾಡಿರುವ ಪಾಪವಾದರೂ ಏನು ಎಂದು ಪ್ರಶ್ನೆಮಾಡಬೇಕಾಗಿದೆ. ಜಾಣನ ಹೆಂಡತಿ ಬೆತ್ತಲೆ ಎಂದು ಹೇಳುವ ಹಾಗೆ ನಾವು ಉತ್ಪತ್ತಿ ಮಾಡುವ ಪವರ್ ನಾವು ಉಪಯೋಗಮಾಡಲು ಹೆಚ್ಚು ದರ ಹಾಕಿ ಬೇರೆಯವರಿಗೆ ಕಡಮೆ ಬೆಲೆಯಲ್ಲಿ ಕೊಡುವುದರ ಔಚಿತ್ಯವೇನು ? ಇದಲ್ಲದೆ ಇದರಲ್ಲಿ ಎರಡು ವಿಧಾನಮಾಡಿದ್ದಾರೆ, ಒಂದು ಮನೆಗೆ ಉಪಯೋಗಮಾಡುವುದು, ಇನ್ನೊಂದು ಹೀಟಿಂಗ್

ಸರ್‌ಕ್ಯೂಟ್ ವಗ್ಗೈರೆಗೆ ಉಪಯೋಗಿಸುವುದು. ಮನೆಯಲ್ಲಿ ಬೆಳಕಿಗಾಗಿ ಉಪಯೋಗಿಸುವುದಕ್ಕೆ ರಿಯಾಯಿತಿ ಇಲ್ಲ, ಹೀಟಿಂಗ್ ಸರ್ಕ್ಯೂಟ್ ಇದ್ದು ಸ್ನಾನಕ್ಕೆ ನೀರು ಕಾಯಿಸುವುದು, ಅಡಿಗೆ ಮುಂತಾದುವುಗಳಿಗೆ ಒದಗಿಸಿದರೆ ಕಡಮೆ ದರ ವಿಧಿಸುತ್ತಾರೆ. ಈ ಭೇದಭಾವವೇಕೆ? ಒಮ್ಮೆ ಈ ಸೌಲತ್ತನ್ನು ಕೊಟ್ಟಮೇಲೆ ಎಲ್ಲಕ್ಕೂ ಒಂದೇ ಸಮನಾದ ದರ ಇರಬೇಕು. ಇಂದು ಎಂ. ಎಸ್. ಇ. ಬಿ. ಕೆಲಸ ಸರಿಯಾಗಿಲ್ಲ. ಬೆಲೆ ಏರಿಸುತ್ತಿರುವುದನ್ನು ಅನೇಕ ಸಲ ವಿರೋಧಿಸಲಾಗಿದೆ.

ಇನ್ನು ಹಾವೇರಿ ಡಿವಿಜನ್ನಿನ ಒಬ್ಬ ಕಂಟ್ರಾಕ್ಟರ ವಿಚಾರ ಹೇಳಬೇಕಾಗಿದೆ. ಅವನು ಒಂದು ರಸ್ತೆಯ ಕೆಲಸವನ್ನು ಮುಗಿಸಿದ ನಂತರ ತಾನಿಟ್ಟಿದ್ದ ಡಿಪಾಜಿಟ್ಟನ್ನು ವಾಪಸು ಕೊಡಿ ಎಂದು ಎರಡು ವರ್ಷದಿಂದಲೂ ಕೇಳಿದರೂ ಏಕೆ ಕೊಡಲಿಲ್ಲ? ಅತನು ಪ್ರಾಮಾಣಿಕನಾಗಿ ಕೆಲಸ ಮಾಡಿದ್ದಾನೆ ಅಂದಮೇಲೆ ಏಕೆ ಡಿಪಾಜಿಟ್ಟನ್ನು ವಾಪಸು ಕೊಡಬಾರದು? ಸರಕಾರದವರು ಕೊಡದಿರುವುದಕ್ಕೆ ಕಾರಣವೇನು? ಹೀಗಾದರೆ ಪ್ರಾಮಾಣಿಕವಾಗಿ ಕೆಲಸ ಮಾಡುವವರು ಮುಂದೆ ಬಂದು ಸರಕಾರದೊಂದಿಗೆ ಸಹಕರಿಸುವುದು ಹೇಗೆ? ಇದು ವಿಚಾರ ಮಾಡಬೇಕಾದ ಸಂಗತಿ. ಇಂದು ಕಂಟ್ರಾಕ್ಟರುಗಳ ಬಗ್ಗೆ ಭ್ರಷ್ಟಾಚಾರದ ದೂರುಗಳಿವೆ. ಆದರೆ ಸರಕಾರ ಮಾಡುವ ಕೆಲಸ ಹೀಗಿದೆ. ಇದನ್ನು ಗಮನಿಸಬೇಕು.

ಇನ್ನು ಸಪ್ಲಿಮೆಂಟರಿ ಬಜೆಟ್ಟಿನಲ್ಲಿ ಕೆಲವು ಕೆಲಸಗಳನ್ನು ಮಾಡಿರುವುದನ್ನು ತಿಳಿಸಿದ್ದಾರೆ. ಆದರೆ ಕರೂರು ಹೋಬಳಿಯ ದುರಂತದ ಬಗ್ಗೆ ಒಂದು ಪತ್ರ ಬಂದಿದೆ. ಬಹಳ ದಿವಸಗಳಿಂದ ಅದರ ಬಗ್ಗೆ ಪತ್ರಗಳು ಬರುತ್ತಿವೆ. ಶರಾವತಿ ವಿದ್ಯುತ್ ಯೋಜನೆಯ ಕೆಲಸವಾದ ಮೇಲೆ ಕರೂರು ಹೋಬಳಿಯ ಹಳ್ಳಿಗಳ ಬಳಿ ನೀರು ತುಂಬಿಕೊಂಡು ಹೊರಗೆ ಹೋಗಿ ಬರುವುದಕ್ಕೆ ರಸ್ತೆಯಿಲ್ಲದಂತಾಗಿದೆ. ಜನರು ಹೇಗೆ ಅಡ್ಡಾಡಬೇಕು? ಕಳಸವಳ್ಳಿ ಮತ್ತು ಅಂಬರಗೋಡಲು ಬಳಿ ನೀರು ಸಾಗರದೋಪಾದಿಯಲ್ಲಿ ನಿಂತಿದೆ, ಜನರಿಗೆ ಓಡಾಡುವುದಕ್ಕೆ ಅವಕಾಶವಿಲ್ಲ, ಒಂದು ಸ್ಟೀಂಲಾಂಚ್ ಆದರೂ ಕೊಡಬೇಕು ಎಂದು ಜನರು ಬೇಡಿಕೊಂಡರು. ಆ ವಿಚಾರದಲ್ಲೇನು ಮಾಡಿದಿರಿ ಎಂದು ಕೇಳುತ್ತೇನೆ. ಅದನ್ನು ಕೊಟ್ಟಿರುವುದಿಲ್ಲವೆಂದು ತಿಳಿದುಬಂದಿದೆ. ಸರಕಾರದ ನೀತಿ ವಿಚಿತ್ರವಾಗಿದೆ ಇಂದು ಅಲ್ಲಿದ್ದ ಸೇತುವೆ ಕೂಡ ನಾದುರಸ್ತಾಗಿದೆ ಕರೂರು ಹೋಬಳಿಯಿಂದ ಸಾಗರಕ್ಕೆ ಹೋಗಲು ಮೊದಲು 25 ಮೈಲಿಯಾಗುತ್ತಿತ್ತು, ಈ ದಿವಸ 75 ಮೈಲಿಯಾಗುತ್ತದೆ. ಸುತ್ತಿಕೊಂಡು ಹೋಗಬೇಕು. ಈ ಪ್ರಕಾರ ಯಾವ ಒಂದು ಯೋಜನೆಯಿಂದ ಹೊಸ ಪರಿಸ್ಥಿತಿ ಉಂಟಾಗಿದೆ, ಅದನ್ನು ದುರಿಸುವುದಕ್ಕೆ ಸರಕಾರ ಸ್ವಲ್ಪವಾದರೂ ದಯಮಾಡಿ ಸಹಾಯ ಮಾಡಬೇಕು ಎಂದು ಸಲಹೆ ಮಾಡುತ್ತೇನೆ.

ಇನ್ನು ಗದುಗಿಗೆ ಪರಿಸ್ಥಿತಿಯನ್ನು ಹೇಳುತ್ತೇನೆ, ಗದುಗಿನ ಕುಡಿಯುವ ನೀರನ್ನೊದಗಿಸಲು ಒಂದು ಯೋಜನೆ ಇದೆ ಅದಾಗಿ ಬಹಳ ದಿವಸಗಳಾದುವು, ಒಂದು ಹೊಳೆಯಿಂದ ಅಲ್ಲಿಗೆ ನೀರು ಸರಬರಾಯಿ ಮಾಡಬೇಕಾಗಿದೆ, ಅವನ್ನು ಬೇಗ ಕಾರ್ಯಗತಮಾಡಬೇಕು, ವಿಳಂಬ ಮಾಡಬಾರದು. ನೀರಿನ ಪರಿಸ್ಥಿತಿ ಇಂದು ದೊಡ್ಡದೊಡ್ಡ ಪಟ್ಟಣಗಳಲ್ಲಿ ಯಾವ ಸ್ವರೂಪ ತಾಳಿದೆ, ಬೆಂಗಳೂರು ಹುಬ್ಬಳ್ಳಿ ಮುಂತಾದ ಕಡೆಗಳಲ್ಲಿ ಹೇಗಿದೆ ಎಂಬುದನ್ನು ನೋಡಬಹುದು. ಊರಿನ ಸ್ವಚ್ಛತೆ ಮತ್ತು ಅರೋಗ್ಯ ಉಳಿಯಬೇಕಾದರೆ ಮುಖ್ಯವಾಗಿ ನೀರು ಬೇಕು. ಇದರ ಬಗ್ಗೆ ಕೂಡ ಸರಕಾರವನ್ನು ಒತ್ತಾಯಮಾಡುತ್ತೇನೆ.

ನಮ್ಮ ಭಾಗದಲ್ಲಿ ಅನೇಕ ಹಳ್ಳಿಗಳಿಗೆ ಮಳೆಗಾಲದಲ್ಲಿ ಹೋಗಿಬರುವುದು ಕಷ್ಟ, ಒಮ್ಮೆ ಯಾವುದಾದರೂ ಹಳ್ಳಿಗೆ ಹೋದಾಗ ಅಕಸ್ಮಾತ್ ಮಳೆ ಬಂದರೆ ಎರಡು ದಿವಸ ಹೊರಗೆ ಬರುವುದಕ್ಕಾಗುವುದಿಲ್ಲ. ಇಂಥ ಪರಿಸ್ಥಿತಿ ಇದೆ. ಅನೇಕ ಸಣ್ಣ ಸಣ್ಣ ಹಳ್ಳಿಗಳ ಬಳಿ ಸರೋವರದಂತೆ ನೀರು ನಿಲ್ಲುವುದರಿಂದ ಅದನ್ನು ದಾಟಿಕೊಂಡು ಹೊರಗೆ ಬರುವುದಕ್ಕಾಗುವುದಿಲ್ಲ. ಉದಾಹರಣೆ ಕೊಡುವುದಾದರೆ, ಬೆಣ್ಣಿಹಳ್ಳಕ್ಕೆ ಸೇತುವೆ ಕಟ್ಟುವ ಕೆಲಸ ಎರಡು ವರ್ಷದಿಂದ ನಡೆಯುತ್ತಿದೆ, ಇನ್ನೂ ಪೂರ್ಣವಾಗಿಲ್ಲ. ಏಕೆ ನಿಧಾನವಾಗಿದೆ? ಕಂಟ್ರಾಕ್ಟರು ಏಕೆ ಹಾಗೆ ಮಾಡಿದ್ದಾನೋ ಗೊತ್ತಿಲ್ಲ. ಬಹುಶಃ ಅದನ್ನು ಪೂರ್ಣಮಾಡಿ ಸಮಾರಂಭ ನಡೆಸಲು ಶ್ರೀ ಚೆಸ್ಟರ್‌ಬೌಲ್ಸ್ ಬರಬೇಕೋ ಏನೋ. ಇದೊಂದು ವಿಷಾದ ಸಂಗತಿ, ಈ ತಿಂಗಳು 27 ನೆಯ ತಾರೀಖು ಶರಾವತಿಯ 3—4 ವಿಭಾಗವನ್ನು ಉದ್ಘಾಟಿಸುವುದಕ್ಕೆ ಚೆಸ್ಟರ್‌ಬೌಲ್ಸ್‌ರವರು ಬರುತ್ತಾರಂತೆ, ಅದಕ್ಕೆ ವಿಧಾನಸಭೆಯ ಸದಸ್ಯರು ಹೋಗಿಬರಲು ಈ ಸಭೆಗೆ ಬಿಡುವು ಕೊಟ್ಟಿದ್ದಾರೆ. ದೇಶದ ಅರ್ಥಿಕ ಪರಿಸ್ಥಿತಿ ಸರಿಯಾಗಿಲ್ಲದಿರುವಾಗ ಜನರ ಹಣ ಖರ್ಚುಮಾಡಿಕೊಂಡು ಸಭೆ ನಡೆಸದೆ ಅಲ್ಲಿಗೆ ಸದಸ್ಯರೆಲ್ಲಾ ಹೋಗಬೇಕೆಂದು ಇರುವುದು ಸರಿಯೇ? ಇದಕ್ಕೆ ಕಾರಣ ಇಂದು ಅವರಿಗೆ ಶರಣುಹೋಗುವ ಪರಿಸ್ಥಿತಿ ಇದೆ, ಹಣಕ್ಕಾಗಿ ನಾವು ಪರರಿಗೆ ಗುಲಾಮರಾಗಿದ್ದೇವೆ. ಇದು ನಿಜವಾದ ಸಂಗತಿ. ಇದು ಬಹಳ ವಿಷಾದದ ಸಂಗತಿ. ಇಂದು ನಾವು ವಿದ್ಯುಚ್ಛಕ್ತಿಯನ್ನು ಸಾಕಾದಷ್ಟು ಉತ್ಪತ್ತಿ ಮಾಡಿದಮೇಲೆ ಅದು

(ಶ್ರೀ ಎಸ್. ಎಸ್. ಶೆಟ್ಟರ್)

ರೈತರಿಗೆಲ್ಲಾ ದೊರೆಯುಬೇಕು, ಬಳಕೆದಾರರಿಗೆ ಸರಿಯಾಗೆ ವಿನಿಯೋಗವಾಗಬೇಕು. ಸಾಕಷ್ಟು ಬಳಕೆದಾರರಿಗೆ ದೊರೆಯದೆ ಪ್ರಗತಿ ಕುಂಠಿತವಾಗಬಾರದು ಎಂಬುದರ ಬಗ್ಗೆ ಎಚ್ಚರ ವಹಿಸಿಲ್ಲ. ಇಂದು ಶರಾವತಿಯಲ್ಲಿ ಹೆಚ್ಚು ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡಿ ಬೇರೆ ದೇಶಗಳಿಗೆ ಕೊಡಲಾಗುತ್ತಿದೆ. ಹಾಗೆ ಕೊಡುವಾಗ ಕೇಂದ್ರ ಸರಕಾರ ಉಳಿದ ಯೋಜನೆಗಳ ಬಗ್ಗೆ ಏನು ಹೇಳುತ್ತದೆ? ನಾವು ಇಲ್ಲಿ ಉತ್ಪತ್ತಿಯಾಗುದದನ್ನು ಉಪಯೋಗಿಸಿಕೊಳ್ಳಲು ಸಾಧ್ಯವಿಲ್ಲ ಎಂದು ತಿಳಿದು ಕೇಂದ್ರ ಸರಕಾರ ನಮ್ಮ ಯೋಜನೆಗಳಿಗೆ ಸಹಾಯ ಮಾಡುವುದನ್ನು ಕಡಮೆ ಮಾಡಬಹುದು. ಆದುದರಿಂದ ಎಷ್ಟು ಸಾಧ್ಯವೋ ಅಷ್ಟನ್ನು ಇಲ್ಲೇ ನಮ್ಮ ದೇಶದಲ್ಲೇ ಉಪಯೋಗಿಸಲು ಪ್ರಯತ್ನ ಮಾಡಲೇಬೇಕು.

ಇನ್ನೂ ವಿದ್ಯುಚ್ಛಕ್ತಿ ಮಂಡಲಿಯಲ್ಲಿನ್ನಂಥ ಅನೇಕ ಕಾರ್ಮಿಕರ ಬಗ್ಗೆ ಒಂದು ಮಾತನ್ನು ಹೇಳಲಿಲ್ಲ ಎಂದರೆ ತಪ್ಪಾದೀತು. ಅಸಂತೃಪ್ತರಾದ ಕಾರ್ಮಿಕರಿಂದ ಯಾವ ಕೆಲಸವೂ ಆಗಲಿಕ್ಕೆ ಇಲ್ಲ ಎಂಬ ಮಾತು ಇದೆ. ಇವತ್ತು ಮುಂಬೈ ಸ್ಟೇಟ್‌ನಲ್ಲಿನ್ನಂಥ ವಿದ್ಯುಚ್ಛಕ್ತಿ ಮಂಡಳಿಯ ನೌಕರರು ಮೈಸೂರು ವಿದ್ಯುಚ್ಛಕ್ತಿ ಮಂಡಲಿಗೆ ವರ್ಗಾಯಿಸಲ್ಪಟ್ಟಿದ್ದಾರೆ. ಇದಾದಮೇಲೆ ಅವರ ಬಗ್ಗೆ ಇರತಕ್ಕ ಒಂದು ಕ್ಲಾಸಿಫಿಕೇಷನ್ ಅಫ್‌ಗ್ರೇಡ್ಸ್ ಇನ್ನೂವರೆಗೂ ಮಾಡಿಲ್ಲ ಎಂದು ಅವರು ಕೈಗೊಂಡು ಕುಳಿತಿದ್ದಾರೆ. ಸರ್ಕಾರದ ಕೆಲಸ ನನ್ನದು ಎಂಬ ಭಾವನೆ ಅವರಲ್ಲಿ ಹೋಗಿ ಇವತ್ತು ನನ್ನ ಗ್ರೇಡು ಈಕ್ವೇಟ್ ಆಗಿಲ್ಲ ನಾನು ಪರಕೀಯನಾಗಿದ್ದೇವೆ ಎಂಬ ಭಾವನೆ ಅವರಲ್ಲಿ ಉಳಿದರೆ ಕೆಲಸ ಸರಿಯಾಗಿ ಆಗಿಲಿಕ್ಕಿಲ್ಲ ಎಂಬ ಮಾತನ್ನು ಹೇಳಬೇಕಾಗಿದೆ.

ಇವತ್ತು ಎಷ್ಟೋ ಕಡೆ ನಿರುದ್ಯೋಗ ನಿರ್ಮಾಣವಾಗುವಂತಹ ಪರಿಸ್ಥಿತಿ ಇದೆ. ಬೆಂಗಳೂರಿನ ಪರಿಸ್ಥಿತಿಯನ್ನೇ ನೋಡಿದರೆ 500 ಜನ ಕೆಲಸಗಾರರನ್ನು ತೆಗೆದುಹಾಕುವಂತಹ ಪರಿಸ್ಥಿತಿ ಉಂಟಾಗಿತ್ತು. ಆವರೆ ಒಂದು ಸಂಧಾನ ಏರ್ಪಟ್ಟು ಅದು ಹಾಗೆಯೇ ಮುಗಿಯಿತು. ಈ ಒಂದು ಇಲಾಖೆಯಲ್ಲಿ ನೋಡಿದರೆ ಕ್ಯಾಷ್ಯುಯಲ್ ಲೇಬರರ್ಸ್ ಯಾರಿದ್ದಾರೆ ಅವರ ಒಂದು ಸಮಸ್ಯೆ ಉದ್ಭವವಾಗುತ್ತಾ ಇದೆ. ಯಾವುದಾದರೂ ಒಂದು ಯೋಜನೆಯಲ್ಲಿ ಕೆಲಸ ಮಾಡಬೇಕಾದರೆ ದಿನಕೂಲಿಯ ಮೇಲೆ ಅಸಂಖ್ಯಾತ ಜನರನ್ನು ಇಟ್ಟುಕೊಳ್ಳುತ್ತಾರೆ, ಅವರನ್ನು ಖಾಯಂ ಮಾಡುವುದಿಲ್ಲ. ಆ ಒಂದು ಯೋಜನೆ ಮುಗಿಯಿತು ಅಂದಮೇಲೆ ಅವರನ್ನು ಎಲ್ಲಿಗೆ ವರ್ಗಾಯಿಸಬೇಕು ಅಥವಾ ಅವರ ಗತಿ ಏನು ಎಂಬುದು ಗೊತ್ತಾಗುತ್ತಾ ಇಲ್ಲ, ಇಂತಹ ಒಂದು ಪರಿಸ್ಥಿತಿ ಉದ್ಭವಿಸಿದೆ, ಇದು ಒಂದು ವಿಕೋಪ ಪ್ರಸಂಗಕ್ಕೆ ಹೋಗಿದೆ. ಈ ಒಂದು ಕಾರ್ಮಿಕರ ಸಮಸ್ಯೆ ಉದ್ಭವವಾಗದ ಹಾಗೆ ನೋಡಿಕೊಂಡು ಹೋಗಬೇಕು ಮತ್ತು ಇದನ್ನು ಬಹಳ ಸಹಾನುಭೂತಿ ಪರವಾಗಿ ನೋಡಿಕೊಂಡು ಹೋಗಬೇಕೆಂದು ಹೇಳಬಯಸುತ್ತೇನೆ.

ಹುಬ್ಬಳ್ಳಿಯ ಸಮೀಪ ಅಂದರೆ ಅದರಗುಂಚಿ ಹತ್ತಿರ ಕ್ವಾರಿಯಿಂದ ಕಲ್ಲು, ಬಂಡೆಗಳನ್ನು ಎಬ್ಬಿಸಲಿಕ್ಕೆ ಸರ್ಕಾರದವರು ಒಂದು ವ್ಯವಸ್ಥೆಯನ್ನೇನೋ ನಿರ್ಮಾಣ ಮಾಡಿದ್ದೀರಿ, ಆದರೆ ಯಾರು ಈ ಕಲ್ಲು ಬಂಡೆಗಳನ್ನು ಎಬ್ಬಿಸಲಿಕ್ಕೆ ಬರುತ್ತಾರೆ? ಅವರಿಗೆ ಏನು ಅಧಿಕಾರ ಇದೆ ಎಂಬುದನ್ನು ತಿಳಿದುಕೊಳ್ಳಲಾರದೆ ಅಲ್ಲಿ ಒಂದು ಗೊಂದಲ ನಡೆದಿದೆ. ಯಾವನೋ ಒಬ್ಬ ಹೋಗಿ ನಾನು ಸರ್ಕಾರದ ವತಿಯಿಂದ ಬಂದಿದ್ದೇನೆ ಎಂದು ಹೇಳಿ ಹತ್ತು ಕಲ್ಲುಬಂಡೆಗಳನ್ನು ಎಬ್ಬಿಸಿಕೊಂಡು ಹೋಗುತ್ತಾನೆ. ಮತ್ತೊಬ್ಬ ಪಿ.ಡಬ್ಲ್ಯು.ಡಿ. ಸಾಹೇಬ್ ಅವರು ನನಗೆ ಕೊಟ್ಟಿದ್ದಾರೆ ಎಂದು ಹೇಳಿ ಇನ್ನೊಂದು ಹತ್ತು ಕಲ್ಲು ಬಂಡೆಗಳನ್ನು ಎಬ್ಬಿಸಿಕೊಂಡು ಹೋಗುತ್ತಾನೆ. ಈ ರೀತಿ ಇದು ಒಂದು * * * * ಆದ ಹಾಗೆ ಆಗಿದೆ. ಒಬ್ಬ ಏನು ಮಾಡಿದ ಎಂದರೆ ಅಧಿಕಾರಿಗಳ ಹತ್ತಿರ ಹೋಗಿ............

ಶ್ರೀ ಕೆ. ಎನ್. ವೀರಪ್ಪಗೌಡ.— * * * * * * ಅಂತ ಮಾನ್ಯ ಸದಸ್ಯರು ಹೇಳಿದರು, ಈ ರೀತಿ ಶಬ್ದಗಳನ್ನು ಉಪಯೋಗಿಸುವುದೇ ಸ್ವಾಮಿ?

Mr. DEPUTY SPEAKER.—It is unparliamentary, and that word may be expunged.

ಶ್ರೀ ಎಸ್. ಎಸ್. ಶೆಟ್ಟರ್.—ಈ ರೀತಿ ಕ್ವಾರಿ ಕೆಲಸ ನಡೆಯುತ್ತಾ ಇದೆ, ಕಲ್ಲುಗಳೆಲ್ಲಾ ಮಾಯವಾಗುತ್ತಾ ಇವೆ, ಇದರ ಕಡೆಗೆ ಲಕ್ಷ್ಯ ವಹಿಸಬೇಕೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

---

* * * * * * Words Expunged as ordered by the Chair.

ಶ್ರೀ ಕೆ. ಸಂಗನಗೌಡ (ಲಿಂಗಸೂಗೂರು).—ಸನ್ಮಾನ್ಯ ಸಭಾಪತಿಗಳೇ, ಈ ದಿವಸ ಸನ್ಮಾನ್ಯ ಲೋಕೋಪಯೋಗಿ ಸಚಿವರು ಮಂಡಿಸಿದ ಬೇಡಿಕೆಯನ್ನು ಸಮ್ಮತಿಸುತ್ತಾ ಕೆಲವು ವಿಚಾರಗಳನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ವಿರೋಧ ಪಕ್ಷದ ಸದಸ್ಯರು ಅನೇಕರು ಸರ್ಕಾರವನ್ನು ಅನೇಕ ಟೀಕೆಗಳಿಗೆ ಗುರಿಮಾಡುತ್ತಾ ಕೆಲವೊಂದು ವಿಚಾರಗಳನ್ನು ಈ ಸಭೆಯ ಗಮನಕ್ಕೆ ತಂದಿದ್ದಾರೆ. ಉದಾಹರಣೆ ಹೇಳಬೇಕೆಂದರೆ, ಸ್ವಲ್ಪಹೊತ್ತಿನ ಮುಂಚೆ ನಮ್ಮ ಒಬ್ಬ ಸ್ನೇಹಿತರು ಒಂದೇ ಕೋಮಿನವರು 9 ಮಂದಿ ಚೀಫ್ ಇಂಜಿನಿಯರು ಇದ್ದಾರೆ ಎಂದು ಟೀಕೆ ಮಾಡಿದರು. ನಾನು ಹೇಳಬಯಸುವುದು ಇಷ್ಟೆ, ಒಂದೇ ಕೋಮಿನವರನ್ನು ಬೇರೆ ಬೇರೆ ಹುದ್ದೆಗಳಲ್ಲಿ ಇಟ್ಟು ಕೆಲಸ ಮಾಡಿಸಲಿಕ್ಕೆ ಯಾವುದೇ ತರಹದ ಆತಂಕವೂ ಇಲ್ಲ ಕಾಯಿದೆ ದೃಷ್ಟಿಯಿಂದ ಅಡ್ಡಿ ಇಲ್ಲ ಎಂಬುದನ್ನು ಸ್ನೇಹಿತರು ನೆನಪಿನಲ್ಲಿ ಇಟ್ಟುಕೊಳ್ಳತಕ್ಕದ್ದು. ಯಾವ ಚೀಫ್ ಇಂಜಿನಿಯರನ್ನು ಯಾವ ಸ್ಥಾನಕ್ಕೆ ನೇಮಕ ಮಾಡಲಾಗಿದೆ ಆ ಸ್ಥಾನವನ್ನು ಅವರು ಅಲಂಕರಿಸಲಿಕ್ಕೆ ಯೋಗ್ಯರಾಗಿದ್ದಾರೆ, ಆಯಾಯ ಖಾತೆಯಲ್ಲಿ ಅವರು ಪರಿಣತರಾಗಿದ್ದಾರೆ ಎಂಬುದನ್ನು ಮಾನ್ಯ ಸ್ನೇಹಿತರು ನೆನಪಿನಲ್ಲಿಟ್ಟುಕೊಳ್ಳಬೇಕಾದ ಸಂಗತಿ.

ಶ್ರೀ ಸದಾಶಿವಪ್ಪ ಪಾಟೀಲ್.—ಇದರಿಂದ ಒಂದು ಸಮಸ್ಯೆ ಬರದಂತೆ ನೋಡಿಕೊಳ್ಳಬೇಕೆಂದು ಹೇಳಿದೆನೇ ಹೊರತು ಇರಬಾರದು ಎಂದು ಹೇಳಲಿಲ್ಲ.

ಶ್ರೀ ಕೆ. ಸಂಗನಗೌಡ.—ಈ ಪ್ರಸಂಗದಲ್ಲಿ ಹೇಳಬಯಸುವುದು ಇಷ್ಟೆ. ಕಾಂಗ್ರೆಸ್ ಪಕ್ಷದ ಸದಸ್ಯರೇ ಇರಲಿ, ವಿರೋಧ ಪಕ್ಷದ ಸದಸ್ಯರೇ ಇರಲಿ ನಾವು ಪ್ರಜಾಪ್ರಭುತ್ವ ತತ್ವದಮೇಲೆ ನಮ್ಮ ಸರ್ಕಾರವನ್ನು ನಡೆಸಿಕೊಂಡು ಹೋಗುವ ಕಾಲದಲ್ಲಿ ಸರ್ಕಾರ ಯಾವುದಾದರೂ ಸ್ಟೇಜ್‌ನಲ್ಲಿ ತಪ್ಪು ಮಾಡಿದರೆ ಅದನ್ನು ಕಟುವಾಗಿ ಟೀಕಿಸುವುದೂ ಕೂಡ ಆಡಳಿತ ಪಕ್ಷದ ಶಾಸಕರ ಕರ್ತವ್ಯ ಕೂಡ ಅದೆ, ಅದೇರೀತಿ ವಿರೋಧ ಪಕ್ಷದವರ ಕರ್ತವ್ಯ ಕೂಡ, ಸರ್ಕಾರದ ಗಮನವನ್ನು ಸೆಳೆಯುವುದಾಗಿದೆ. ಈ ದೃಷ್ಟಿಯಿಂದ ಆಡಳಿತ ಪಕ್ಷದ ಶಾಸಕರು ಎಂದೂ ಕೂಡ ಸರ್ಕಾರದ ನೀತಿಯನ್ನು ಟೀಕೆ ಮಾಡುವುದರಲ್ಲಿ ಹಿಂದುಳಿದಿಲ್ಲ ಎಂಬುದನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಈಗ ನೀರಾವರಿ ದೃಷ್ಟಿಯಿಂದ ನಾನು ಸರ್ಕಾರದವರಿಗೆ ತಿಳಿಸುವುದೆ ಇಷ್ಟೆ. ಕೃಷ್ಣಾ ಮೇಲ್‌ದಂಡೆ ಯೋಜನೆ, ಹಾರಂಗಿ ಹೇಮಾವತಿ ಯೋಜನೆ ಇಂತಹ ಅನೇಕ ದೊಡ್ಡ ಯೋಜನೆಗಳು ನಮ್ಮ ಸರ್ಕಾರದ ಮುಂದೆ ಇರುವಾಗ ಕೇವಲ ಕೇಂದ್ರಸರ್ಕಾರದ ಅನುಮತಿ ಅಥವಾ ಕ್ಲಿಯರೆನ್ಸ್ ಬಗ್ಗೆ ಕಾದುಕೊಂಡು ಕುಳಿತಿರುವುದು ಒಳ್ಳೆಯದಲ್ಲ ಎಂದು ಹೇಳುವುದಕ್ಕೆ ಮುಂಚೆ ಈ ಪ್ರಸಂಗದಲ್ಲಿ ಕೃಷ್ಣಾ ಮೇಲ್‌ದಂಡೆ ಯೋಜನೆ ಬಗ್ಗೆ ಹೇಳಬಯಸುತ್ತೇನೆ. ಇದು ನಮ್ಮ ರಾಜ್ಯದ ಬೃಹತ್ ಯೋಜನೆ, ಈ ಯೋಜನೆ ಪೂರ್ಣಗೊಂಡರೆ ಸರ್ವಸಾಧಾರಣ 21 ಲಕ್ಷ ಎಕರೆ ಜಮೀನಿಗೆ ನೀರಾವರಿಯಾಗುವ ಸಂಭವ ಇದೆ. ಸರ್ಕಾರದವರು ಈ ಬಗ್ಗೆ 5–6 ವರ್ಷಗಳನ್ನು ಕಳೆದಿದ್ದಾರೆ ಸಾಕಾದಷ್ಟು ಕಾಲಾತೀತವಾಗಿದೆ, ಇನ್ನು ಮುಂದೆ ಕಾಲವಿಳಂಬ ಮಾಡದೆ ಈ ಯೋಜನೆಯನ್ನು ಕಾರ್ಯಗತ ಮಾಡಲು ಏರ್ಪಾಡು ಮಾಡಬೇಕು. ಸರ್ಕಾರ ಕೇವಲ ನೋಟೀಸ್‌ನ್ನು ಕೊಡುತ್ತೇನೆ ಎಂದು ಹೇಳಿ ಅಥವಾ ನೋಟೀಸ್ ಕೊಟ್ಟು ಕೇಂದ್ರಸರ್ಕಾರದ ಗಮನ ಸೆಳೆದರೆ ಈ ಯೋಜನೆ ಕಾರ್ಯಗತವಾಗುವುದಿಲ್ಲ. ಕೇವಲ ಭಾಷಣ ಮಾಡುವುದರಿಂದ ಅಥವಾ ಒಳ್ಳೆಯ ಮಾತುಗಳನ್ನು ಹೇಳುವುದರಿಂದ ಈ ಕೆಲಸವಾಗುವುದಿಲ್ಲ. ಆಂಧ್ರ ಪ್ರದೇಶದ ಮುಖ್ಯಮಂತ್ರಿಗಳಾದ ಬ್ರಹ್ಮಾನಂದ ರೆಡ್ಡಿಯವರು ಒಂದು ಪ್ರಶ್ನೆಗೆ ಉತ್ತರ ಕೊಡುತ್ತಾ ಏನು ಹೇಳಿದ್ದಾರೆ ಎಂಬುದನ್ನು ನಮ್ಮ ಸ್ನೇಹಿತರು ಈ ಸಭೆಯ ಪ್ರಶ್ನೋತ್ತರ ಸಮಯದಲ್ಲಿ ತಮ್ಮ ಗಮನಕ್ಕೂ ಸರ್ಕಾರದವರ ಗಮನಕ್ಕೂ ತಂದಿದ್ದಾರೆ. ಅದು ನಿಜವಾಗಿಯೂ ಹಾಸ್ಯಾಸ್ಪದ. ಅದು ನಮ್ಮ ಸರ್ಕಾರದ ಮೇಲೆ ಪರಿಣಾಮ ಮಾಡುವಂತಹ ಸಂಗತಿ, ಈ ದೃಷ್ಟಿಯಿಂದ ಸರ್ಕಾರದವರು ಅದನ್ನು ಲಕ್ಷ್ಯಕ್ಕೆ ತೆಗೆದುಕೊಂಡು ಈ ಯೋಜನೆಯನ್ನು ತೀವ್ರ ಕಾರ್ಯಗತ ಮಾಡಲಿಕ್ಕೆ ಪ್ರಯತ್ನ ಮಾಡಬೇಕು. ನಮ್ಮ ರಾಯಚೂರು, ಬಿಜಾಪುರ ಮತ್ತು ಗುಲ್ಬರ್ಗಾಕ್ಕೆ ಈ ಯೋಜನೆ ಒಂದು ಒಳ್ಳೆಯ ಸಂಜೀವಿನಿ ಆಗುವಂತಹ ಯೋಜನೆ, ಈ ಯೋಜನೆ ಪೂರ್ಣಗೊಂಡಲ್ಲಿ ಈ ಮೂರು ಜಿಲ್ಲೆಗಳಿಗೂ ಹೆಚ್ಚಿನ ಲಾಭವಾಗಿ—ಅವು ಬರಗಾಲ ಪ್ರದೇಶಗಳು—ಅವಕ್ಕೆ ಒಂದು ರೀತಿಯಿಂದ ಹೆಚ್ಚಿನ ನೀರಿನ ಸೌಕರ್ಯ ದೊರೆಯುವುದಲ್ಲದೆ ರೈತರ ಸಾಂಪತ್ತಿಕ ಪರಿಸ್ಥಿತಿಗೂ ಕೂಡ ಹೆಚ್ಚು ಉಪಯೋಗವಾಗಬಹುದು. ಆದ್ದರಿಂದ ಈ ಕೃಷ್ಣಾ ಮೇಲ್‌ದಂಡೆ ಯೋಜನೆಯನ್ನು ಸರ್ಕಾರದವರು ತೀವ್ರವಾಗಿ ಕಾರ್ಯಗತ ಮಾಡಲು ಪ್ರಯತ್ನ ಮಾಡಬೇಕು. ಹಣದ ವಿಷಯ ಸರ್ಕಾರ ಕೇಂದ್ರದ ಮಾರಿ ನೋಡುತ್ತಾ ಕುಳಿತುಕೊಳ್ಳಬೇಕಾಗಿಲ್ಲ. ಈ ಮೇಜರ್ ಇರಿಗೇಷನ್ ಪ್ರಾಜೆಕ್ಟ್ ಬಗ್ಗೆ ಒಂದು ಸ್ಟ್ಯಾಚ್ಯುಟರಿ ಬೋರ್ಡ್ ಮಾಡಿ ಅಥವಾ ಯಾವುದಾದರೂ ಒಂದು ಮಂಡಲಿಯನ್ನು ಕಾಯಿದೆಗನುಸಾರವಾಗಿ ರಿಜಿಸ್ಟರ್ ಮಾಡಿಸಿ ಅದರ ಮುಖಾಂತರ ಸಾಲ ಎತ್ತಿದರೆ ಕೋಟಿಗಟ್ಟಲೆ ಬೇಕಾಗಿದ್ದರೂ ಕೊಡಲಿಕ್ಕೆ ಜನ ಹಿಂತೆಗೆಯುವುದಿಲ್ಲ

(ಶ್ರೀ ಕೆ. ಸಂಗನಗೌಡ)

ಎಂಬುದನ್ನು ಸರ್ಕಾರದವರ ಗಮನಕ್ಕೆ ತರಲು ಬಯಸುತ್ತೇನೆ. ಒಂದುವೇಳೆ ಸರ್ಕಾರ ಈ ಕಾರ್ಯವನ್ನು ಮಾಡುವುದರಲ್ಲಿ ತಪ್ಪಿದರೆ ಮುಂದಿನ ಪೀಳಿಗೆ ನಿಮ್ಮನ್ನು ಶಪಿಸಬಹುದು ಎಂದು ಸರ್ಕಾರದವರಿಗೆ ಸೂಚನೆ ಕೊಡಬಯಸುತ್ತೇನೆ. ನಾನು ಈ ಪ್ರಸಂಗದಲ್ಲಿ ಇನ್ನೊಂದು ಸೂಚನೆ ಕೊಡುವುದೇನೆಂದರೆ ಕೃಷ್ಣಾಮೇಲ್‌ದಂಡೆ ಅನ್ನುವ ಹೆಸರಿಗೆ ಬದಲಾಗಿ ಅಲ್ಲಿಯೇ ಅದರ ಸಮೀಪ ದಲ್ಲಿ ಕೂಡಲ ಸಂಗಮ ಇದೆ. ಕೂಡಲ ಸಂಗಮ ಜಲಾಶಯ ಅಂತ ಹೇಳಿ ಹೆಸರು ಬದಲಾಯಿಸಿ ದರೆ ಈ ಹೆಸರಿನಿಂದಲೇ ಒಂದು ಕ್ರಾಂತಿಯಾಗಿ ಇದಕ್ಕೆ ಪ್ರೋತ್ಸಾಹ ಸಿಕ್ಕಬಹುದು, ಕೇಂದ್ರದವರೂ ಸಹ ಇದನ್ನು ಪರಿಗಣಿಸಬಹುದು ಎಂದು ಸೂಚನೆ ಕೊಡಬಯಸುತ್ತೇನೆ.

ಇನ್ನು ತುಂಗಭದ್ರಾ ಯೋಜನೆಯ ವಿಷಯ ಹೇಳಬೇಕಾದ್ದರೆ 141 ಮೈಲ ಕೆನಾಲ್ ಇವತ್ತಿನವರೆಗೂ ಮಾಡಬೇಕಾಗಿದ್ದರೆ ಕೇವಲ 128 ಮೈಲಿ ಮಾತ್ರ ಮಾಡಿ ಉಳಿದದ್ದನ್ನು ಕಾರ್ಯಗತ ಮಾಡಿಲ್ಲ, ಅದರಿಂದ ಆ ಭಾಗದ ಅಚ್ಚುಕಟ್ಟು ಪ್ರದೇಶಗಳಿಗೆ ನೀರು ಸಿಕ್ಕದೆ ಜನರಿಗೆ ಸಾಕಾದಷ್ಟು ತೊಂದರೆಯಾಗುತ್ತಾ ಇದೆ. 5 ಲಕ್ಷ 80 ಸಾವಿರ ಎಕರೆ ನೀರಾವರಿಗೆ ಒಳಪಡಿಸಬೇಕಾಗಿದ್ದರೆ ಇನ್ನೂ ಕೂಡ 40–50 ಸಾವಿರ ಎಕರೆಗೆ ನೀರು ಸಿಕ್ಕದೆ ಹಾಗೆಯೇ ಉಳಿದಿದೆ ಅತ್ತಕಡೆ ಗಮನ ಕೊಡುವುದು ಬಹಳ ಮುಖ್ಯವಾಗಿದೆ.

ಮೇಲಾಗಿ ತುಂಗಭದ್ರ ಯೋಜನೆ ವಿಷಯ ಹೇಳಬೇಕಾಗಿದ್ದರೆ ಇದುವರೆಗೆ 3 ಸಲ ಕೆನಾಲ್ ಒಡೆದು ಹಾಳಾಗಿದೆ. ಇದರಿಂದ ರೈತರಿಗೆ ತುಂಬಾ ತೊಂದರೆಯಾಗಿದೆ. ಇಂತಹ ಕೆಲಸಗಳನ್ನು ಕೈಗೊಂಡ ಕಂಟ್ರಾಕ್ಟರ್ ಮೇಲೆ ಸರ್ಕಾರ ತಕ್ಕ ಕ್ರಮ ಕೈಗೊಳ್ಳಬೇಕು. ಅಷ್ಟೇ ಅಲ್ಲ, ಯಾವುದೇ ಕೆಲಸವನ್ನು ಕಂಟ್ರಾಕ್ಟರಿಗೆ ವಹಿಸಿಕೊಡುವಾಗ ಸರ್ಕಾರ ನಿಗಾ ಇಟ್ಟು ಅವರು ಮಾಡುವ ಕೆಲಸದ ಮೇಲೆ ಕಾಂಕ್ರೀಟ್, ಸಿಮೆಂಟ್ ಕೆಲಸ ಮಾಡುವಾಗ ಮೇಲಧಿಕಾರಿಗಳು ಸರಿಯಾಗಿ ನಿಗಾ ವಹಿಸು ವಂತೆ ಮಾಡಬೇಕು. ಈ ರೀತಿ ಮಾಡಿದರೆ ಇಂತಹ ದೊಡ್ಡ ಯೋಜನೆಯಿಂದ ರೈತರಿಗೆ ಅನುಕೂಲ ವಾಗುತ್ತದೆ ಎಂದು ಈ ಪ್ರಸಂಗದಲ್ಲಿ ತಿಳಿಸಬಯಸುತ್ತೇನೆ.

4-30 P.M.

ಇನ್ನು ಮಧ್ಯಮ ತರಗತಿಯ ನೀರಾವರಿ ವಿಷಯ ಹೇಳಬೇಕಾದ್ದರೆ, ನಮ್ಮ ರಾಯಚೂರು ಜಿಲ್ಲೆ ಬಹಳ ಕಷ್ಟದಲ್ಲಿ ಇದೆ ಎಂದು ವಿಷಾದದಿಂದ ಹೇಳಬೇಕಾಗಿದೆ. ಇಲ್ಲಿ ಸಣ್ಣ ನೀರಾವರಿ ಯೋಜನೆಗಳನ್ನು ಮಾಡುವುದಕ್ಕೆ ಸಾಕಷ್ಟು ಅವಕಾಶ ಇದೆ. ಆದುದರಿಂದ ಸರ್ಕಾರ ಹೋದ ಸಲದಂತೆ ಇದಕ್ಕಾಗಿ ಇನ್ನೂ ಸ್ವಲ್ಪ ಹೆಚ್ಚಿನ ಹಣ ಒದಗಿಸಬೇಕು ಎಂದು ಹೇಳುತ್ತೇನೆ. ರಾಯಚೂರು ಜಿಲ್ಲೆಗೆ ಸಣ್ಣ ನೀರಾವರಿ ಯೋಜನೆಗೆ 67–68 ರಲ್ಲಿ 17 ಲಕ್ಷ ರೂಪಾಯಿಗಳನ್ನು ಒದಗಿಸಿದ್ದರೆ ಕೇವಲ 4–5 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ 12 ಲಕ್ಷ ರೂಪಾಯಿಗಳನ್ನು ಉಳಿಸಿದರು. ಇದು ಬಹಳ ವಿಷಾದಕರವಾದ ಸಂಗತಿ ಎಂದು ತಿಳಿಯಬಯಸುತ್ತೇನೆ. ಇದು ಸರ್ಕಾರದ ತಪ್ಪು ಎಂದು ಹೇಳಲಿಕ್ಕೆ ತಯಾರಿಲ್ಲ. ಇದು ಎಕ್ಸಿಕ್ಯೂಟೀವ್ ಇಂಜನಿಯರದ್ದು ತಪ್ಪು ಇರಬೇಕು. ಏಕೆಂದರೆ ಅವರು ಸಕಾಲಕ್ಕೆ ಈ ಯೋಜನೆಗಳನ್ನೆಲ್ಲಾ ಸರ್ಕಾರದ ಗಮನಕ್ಕೆ ತಂದು ಸರ್ಕಾರದ ವರು ಒದಗಿಸಿಕೊಡುವ ಹಣವನ್ನು ಈ ಜಿಲ್ಲೆಯ ಅಭಿವೃದ್ಧಿ ಬಗ್ಗೆ ಒಂದು ದೃಷ್ಟಿಯನ್ನು ಇಟ್ಟು ಕೊಂಡು ಮಾಡಬೇಕು ಎಂದು ನಾನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಇನ್ನು ಹೂವಿನ ಬಾವಿ ಕೆರೆ, ಅದನ್ನು ಹೋದ ಸಾರಿಯ ಬಜೆಟ್ಟಿನಲ್ಲಿ ಸೇರಿಸಿದರೂ ಕೂಡ 2 ಸಾರಿ ಈ ಕೆರೆಯ ಕಾಮಗಾರಿಯನ್ನು ಪ್ರಾರಂಭ ಮಾಡಲಿಕ್ಕೆ ಟೆಂಡರ್ ಕರೆದು ನಿಲ್ಲಿಸಿದರು. ಒಂದು ಜಿಲ್ಲೆಯಲ್ಲಿ ಅಂದರೆ ರಾಯಚೂರು ಜಿಲ್ಲೆಯೇ ಆಗಲಿ ಬೇರೆ ಯಾವ ಜಿಲ್ಲೆಯೇ ಆಗಲಿ ಆ ರೀತಿ ಕೆಲಸವನ್ನು ನಿಲ್ಲಿಸುವ ಪ್ರಸಂಗ ಬಂದರೆ ಅದಕ್ಕೆ ತಕ್ಕ ಕ್ರಮ ಕೈಗೊಳ್ಳಬೇಕು. ಸರ್ಕಾರದವರು ಒದಗಿಸಿ ಕೊಡತಕ್ಕ ಹಣವನ್ನು ಆ ಜಿಲ್ಲೆಯ ಅಭಿವೃದ್ಧಿಗೆ ಪೂರ್ಣ ಖರ್ಚು ಮಾಡಬೇಕು ಎನ್ನುವ ಮನೋ ಭಾವನೆ ಅಧಿಕಾರಿಗಳಲ್ಲಿ ಇರಬೇಕು. ಸರೆಂಡರ್ ಮಾಡುವ ಮನೋಭಾವ ಇರಬಾರದು, ಅಂತಹ ಅಧಿಕಾರಿಗಳ ಮೇಲೆ ತಕ್ಕ ಕ್ರಮ ಕೈಗೊಳ್ಳಬೇಕು ಎಂದು ತಿಳಿಸಬಯಸುತ್ತೇನೆ.

ಇನ್ನು ಲಿಫ್ಟ್ ಇರಿಗೇಷನ್ ಬಗ್ಗೆ ಹೇಳುವುದಾದರೆ ರಾಯಚೂರು ಜಿಲ್ಲೆಯಲ್ಲಿ ಅನೇಕ ದೊಡ್ಡ ದೊಡ್ಡ ಹಳ್ಳಗಳು ಇವೆ. ಅಲ್ಲಿ ಲಿಫ್ಟ್ ಇರ್ರಿಗೇಷನ್ನಿಗೆ ಅವಕಾಶ ಇದೆ. ಈ ಲಿಫ್ಟ್ ಇರ್ರಿಗೇಷನ್ ಎಲ್ಲೆಲ್ಲಿ ತೆಗೆದುಕೊಳ್ಳಲು ಸಾಧ್ಯ ಇದೆಯೋ ಅಲ್ಲಿ ಅದನ್ನು ತೆಗೆದುಕೊಂಡು ಪೂರ್ಣ ಮಾಡಬೇಕು. ಇದರ ಬಗ್ಗೆ ಸರ್ಕಾರದವರು ಎಷ್ಟು ಹಣವನ್ನು ಒದಗಿಸುವುದಕ್ಕೆ ಸಾಧ್ಯತೆ ಇದೆಯೋ ಅಷ್ಟನ್ನು ಒದಗಿಸಿಕೊಟ್ಟು ಸಹಾಯ ಮಾಡಬೇಕು ಎಂದು ತಿಳಿಸಬಯಸುತ್ತೇನೆ.

ಇನ್ನು ಗ್ರಾಮಾಂತರ ರಸ್ತೆಗಳ ಅಭಿವೃದ್ಧಿ ಬಗ್ಗೆ ಸರ್ಕಾರದ ಗಮನ ಸೆಳೆಯಬೇಕಾಗಿದ್ದರೆ ರಾಯಚೂರು ಜಿಲ್ಲೆ ಹಿಂದುಳಿದ ಪ್ರದೇಶ ಎಂದು ಹೇಳಬೇಕಾಗಿಲ್ಲ. ಬೀದರ್ ಜಿಲ್ಲೆ, ಗುಲ್ಬರ್ಗ ಜಿಲ್ಲೆ ಇದೂ ಹಿಂದುಳಿದ ಪ್ರದೇಶ ಎಂದು ಸಾಮಾನ್ಯವಾಗಿ ಎಲ್ಲರಿಗೂ ಗೊತ್ತಿದೆ. ಈ ಮೂರು ಜಿಲ್ಲೆಗಳ ಅಭಿವೃದ್ಧಿಗಾಗಿ ಒಂದು ಮಾಸ್ಟರ್ ಪ್ಲಾನ್ ತಯಾರು ಮಾಡಿ ಒಂದೊಂದು ತಾಲ್ಲೂಕಿಗೆ ಪ್ರತಿ ವರುಷ 25-30-40 ಮೈಲಿಯಂತೆ ರಸ್ತೆ ಅಭಿವೃದ್ಧಿ ಕಾರ್ಯಗಳನ್ನು ತೆಗೆದುಕೊಳ್ಳಬೇಕು ಎಂದು ಸೂಚಿಸಬಯಸುತ್ತೇನೆ, ಹಾಗಾದರೆ ಈ ಹಿಂದುಳಿದ ಪ್ರದೇಶಗಳು ಇತರ ಪ್ರದೇಶಗಳ ಸಮಾನಮಾನಕ್ಕೆ ಬರಲು ಅವಕಾಶ ಮಾಡಿಕೊಟ್ಟಂತಾಗುತ್ತದೆ.

ಇನ್ನು ವಿದ್ಯುಚ್ಛಕ್ತಿ ಸರಬರಾಜಿನ ವಿಷಯ ಹೇಳಬೇಕಾದರೆ, ಸಾಧಿಸಿರುವ ಪ್ರಗತಿಗೆ ತುಂಬಾ ಹೆಮ್ಮೆ ಪಡಬೇಕು. ಶರಾವತಿ ಯೋಜನೆ ಮೈಸೂರಿನ ಒಂದು ಕಾಮಧೇನು ಇದ್ದ ಹಾಗೆ. ಅದನ್ನು ನಾನು ಮೆಚ್ಚುತ್ತೇನೆ. ಮತ್ತು ಅದಕ್ಕಾಗಿ ಸರ್ಕಾರವನ್ನು ಅಭಿನಂದಿಸುತ್ತೇನೆ. ಈ ಯೋಜನೆಗಳಿಂದ ಗ್ರಾಮಾಂತರ ಪ್ರದೇಶಗಳಿಗೆ ಸಾಕಷ್ಟು ವಿದ್ಯುಚ್ಛಕ್ತಿ ಸರಬರಾಜು ಆಗಿದೆ. ಆದರೆ ಈಗ ನೀರಾವರಿ ಪಂಪಿಗಾಗಿ ಒಂದು ಹೆಚ್. ಪಿ. ಗೆ 1,000 ರೂಪಾಯಿ ಸಾಲ ಕೊಡಬೇಕೆಂದು ಮಾಡಿದ್ದಾರೆ. ಇದನ್ನು ಪುನರ್ವಿಮರ್ಶಿಸಿ ರೈತರಿಗೆ ಇನ್ನೂ ಹೆಚ್ಚಿನ ಸೌಲಭ್ಯ ಸಿಕ್ಕುವಂತೆ ಉತ್ತೇಜನ ಕೊಡಬೇಕು ಎಂದು ಈ ಸಂದರ್ಭದಲ್ಲಿ ಸೂಚಿಸಬಯಸುತ್ತೇನೆ.

ಇನ್ನು ಕೊನೆಯದಾಗಿ ಒಂದು ವಿಚಾರ ಹೇಳಬಯಸುತ್ತೇನೆ. 23 ನೇ ರಾಷ್ಟ್ರೀಯ ಹೆದ್ದಾರಿ ನಾರಾಯಣ ಕೂಡಲ ಸಂಗಮದ ಹತ್ತಿರ ಬರುವುದರಿಂದ ಇದರ ಸ್ಥಳ ಬದಲಾವಣೆ ಮಾಡುವ ಪ್ರಸಂಗ ಬರಬಹುದು. ನಾರಾಯಣಪುರದ ಡ್ಯಾಮ್ ಕೆಳಗೆ ಜಾಲದುರ್ಗದ ಕೆಳಗೆ ಈ ಹೆದ್ದಾರಿ ತಂದರೆ ಅನುಕೂಲವಾಗಬಹುದು. ಇಷ್ಟು ಹೇಳಿ ಮಾನ್ಯ ಅಧ್ಯಕ್ಷರು ನನಗೆ ಮಾತನಾಡಲು ಇಷ್ಟು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† **Sri B. P. GANGADHAR.**—Mr. Speaker Sir, While opposing the demands placed by the Minister for Public Works, I want to bring to his notice some of the important aspects which he has to kindly note for proper rectification in the interest of the welfare of State. Sir, everyone of us are aware that this is a very important Department and I may submit that this is a vital department for the betterment of any State. The Department of Public Works must act very vigilently and very cautiously to see that whatever they execute must be properly executed, so that the destiny and the nobility of the country must be properly maintained. The public moneys should be properly accounted and best use should be turned out for the State's welfare. Having that in mind, if we consider some of the set-backs they are really shocking. I do not want to attribute any motive to anybody. Our Engineers and the rulers in the past have built very wonderful constructions. A construction like the K.R.S. Dam is there. Though it was built several decades ago, it still remains as one of the biggest rocks against all the disturbances of time and it is a source of inspiration to the people of Mysore State and similarly, we find so many projects coming up. What is it that we see around, the constructions that are going on in the country, for which huge amounts are being spent on these and even then if we are not able to do good work, the result will be for the future generation which should survive well, will be put to great hardship and as we cherish now, it will not survive at all.

I may just mention here that it is the general complaint by everybody concerned that the contractors in the Public Works Department have not been discharging their duties competently and efficiently which has resulted in great disguise to the public and I think the Hon'ble Minister must have heard of this, not only from this side but within his

(SRI B. P. GANGADHAR)

side that is the treasury benches itself. But we have not tried to find out a way as to how it can be effectively stopped. So I am suggesting to him Sir, that it is very necessary that an Intelligence Cell must be started within the Department itself, consisting of very efficient, honest and God fearing officials who will pay surprise visits to every important project of which work is going on in the State, where huge sums of money have been spent, and they would test them, find out the draw-backs. If at all there are any draw-backs, the contractors must be pulled up and proper charges must be framed against them and the Department money due by them, should be properly collected and they should be penalised properly for any draw-backs. If such a thing is done in half a dozen or dozen cases, I respectfully submit to you that the entire structure of the Department will be overhauled. There will be fear instilled in the minds of corrupt contractors who do not think of the good of the country at all. Then such people will come down in number. No doubt it is not possible to post a police officer to watch every contractor. But at the same time, if such action is taken, it will reduce corruption or inefficiency or improper discharge of work. So, you must consider this matter very seriously and take immediate action. Even in Vidhan Soudha, we have been seeing cracks coming up in dooms here and there. See the High Court building; see the Central College building; they are centuries old; yet they remain like rock. That was because there was honesty in contractors previously. But now this honesty is lacking. This side or that side, at the time of election, some contractors may pay some money. We must not be influenced by that. We must see that such persons are sacked. If we do so, something good will happen to the State, and it will be for the betterment of the country.

Regarding irrigation, we have been constructing projects here and there. No doubt they have to be constructed. But at the same time, you must also consider starting a big network of smaller irrigation works throughout the State. Even though you construct big dams somewhere, all the raiyats from the village parts will not rush to those parts because there will be lot of attachment for these persons to their own villages. The Government may provide all sorts of attractions. But the people will not budge an inch. Though hunger stares in their face, they will stick to their place instead of moving to the project areas where land may be available for them. I therefore suggest that a network of similar irrigation schemes must be started throughout the country. Then every man in every village will be able to see that his dry land is converted into wet land and he will be raising wet crop thereon so that water will be available for all persons concerned. It will solve the food problem to a very great extent. Many of the old tanks which have been constructed have silted up. We do not see one-third of water standing in those tanks. In the circumstances, what is it that we can irrigate? Many of the lands go without water at the time when it is absolutely necessary

and crops go dry and our raiyats will not get adequate quantities of food grains that they used to get previously. It is therefore necessary to desilt all tanks which have become silted up.

Another thing has happened. You must be vigilant about it. Influential persons will see that water of these tanks which is inadequate for the atchkat itself, is made available for dry land, so much so, the man entitled as a matter of right is deprived of his share of water and the tail-end lands will not get water. I do not grudge it. But the person who has a right to take water is prevented by a powerful man from getting water. So, you may just consider this aspect of the matter and instruct your engineers in this respect to see that the atchkatdars must be first supplied with water and if any water in excess is left over, it may be disposed of at the discretion of the Government.

Regarding my own town, Tumkur Town, water supply and drainage system we have been waiting for a number of years, say decades. This is a very important matter. We have been seriously agitating this matter. Water supply in Tumkur Town was started in the year 1934 when the population of the town was not more than 18,000, and the same water supply scheme is prevailing even now in the year 1968 when the population of the town has gone up to nearly a lakh. This water supply was not at all adequate. It was conceded by the Hon'ble Minister when he was answering supplementaries that a family will not be able to get two pots of water per day. So, when the Government is convinced that even a single family will not be able to get two pots of water per day in Tumkur Town, is it not necessary that you must make provision to see that the water supply in Tumkur is overhauled forthwith so that each family is supplied with water absolutely necessary for their living. Somehow or other you must see that water is supplied in adequate quantity to Tumkur people. Similarly, Sir, in a growing town like Tumkur, the starting of underground drainage is absolutely necessary. In fact underground drainage had been started in almost every district except Tumkur. Perhaps the reason for this is that no Minister comes from that place. Even though there was a Minister, that Minister did not care for the well-being of the people. That is why step-motherly attitude is shown to this town. I request that even now this step-motherly attitude must be abandoned forthwith and what is due to the citizens of Tumkur Town must be provided to them in the matter of water supply and underground drainage.

Now, coming to Electricity, I may submit that electricity is being sold at a very cheap rate so far as Madras and Kerala are concerned. But at the same time, our poor raiyat has been heavily taxed. Why should our raiyats be asked to pay more? There is a Kannada proverb: "ಮನೆಗೆ ಮಾರಿ, ಪರರಿಗೆ ಉಪಕಾರಿ". So far as our own people are concerned, our raiyats are concerned, you do not wish to help them; so far as others are concerned, you sell electricity at a bargain rate. This raises a serious suspicion in the minds of the people. There is no justification

(SRI B. P. GANGADHAR)

for doing so. So, I may submit that this has to be seriously considered and proper action should be taken so that the rates of electricity provided to the raiyats must be on par with the rates at which it is sold either to Kerala or Madras.

Now Sir, regarding roads in Tumkur District, roads have been hopelessly neglected. While passing, the Minister can kindly see that within the town there are some important roads which are under the P.W.D. and these roads have been hopelessly maintained. We cannot say they are roads in the first instance. So far as municipal roads are concerned, they are kept well. Those roads which belong to the P.W.D., have been so hopelessly neglected in a big town like Tumkur, which is a beautiful city.

So I submit that immediate and prompt action must be taken in the matter and the concerned officials must be properly directed to see that these roads are properly maintained which will add to the beauty of the town.

Thank you.

MR. DEPUTY SPEAKER.—Before I call upon the next Member, I should state that there are still half-a-dozen Members who want to participate in the debate.

Therefore, discussions will conclude by 6-00 P.M. The Minister will begin his reply at 6-00 P.M.

ಶ್ರೀ ಯಂಕಾನಾಯಕ್ (ಹರಪನಹಳ್ಳಿ).—ಮಾನ್ಯ ಸಭಾಪತಿಗಳೇ, ನಮ್ಮ ಪಿ. ಡಬ್ಲ್ಯು. ಡಿ. ಮಂತ್ರಿಗಳು ಸಭೆಯ ಮುಂದೆ ಮಂಡಿಸಿರತಕ್ಕ ಬೇಡಿಕೆಗಳನ್ನು ನಾನು ಅನುಮೋದಿಸುತ್ತ ತಮ್ಮ ಮುಂದೆ ನನ್ನ ಕೆಲವು ಬೇಡಿಕೆಗಳನ್ನು ಇಡಬಯಸುತ್ತೇನೆ. ನಮ್ಮ ಬಳ್ಳಾರಿ ಜಿಲ್ಲೆಯಲ್ಲಿ ನೀರಾವರಿ ಸೌಲಭ್ಯಗಳು ಬಹಳ ಕಡಿಮೆ. ಈ ಜಿಲ್ಲೆಯಲ್ಲಿ ಮುಕ್ಕಾಲುಮೂರುಪಾಲುವೀಸೆ ನೀರಾವರಿ ಸೌಲಭ್ಯಗಳಿಲ್ಲದ ಪ್ರದೇಶವಾಗಿದೆ. ಹೀಗಾಗಿ ಅಲ್ಲಿನ ಜನರಿಗೆ ಬಹಳ ಅನ್ಯಾಯವಾಗಿದೆ. ಅದನ್ನು ನೀರಾವರಿ ಮಾಡುವುದಕ್ಕಾಗಿ ಸರ್ಕಾರದವರು ಅಪ್ಪರ್ ತುಂಗಭದ್ರ ಅಣೆಕಟ್ಟು ಒಂದನ್ನು ನಿರ್ಮಿಸಬೇಕೆಂದು ತಮ್ಮಲ್ಲಿ ನಾನು ಅರಿಕೆ ಮಾಡಿಕೊಳ್ಳುತ್ತೇನೆ. ಇದನ್ನು ಸರ್ಕಾರದವರು ಅಗತ್ಯವಾಗಿ ಮಾಡಿಸಿಕೊಡಬೇಕೆಂದು ನಾನು ಪ್ರಾರ್ಥಿಸಿಕೊಳ್ಳುತ್ತೇನೆ. ಈ ದಿವಸ ಆ ಭದ್ರಾ ಅಣೆಕಟ್ಟಿನ ನೀರು ದಾವಣಗೆರೆ - ಹರಿಹರ ಮತ್ತು ಹರಪನಹಳ್ಳಿವರೆಗೂ ಬಂದಿದೆ. ಈಗ ಆ ನೀರು ಹರಪನಳ್ಳಿ ಕೆರೆಗೆ ನಿಲ್ಲಿಸಲಾಗಿದೆ. ಆ ನೀರನ್ನು ಅಲ್ಲಿಂದ ಮುಂದಕ್ಕೆ ಎಡೆಹಳ್ಳಿ ಕೆರೆಯವರೆಗೂ ಸಾಗಿಸಿದರೆ ಅಲ್ಲಿ ಸುಮಾರು 5-6 ಸಾವಿರ ಎಕರೆಗಳು ನೀರುಸಾಗುವಳಿಗೆ ಬರುತ್ತದೆ. ಆದುದರಿಂದ ಆ ನೀರನ್ನು ಆ ಹರಪ್ಪನಳ್ಳಿ ಕೆರೆಯಿಂದ—ಎಡಹಳ್ಳಿ ಕೆರೆಯವರೆಗೂ ಸಾಗಿಸಬೇಕೆಂದು ತಮ್ಮಲ್ಲಿ ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಇನ್ನು ನಮ್ಮ ತಾಲ್ಲೂಕಿನಲ್ಲಿ ರಸ್ತೆಯ ಕೊರತೆ ಬಹಳವಾಗಿದೆ. ಈ ಹಿಂದೆ ನಾವು ಅನೇಕವರ್ಷ ಕೊಟ್ಟೂರಿಗೆ ಬರತಕ್ಕ ರೈಲನ್ನು ಹರಪನಹಳ್ಳಿಯ ಮಾರ್ಗವಾಗಿ ಕೊಟ್ಟೂರಿಂದ ಹರಿಹರಕ್ಕೆ ಹೋಗುವಂತೆ ಒಂದು ರೈಲ್ವೆ ಸೌಕರ್ಯವನ್ನು ಮಾಡಿಕೊಡಬೇಕು ಎಂದು ರಾಜ್ಯ ಮಂತ್ರಿಗಳಿಗೂ ಮತ್ತು ಕೇಂದ್ರದ ಮಂತ್ರಿಗಳಿಗೂ ಅನೇಕ ಮನವಿಗಳನ್ನು ಮಾಡಿಕೊಂಡಿದ್ದೇವೆ. ಆದರೆ ಅದನ್ನಿನ್ನೂ ಮಾಡದಿರುವುದು ಅಲ್ಲಿಯ ಜನರಿಗೆ ಬಹಳ ಅನ್ಯಾಯವನ್ನು ಮಾಡಿದಹಾಗೆ ಆಗಿದೆ. ನಾನು ಮೊನ್ನೆ ಇದೇ ತಿಂಗಳು 10ನೇ ತಾರೀಖಿನಲ್ಲಿ ನಮ್ಮ ಪಿ. ಡಬ್ಲ್ಯು. ಡಿ. ಮಂತ್ರಿಗಳಿಗೆ ನಮ್ಮಲ್ಲಿರತಕ್ಕ ರಸ್ತೆಗಳನ್ನು ತೋರಿಸಲು ಅಲ್ಲಿಗೆ ಅವರ ಒಂದು ಟೂರನ್ನು ಹಾಕಿಸಿದ್ದೆ. ಆ ವೇಳೆಯಲ್ಲಿ ನಮ್ಮ ಜಿಲ್ಲೆಯ ಹಳೇಹಿರಿಯ ಸದಸ್ಯರಾದ ಶ್ರೀ ಅಲ್ಲಂ ಕರಿಬಸಪ್ಪನವರೂ ಬಂದಿದ್ದರು. ನಮಗೆ ಸ್ವತಂತ್ರ

ಬಂದು 20 ವರ್ಷಗಳು ಕಳೆದಾಗ್ಯೂ ಅಲ್ಲಿ ಈ ರಸ್ತೆಗಳ ಬಗ್ಗೆ ನಡೆದಿರುವಷ್ಟು ಅನ್ಯಾಯ ಇನ್ನು ಬೇರಾವ ಜಿಲ್ಲೆಯಲ್ಲೂ ನಡೆದಿರುವುದಿಲ್ಲ ಎಂಬ ಮಾತನ್ನು ಮಾನ್ಯ ಮಂತ್ರಿಗಳೇ ಒಪ್ಪಿದ್ದಾರೆ. ಈ ಮಾತನ್ನು ಆ ದಿವಸ ಅವರ ಭಾಷಣದಲ್ಲಿ ಅಲ್ಲೇ ಹೇಳಿದ್ದಾರೆ. ಅಂದರೆ ಸಾಮಾನ್ಯವಾಗಿ ಆ ಸ್ಥಳಕ್ಕೆ ಯಾವ ಮಂತ್ರಿಗಳೂ ಬರುವುದಿಲ್ಲ. ಅಲ್ಲಿಯ ಜನರ ಕುಂದುಕೊರತೆಗಳನ್ನು ಹೇಳಿಕೊಳ್ಳುವುದಕ್ಕೆ ಅಲ್ಲಿಗೆ ಮಂತ್ರಿಗಳು ಯಾರಾದರೂ ಬಂದರಲ್ಲವೇ? ಬಾರದೆ ಇದ್ದರೆ ಇನ್ನೇನು ಮಾಡಬೇಕು? ನಮ್ಮಲ್ಲಿ ಹಿಂದೆ ಜಿಲ್ಲಾ ಬೋರ್ಡಿನವರು ಮಾಡಿದ್ದ 8 ಮೈಲಿ ರಸ್ತೆಯನ್ನು ಮಾತ್ರ ಈಗ ಪಿ.ಡಬ್ಲ್ಯು.ಡಿ. ನವರು ತಮ್ಮ ಕಡೆಗೆ ತೆಗೆದುಕೊಂಡಿದ್ದಾರೆ. ಆ 8 ಮೈಲಿ ರಸ್ತೆಯನ್ನು ಅಲ್ಲಿ ಬಿಟ್ಟರೆ ಇನ್ನಾವ ರಸ್ತೆಯೂ ಅಲ್ಲಿ ಇರುವುದಿಲ್ಲ. ಈ ವಿಷಯವನ್ನು ನಮ್ಮ ಪಿ.ಡಬ್ಲ್ಯು.ಡಿ. ಮಂತ್ರಿಗಳು ತಮ್ಮ ಗಮನಕ್ಕೆ ತೆಗೆದುಕೊಂಡು ಅಲ್ಲಿಗೆ ಜಾಗ್ರತೆಯಾಗಿ ನೂರಾರು ಮೈಲಿ ರಸ್ತೆ ಅನುಕೂಲ ಮಾಡಿಸಿಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಇನ್ನು ವಿದ್ಯುಚ್ಛಕ್ತಿ ಸರಬರಾಯಿ ವಿಚಾರಕ್ಕೆ ಬಂದರೆ—ನಮ್ಮ ತಾಲ್ಲೂಕಿನಲ್ಲಿ 52 ಗ್ರಾಮ ಪಂಚಾಯಿತಿಗಳಿವೆ. ಅಲ್ಲಿ ಹತ್ತು ಹಳ್ಳಿಗಾದರೂ ಎಲೆಕ್ಟ್ರಿಸಿಟಿಯನ್ನು ಕೊಟ್ಟಿಲ್ಲ. ಇತ್ತೀಚೆಗೆ ಅಲ್ಲಿ 10-12 ಹಳ್ಳಿಗಳಿಗಾದರೂ ಕೊಡಬೇಕೆಂದು ಹೇಳುತ್ತಿದ್ದಾರೆ. ಅಲ್ಲಿ ಸುಮಾರು ರೈತರು 200-300 ಬಾವಿಗಳನ್ನು ಮಾಡಿಕೊಂಡಿದ್ದಾರೆ. ಅವುಗಳಿಗೊಂದಕ್ಕೂ ಪಂಪ್‌ಸೆಟ್ಟನ್ನು ಕೊಟ್ಟಿಲ್ಲ, ಕರೆಂಟನ್ನೂ ಕೊಟ್ಟಿಲ್ಲ. ಆದ್ದರಿಂದ ಅಲ್ಲಿ ಹಳ್ಳಿ ಹಳ್ಳಿಗೂ ಎಲೆಕ್ಟ್ರಿಸಿಟಿಯನ್ನು ಕೊಡಬೇಕೆಂದು ತಮ್ಮಲ್ಲಿ ಪ್ರಾರ್ಥನೆಮಾಡಿಕೊಳ್ಳುತ್ತೇನೆ. ಅಲ್ಲಿ ಕಳೆದ 2 ವರ್ಷಗಳಿಂದ ಮಳೆ ಇಲ್ಲ, ಬೆಳೆ ಇಲ್ಲ. ಯಾವ ಕೆರೆಯಲ್ಲೂ ನೀರಿಲ್ಲ. ಜನಕ್ಕೆ ಬಹಳ ತೊಂದರೆಯಾಗಿದೆ. ಅದನ್ನು ಹೇಳುವುದಕ್ಕಾಗುವುದಿಲ್ಲ. ಅಲ್ಲಿ ಹೆಚ್ಚು ಕೆರೆಕಟ್ಟೆಗಳನ್ನೂ ಮತ್ತು ಗೋಕಟ್ಟೆಗಳನ್ನೂ ಮಾಡಿಸಿಕೊಟ್ಟು ಜನಕ್ಕೆ ಅನುಕೂಲ ಮಾಡಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ. ರಿಲೀಫ್ ಕಾಂಗಾರಿಯಲ್ಲಿ ಗೋಕಟ್ಟೆಗಳ ಕೆಲಸವನ್ನು ಆದಷ್ಟು ಜಾಸ್ತಿ ಮಾಡಿಸಿ ಜನರಿಗೆ ಅನುಕೂಲ ಮಾಡಿಕೊಡಬೇಕೆಂದು ಪ್ರಾರ್ಥಿಸುತ್ತೇನೆ. ಇನ್ನು ಕುಡಿಯುವ ನೀರಿಗೂ ಅಲ್ಲಿ ಭಾರಿ ತೊಂದರೆ ಇದೆ. ಅಲ್ಲಿ ಕುಡಿಯುವ ನೀರಿಗಿರತಕ್ಕ ಅಭಾವ ಅಷ್ಟಿಷ್ಟಲ್ಲ. ಅನೇಕ ಮನವಿಗಳನ್ನು ಮಾಡಿಕೊಂಡಿದ್ದಾಯಿತು, ಆದರೂ ಅನುಕೂಲವಾಗಲಿಲ್ಲ. ನಮ್ಮ ಹರಪನಹಳ್ಳಿ ತಾಲ್ಲೂಕಿನಲ್ಲಿ ಒಂದು ಜಾತ್ರೆಯಾಗುತ್ತದೆ—ಆ ಜಾತ್ರೆಯ ಹೆಸರು ಹುಚ್ಚಂಗಿ ದುರ್ಗದ ಜಾತ್ರೆ ಎಂದು ಕರೆಯುತ್ತಾರೆ. ಅಲ್ಲಿ ಕುಡಿಯುವ ನೀರಿಗೆ ಬಹಳ ಅಭಾವವಿದೆ. ಈ ಹಿಂದೆ ಅನೇಕ ಮನವಿಗಳನ್ನು ಮಾಡಿಕೊಂಡರೂ ಸರ್ಕಾರಕ್ಕೆ ದಯಬಾರಲಿಲ್ಲ. ಅಲ್ಲಿ ಕುಡಿಯುವ ನೀರನ್ನೂ ಕೂಡ ಮಾರಾಟ ಮಾಡುತ್ತಾರೆ. ಈ ತೊಂದರೆಯನ್ನು ನಿವಾರಣೆ ಮಾಡಬೇಕೆಂದು ಹೇಳಿ ಈ ವಿಚಾರವನ್ನು ನಮ್ಮ ಫೈನಾನ್ಸ್ ಮಂತ್ರಿಗಳಿಗೂ ಮತ್ತು ಮುಖ್ಯ ಮಂತ್ರಿಗಳಿಗೂ ಅನೇಕ ಸಾರ್ತಿ ಮನವಿಗಳನ್ನು ಕೊಟ್ಟೆವು. ಇನ್ನಾದರೂ ಅನುಕೂಲ ಮಾಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎಚ್. ಎನ್. ನಂಜೇಗೌಡ (ಅರಕಲಗೂಡು).—ಮಾನ್ಯ ಅಧ್ಯಕ್ಷರೇ, ನಾವು ಈ ಸಭೆಯಲ್ಲಿ ಮಾತನಾಡತಕ್ಕ ಕಾಲದಲ್ಲಿ ನಮ್ಮ ಹಳೆಯ ಮೈಸೂರು ಭಾಗದಿಂದ ಬಂದಿರತಕ್ಕವರೆಲ್ಲಾ ರಾಜ್ಯಗಳ ಪುನರ್ವಿಂಗಡಣೆಯಾದ ಮೇಲೆ ನಮ್ಮ ಹಳೇ ಮೈಸೂರು ರಾಜ್ಯಕ್ಕೆ ಅನೇಕ ರೀತಿಯಿಂದ ಅಭಿವೃದ್ಧಿಯಲ್ಲಿ ಈ ಭಾಗಕ್ಕೆ ಕುಂಠಿತವಾಗಿದ್ದರೂ ನಾವು ನಮ್ಮ ರಾಜ್ಯದ ಭಾಷೈಕ್ಯತೆಗೆಲ್ಲಿ ಧಕ್ಕೆಬರುತ್ತಾದೋ ಎಂದು, ಅದೆಲ್ಲಿ ಸಮಾಧಿಯನ್ನು ಸೇರಿಬಿಡುತ್ತದೋ ಎಂದು ಬಾಯಿಮುಚ್ಚಿಕೊಂಡು ನಮ್ಮ ಅಸಮಾಧಾನವನ್ನು ಹೇಳದೆ ನಾವು ಆ ಹೊಸ ಕರ್ಣಾಟಕ ಭಾಗಕ್ಕೆ ಸೇರಿದ ಅಪ್ಪರ್ ಕೃಷ್ಣ—ಗೋದಾವರಿ ಈ ನದಿಗಳ ವಿಚಾರದಲ್ಲಿ ನಮ್ಮ ಮನ ಬಿಚ್ಚಿ ಈ ಸಭೆಯಲ್ಲೂ ಮತ್ತು ಹೊರಗಡೆಯಲ್ಲೂ ನಾವು ವಾದಮಾಡುತ್ತಿದ್ದೇವೆ. ಹೀಗಿರತಕ್ಕ ಕಾಲದಲ್ಲಿ ಅತ್ತಕಡೆಯ ಸದಸ್ಯರೊಬ್ಬರು ಈದಿವಸ ಭಾಷಣ ಮಾಡತಕ್ಕ ಕಾಲದಲ್ಲಿ ರಾಜ್ಯಗಳ ಪುನರ್ವಿಂಗಡಣೆಯ ನಂತರ ಆ ಹೊಸ ಮೈಸೂರು ಪ್ರದೇಶದವರು ಹಳೇ ಮೈಸೂರು ಭಾಗಕ್ಕೆ ಸೇರಿದಮೇಲೆ ಅವರಿಗೆ ಬಹಳ ಅನ್ಯಾಯವಾಗಿದೆ ಎಂದು ಹೇಳಿದ ಮಾತನ್ನು ಕೇಳಿ ನನಗೆ ಇದು ಎಂಥಾ ಅನೌದಾರ್ಯದ ಮಾತು ಎಂಬುದನ್ನು ಈಗ ಅವರ ಮುಖವೆದುರಿನಲ್ಲೇ ತಿಳಿಸಬೇಕೆಂದು ಇದ್ದೇನೆ. ಇಲ್ಲಿ ದೇಶಾಭಿವೃದ್ಧಿಯ ಬಗ್ಗೆ ಸರ್ಕಾರ ನಡೆಸಿರತಕ್ಕ ಕೆಲಸಕಾರ್ಯಗಳಲ್ಲಿ ಯಾವ ಯಾವ ಭಾಗಕ್ಕೆ ಎಷ್ಟೆಷ್ಟು ಹಣವನ್ನು ಖರ್ಚು ಮಾಡಿದ್ದಾರೆಂಬುದನ್ನು ನಾನೀಗ ಸಭೆಗೆ ಒಂದೊಂದನ್ನಾಗಿ ತಿಳಿಸುತ್ತೇನೆ:—

ಬಜೆಟ್ ಪುಸ್ತಕದ ಪುಟ 286—100 ಕ್ಯಾಪಿಟಲ್ ಔಟ್‌ಲೇ:—ಗುಲ್ಬರ್ಗ ಸರ್ಕಲ್ಲಿಗೆ 1967-68ಕ್ಕೆ ಒದಗಿಸಿರತಕ್ಕ ಮೊಬಲಗು 28 ಲಕ್ಷ 18 ಸಾವಿರ. 1968-69ಕ್ಕೆ 9 ಲಕ್ಷ 82 ಸಾವಿರ. ಹಳೇ ಮೈಸೂರು ಏರಿಯಾದಲ್ಲಿ ಅದರಲ್ಲೂ ಮೈಸೂರು ಕಾಂಗ್ರೆಸ್ ಕಾರ್ಯದರ್ಶಿಗಳು ಇರತಕ್ಕಂಥ ಜಾಗಕ್ಕೆ ಅಂದರೆ ಮೈಸೂರು ಸರ್ಕಲ್‌ಗೆ ಒಂದು ಲಕ್ಷ 30 ಸಾವಿರ. ಹೋದ ವರ್ಷ

(ಶ್ರೀ ಎಚ್. ಎನ್. ನಂಜೇಗೌಡ)

ಏನೂ ಇಲ್ಲ. ಇನ್ನು ಒರಿಜಿನಲ್ ವರ್ಕ್ಸಿಗೆ ಬಂದರೆ—ಬೀದಾರಿಗೆ 8 ಲಕ್ಷ 81 ಸಾವಿರ, ಮೈಸೂರು ಸರ್ಕಲ್ಲಿಗೆ 72 ಸಾವಿರ ಕೊಟ್ಟಿದ್ದಾರೆ. ಹೀಗೆ ಇನ್ನೂ ಅನೇಕ ಸಂದರ್ಭಗಳಲ್ಲಿ ಹಳೇ ಮೈಸೂರಿಗೆ ಅನ್ಯಾಯವಾಗಿದೆ. ಆದರೂ ನಾವು ಬಾಯಿಮುಚ್ಚಿ ಕುಳಿತಿದ್ದೇವೆ. ಅವರು ತಬ್ಬಲಿಗಳಾದೆವು, ಕೆಟ್ಟೆವು ಎಂದು ಹೇಳುತ್ತಿರುವುದು ಆಶ್ಚರ್ಯ.

5-00 P.M.

ಇವೊತ್ತು ಸರ್ಕಾರದಲ್ಲಿ ಏನೇನು ನಡೆಯುತ್ತಿದೆ ಎಂಬುದನ್ನು ಹೇಳುವುದಕ್ಕಾಗುವುದಿಲ್ಲ. ಹಳೆಯ ಮೈಸೂರಿಗೆ ಅನ್ಯಾಯವಾಗಿದೆ ಎನ್ನುವುದನ್ನು ಹೇಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಇವೊತ್ತಿನದಿವಸ ಪ್ರಜಾಪ್ರಭುತ್ವದಲ್ಲಿ ರಾಜ್ಯದ ಆಡಳಿತದ ಬಗ್ಗೆ ಜನತೆಯ ಆಕ್ರೋಶ ಇದೆ. ಹಳೆಯ ಮೈಸೂರಿನಲ್ಲಿರತಕ್ಕವರನ್ನು ಸರಿಯಾದ ರೀತಿಯಲ್ಲಿ ನೋಡಿಕೊಂಡು ಹೋಗುವುದಿಲ್ಲ. ನಾನು ಇವೊತ್ತು ಎಚ್ಚರಿಕೆಯನ್ನು ಕೊಡುತ್ತೇನೆ. ಮುಂದೆ ಈ ವಿಷಯಕ್ಕಾಗಿ ಕ್ರಾಂತಿಯಾಗುತ್ತದೆ. ಇವರು ಒಳಗೊಳಗೇ ಒಬ್ಬರಿಗೊಬ್ಬರು ಮಾತನಾಡಿಕೊಂಡು ಅನುಕೂಲಮಾಡಿಕೊಳ್ಳುತ್ತಿದ್ದಾರೆ. ಇಷ್ಟನ್ನು ಹೇಳಿ ನಾನು ಇನ್ನು ಮುಂದಿನ ಪ್ರಶ್ನೆಗೆ ಬರುತ್ತೇನೆ.

Tender for providing water supply to the Fertilizer Factory at Mangalore ಕಂಟ್ರಾಕ್ಟರ ವ್ಯವಹಾರದ ಸಂಬಂಧದ Order No. PWD 25 GWS 67(B), dated 15th December 1967. ಈ ಆರ್ಡರಿನ ಕಾಪಿಯನ್ನು ಓದಿದ ತಕ್ಷಣ ನನಗೆ ಎದೆ ನಡುಗಿಹೋಯಿತು. ಕಾರಣವೇನೆಂದರೆ, ಇದರಲ್ಲಿ ಇಬ್ಬರಿಗೆ ಕಂಟ್ರಾಕ್ಟ್ ಕೊಟ್ಟಿದ್ದಾರೆ. ಮೆಸರ್ಸ್ ಇಂಜಿನಿಯರಿಂಗ್ ಕನ್‌ಸ್ಟ್ರಕ್ಷನ್ ಕಂಪೆನಿ, ಮದ್ರಾಸ್ ಇವರಿಗೆ 40,05,733 ರೂಪಾಯಿಗಳ ಕಾಂಟ್ರಾಕ್ಟ್ ಕೆಲಸವನ್ನು ಕೊಟ್ಟಿದ್ದಾರೆ. ಆಮೇಲೆ ಮೆಸರ್ಸ್ ಇಂಡಿಯನ್ ಹ್ಯೂಮ್ ಪೈಪ್ ಕಂಪೆನಿ ಇವರಿಗೆ 1,41,25,259 ರೂಪಾಯಿಗಳ ಕಂಟ್ರಾಕ್ಟ್ ಕೆಲಸವನ್ನು ಕೊಟ್ಟಿದ್ದಾರೆ. ಇದನ್ನು ನೋಡಿ ನನಗೆ ಎದೆ ನಡುಗಿತು. ಏಂದರೆ ಇದರಲ್ಲಿ ಒಂದು ಕಂಟ್ರಾಕ್ಟ್ ಕೊಡಬೇಕಾದರೆ ಒಂದು ಪದ್ಧತಿ ಇದೆ. ಅದು ಏನೆಂದರೆ, ಚೀಫ್ ಇಂಜಿನಿಯರ್ ಆಗಿರುವವರು ಡೀಟೈಲ್ಡ್ ಎಸ್ಟಿಮೇಟ್ ಮಾಡಿ ಟೆಂಡರಿಗೆ ಸಬ್‌ಮಿಟ್ ಮಾಡುತ್ತಾರೆ. ಆ ಮೇಲೆ ಅದು ಗೆಜೆಟ್ ನೋಟಿಫಿಕೇಷನ್ ಆಗಿ ಮೂರು ವಾರಗಳ ಗೆಜೆಟ್‌ನಲ್ಲಿ ಬರಬೇಕು. ಆದರೆ ಈ ಕೆಲಸಕ್ಕೆ ಸಂಬಂಧಪಟ್ಟದ್ದು ಒಂದೂ ಆಗಿಲ್ಲ. ಚೀಫ್ ಇಂಜಿನಿಯರ್ ಟೆಂಡರಿಗಾಗಿ ಎಸ್ಟಿಮೇಟ್ ಮಾಡಿದ್ದು ಗೆಜೆಟ್‌ನಲ್ಲಿ ಮೂರು ವಾರಗಳು ತಪ್ಪದೆ ನೋಟಿಫಿಕೇಷನ್ ಬಂದಿಲ್ಲ. ಅಂಥಾದ್ದನ್ನು ಒಬ್ಬರಿಗೆ ಕಂಟ್ರಾಕ್ಟ್ ಕೊಡುವಾಗ ಕಾಲವನ್ನು ಗೊತ್ತುಮಾಡದೆ ಕೆಲಸವನ್ನು ಕೊಟ್ಟಿದ್ದಾರೆ ಅದಕ್ಕೆ ಸಂಬಂಧಪಟ್ಟ ಆರ್ಡರನ್ನು ನಾನು ಓದುತ್ತೇನೆ. ಶೆಡ್ಯೂಲ್ ಪ್ರಕಾರ ಇದರಲ್ಲಿ 24-10-67 ರಲ್ಲಿ ಟೆಂಡರನ್ನು ಇಷ್ಯೂ ಮಾಡಬೇಕು, 15-11-67ರಲ್ಲಿ ರಿಸೀವ್ ಮಾಡಬೇಕು ಎಂದು ಇದೆ. ಆದರೆ ಇದರಲ್ಲಿ ಯಾವ ಕಾರಣವೂ ಇಲ್ಲದೆ, ಟೆಂಡರ್ ಕರೆಯದೆ ಯಾರೋ ತಮಗೆ ಬೇಕಾದವರಿಂದ ಟೆಂಡರನ್ನು ತೆಗೆದುಕೊಂಡರು. 19ಜನ ಟೆಂಡರ್ ಫಾರಂ ತೆಗೆದುಕೊಂಡರು. 13ಜನ ಟೆಂಡರನ್ನು ಕೊಟ್ಟರು ಎನ್ನುವ ಮಾತನ್ನು ಹೇಳಿದ್ದಾರೆ. ಈ ಸರ್ಕಾರದ ಆರ್ಡರನ್ನು ನೋಡಿ ನನಗೆ ಏತಕ್ಕೆ ಎದೆ ನಡುಗಿತು ಎಂದರೆ, ಟೆಂಡರ್ ವಿಷಯದಲ್ಲಿ ಚೀಫ್ ಇಂಜಿನಿಯರು ಒಂದು ವಿಚಾರವನ್ನು ಬರೆದಿದ್ದಾರೆ. ಅವರನ್ನು ಯಾರು ಚೀಫ್ ಇಂಜಿನಿಯರನ್ನಾಗಿ ಮಾಡಿದರೋ ಅವರ ಮುಖಕ್ಕೆ ಮಸಿ ಬಳಿಯಬೇಕು. ಅದು ಇರಲಿ. ಈ ಕೆಲಸಕ್ಕೆ ಸಂಬಂಧಪಟ್ಟ ಗವರ್ನ್‌ಮೆಂಟ್ ಆರ್ಡರಿನಲ್ಲಿ ಕೆಲವು ಅಕ್ರಮಗಳು ಇವೆ. ಅದನ್ನು ದಯವಿಟ್ಟು ಕ್ರಮಬದ್ಧವಾದ ಆರ್ಡರನ್ನಾಗಿ ಮಾಡಿ ಎಂದು ಚೀಫ್ ಇಂಜಿನಿಯರು ರೆಕಮೆಂಡ್‌ಮಾಡಿದ್ದಾರೆ. ಟೆಂಡರಿಗೆ ಸಂಬಂಧಪಟ್ಟ ರೆಕಾರ್ಡನ್ನು ನಾನು ಪೂರ್ತಿ ಓದುವುದಕ್ಕಾಗುವುದಿಲ್ಲ. ಇದರಲ್ಲಿ ಗ್ರೂಪ್ ಮಾಡತಕ್ಕ ವಿಷಯವನ್ನು ಹೇಳಿದ್ದಾರೆ. ಇನ್ನೂ ಏನೇನೋ ಬೇರೆ ವಿಷಯಗಳು ಇವೆ. ಇದರಲ್ಲಿ ಎಲ್ಲಾ ಅಧ್ಯಾಯನ ಮಾಡಿದ್ದಾರೆ. 1,41,25,259 ರೂಪಾಯಿಗಳ ಕೆಲಸವನ್ನು ಯಾವ ಅರ್ನೆಸ್ಟ್ ಮನಿ ಡಿಪಾಜಿಟ್ಟೂ ತೆಗೆದುಕೊಳ್ಳದೆ ಕಂಟ್ರಾಕ್ಟರ್ ಟೆಂಡರನ್ನು ಒಪ್ಪಿಕೊಳ್ಳಬೇಕೆಂದು ರೆಕಮೆಂಡ್ ಮಾಡಿದ್ದಾರೆ. ಇಂಥಾ ಒಂದು ಮಹಾಸತ್ಯವಾದ ಕಾರ್ಯವನ್ನು ಸಾಧಿಸಿದ್ದಾರೆ! ಆ ಆರ್ಡರನ್ನು ratify ಮಾಡಿ ಎಂದು ಚೀಫ್ ಇಂಜಿನಿಯರು ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದಾರೆ. ಅದು ಈ ರೀತಿ ಇದೆ.

(1) Issuing of tender papers only to the selected firms in relaxation of the codal rules ;

(2) for having conducted negotiations with the lowest firm who had quoted for the Turn key Job for making combinations of Groups iii, iv and v;

(3) For having received the tenders without obtaining E.M.D. from any of the firms in relaxation of Codal rules.

ಎಂದು ಇದೆ. ಚೀಫ್ ಇಂಜಿನಿಯರು ಎಸ್ಟಿಮೇಟ್ ಮಾಡಿ ಟೆಂಡರ್ ಕೊಟ್ಟಾಗ ತದನಂತರ ಟೆಂಡರ್ ಕರೆದಮೇಲೆ ಇವರಿಗೂ ಕಂಟ್ರಾಕ್ಟರಿಗೂ ವ್ಯವಹಾರ ತೃಪ್ತಿಕರವಾಗಿ ನಡೆದು ಹೊಂದಿಕೊಂಡು ಬಂದಿದ್ದಾರೆ. ಮೊದಲು ಮಾಡಿದ್ದಂತಹ ಎಸ್ಟಿಮೇಟನ್ನು ರಿವೈಜ್ ಮಾಡಿದರು. ಮೆಟೀರಿಯಲ್ಸ್ ರಿವೈಜ್ ಮಾಡಿದರು. ಮೊದಲು ಕಾನ್‌ಕ್ರೀಟ್ ಹಾಕಬೇಕೆಂದಿದ್ದದ್ದು ಸ್ಟೀಲ್ ಪೈಪ್ ಹಾಕಬೇಕೆಂದು ಮಾಡಿದ್ದಾರೆ. ಇದರಿಂದ ಲಕ್ಷಾಂತರ ರೂಪಾಯಿಗಳು ವ್ಯತ್ಯಾಸ ಬರುತ್ತವೆ. ಟೆಂಡರು ಕರೆದು ಕಂಟ್ರಾಕ್ಟರು ಮತ್ತು ಇವರು ಮಾತನಾಡಿಕೊಂಡು ವ್ಯವಹಾರವನ್ನು ನಡೆಸಿದ್ದಾರೆ. ಈ ರೀತಿ ಎಸ್ಟಿಮೇಟುಗಳನ್ನು ಬದಲಾವಣೆ ಮಾಡಿದರೆ ಪ್ರತಿಯೊಬ್ಬರಿಗೂ ಅನುಮಾನ ಬರುತ್ತದೆ. ಒಬ್ಬರಿಗೊಬ್ಬರು ಒಳಗೊಳಗೇ ಸಹಕಾರ ಮಾಡಿಕೊಂಡು ಸರ್ಕಾರದ ಟ್ರೆಜರಿಯನ್ನು ಕೊಳ್ಳೆ ಹೊಡೆಯುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಸರ್ಕಾರದವರು ಜನತೆಯನ್ನು ವಂಚಿಸುವುದಕ್ಕೆ ತಯಾರಾಗಿದ್ದಾರೆ. ಇದರಿಂದಲೇ ಗೊತ್ತಾಗುತ್ತದೆ ಸರ್ಕಾರದ ಪ್ರವೃತ್ತಿ ಹೇಗಿದೆ ಎಂಬುದು. ಸರ್ಕಾರದವರು ಆರ್ಡರ್ ಮಾಡತಕ್ಕ ಕಾಲದಲ್ಲಿ ಹೇಳಿದ್ದಾರೆ, ಅದರಲ್ಲಿ ಟರ್ಮ್ಸ್ ಅಂಡ್ ಕಂಡೀಷನ್ಸ್ ಬಹಳ ಪ್ರಾಮುಖ್ಯವಾದುದು ಎಂದು. ಮೆಸರ್ಸ್ ಇಂಜಿನಿಯರಿಂಗ್ ಕನ್‌ಸ್ಟ್ರಕ್ಷನ್ ಕಂಪೆನಿ ಮದ್ರಾಸ್ ಇವರಿಗೆ ಸರ್ಕಾರದ ಆರ್ಡರ್ ಪ್ರಕಾರ ಟರ್ಮ್ಸ್ ಎ (2) Payment Cash advance of 4 lakhs against bank guarantee ಕೊಟ್ಟು ಅದನ್ನು ಪ್ರತಿ ತಿಂಗಳು ಬಿಲ್ಲಿನಲ್ಲಿ ಕೊಡತಕ್ಕ ಹಣದಲ್ಲಿ ರೆಕವರ್ ಮಾಡಿಕೊಳ್ಳಬೇಕೆಂದು ಹೇಳಿದ್ದಾರೆ. ಅವರಿಗೆ ಬಂಡವಾಳವೇ ಇಲ್ಲ. ಅರ್ನೆಸ್ಟ್ ಮನಿ ಡಿಪಾಜಿಟ್ ತೆಗೆದುಕೊಳ್ಳದೇ ಅವರಿಗೆ ಕಂಟ್ರಾಕ್ಟ್ ಕೊಟ್ಟಿದ್ದಾರೆ. 4 ಲಕ್ಷ ರೂಪಾಯಿಗಳ ಅಡ್ವಾನ್ಸ್ ಕೊಟ್ಟು ಅದನ್ನು ಬಿಲ್ಲು ಕೊಟ್ಟಾಗ ಬರತಕ್ಕಂಥ ಲಾಭದಲ್ಲಿ ಈ ಹಣವನ್ನು ರೆಕವರ್ ಮಾಡಬೇಕೆಂದು ಹೇಳಿದ್ದಾರೆ. Payment of extra cost due to escalation in prices of cement by the Department ಎಂದು ಹೇಳಿದ್ದಾರೆ. ಮೆಟೀರಿಯಲ್ಸ್ ರೇಟ್ ಹೆಚ್ಚಾದರೂ ಕೂಡ ಅದನ್ನು ಸರ್ಕಾರ ಕೊಡಬೇಕು. ಯಾವ ಘನವಾದ ಉದ್ದೇಶವನ್ನು ಇಟ್ಟುಕೊಂಡು ಈ ರೀತಿ ಮಾಡಿದ್ದಾರೆ?

ಆಮೇಲೆ (iii) Fixed deposit recovery at $2\frac{1}{2}$ per cent instead of 5 per cent as per codal rules ಎಂದು ಸರ್ಕಾರದ ಆರ್ಡರಿನಲ್ಲಿ ಹೇಳಿದ್ದಾರೆ. ಆಮೇಲೆ (iv) Payment of 90 per cent secured advance against materials brought to site, as against 75 per cent as per the code ಎಂದು ಹೇಳಿದ್ದಾರೆ. ಮೆಟೀರಿಯಲ್ಸ್ ಬೇಕಾದರೆ ಬನ್ನಿ ಬುಕ್ ಮಾಡುತ್ತೇವೆ ಎಂದು ಹೇಳಿದ್ದಾರೆ. ಅವನ ಮೆಟೀರಿಯಲ್ಸ್‌ಗೆ ಮುಂಚೆಯೇ 90 ಪರ್ಸೆಂಟ್ ಅಡ್ವಾನ್ಸ್ ಕೊಟ್ಟು ಇಷ್ಟೆಲ್ಲಾ ರಿಯಾಯಿತಿಯನ್ನೂ ಅವರಿಗೆ ಕೊಡಬೇಕಾದರೆ ಅದಕ್ಕೆ ಸಂಬಂಧಪಟ್ಟ ಮಂತ್ರಿಗಳಾಗಲೀ, ಸಂಬಂಧಪಟ್ಟ ಚೀಫ್ ಇಂಜಿನಿಯರಾಗಲೀ ಅದರಲ್ಲಿ ಎಷ್ಟು ಲಂಚವನ್ನು ಹೊಡೆದಿದ್ದಾರೆ ಎಂದು ನಾನು ಕೇಳುತ್ತೇನೆ. ಮೆಸರ್ಸ್ ಇಂಡಿಯನ್ ಹ್ಯೂಮ್ ಪೈಪ್ ಕಂಪೆನಿ ಲಿಮಿಟೆಡ್ ಇವರಿಗೆ 1,41,25,259 ರೂಪಾಯಿಗಳ ಕಂಟ್ರಾಕ್ಟ್ ಕೆಲಸವನ್ನು ಕೊಟ್ಟಿದ್ದಾರೆ. ಅವರಿಂದ ಯಾವ ಅರ್ನೆಸ್ಟ್ ಡಿಪಾಜಿಟ್ಟನ್ನೂ ತೆಗೆದುಕೊಂಡಿಲ್ಲ. ಫಿಕ್ಸೆಡ್ ಡಿಪಾಜಿಟ್ಟನ್ನು 5 ಪರ್ಸೆಂಟಿಗೆ ಬದಲಾಗಿ $2\frac{1}{2}$ ಪರ್ಸೆಂಟ್ ರೆಕವರಿ ಮಾಡಬೇಕೆಂದು ಹೇಳಿದ್ದಾರೆ. ಅವರಿಗೆ 15 ಲಕ್ಷ ರೂಪಾಯಿಗಳನ್ನು ಅಡ್ವಾನ್ಸ್ ಕೊಟ್ಟಿದ್ದಾರೆ. ಅದನ್ನು ಬಿಲ್ಲಿನಲ್ಲಿ ರೆಕವರ್ ಮಾಡಿಕೊಳ್ಳಬೇಕೆಂದು ಹೇಳಿದ್ದಾರೆ. ಇದೆಲ್ಲಾ ಸರ್ಕಾರದ ಆರ್ಡರಿನಲ್ಲಿ ಕೈಗನ್ನಡಿ ಇದ್ದಹಾಗೆ ಇದೆ. ಇದು ಗೆಜೆಟ್‌ನಲ್ಲಿ ಕೂಡ ನೋಟಿಫಿಕೇಷನ್ ಆಗಿದೆ. ಈ ಕಂಟ್ರಾಕ್ಟಿನಲ್ಲಿ ದುರ್‌ವ್ಯವಹಾರ ನಡೆದಿದೆ. ಇದರಲ್ಲಿ ನೀವು ಯಾರ ದಾಕ್ಷಿಣ್ಯಕ್ಕೆ ಒಳಗಾಗಿದ್ದೀರಿ? ಲಕ್ಷಗಟ್ಟಲೆ ಹಣ ಹಾಳಾಗಿದೆ ಎನ್ನತಕ್ಕ ಅನುಮಾನವನ್ನುಂಟುಮಾಡಿದ್ದೀರಿ. ಇದು ಶತಮೂರ್ಖನಿಗೂ ಅರ್ಥವಾಗುತ್ತದೆ. ಇದಕ್ಕೆ ಇನ್ನೊಂದು ಕಂಡೀಷನ್ ಸೇರಿಸಿದ್ದಾರೆ. ಅದೇನೆಂದರೆ, ರೆಕವರಿ ಎಫ್. ಎಸ್. ಡಿ. ಕ್ಯಾಷ್ ರೆಕವರಿ ಮಾಡುವ ಹಾಗಿಲ್ಲ. 5 ಪರ್ಸೆಂಟ್ ರೆಕವರಿಯನ್ನು by way of bank guarantee ಯಿಂದ ಮಾಡಿಕೊಳ್ಳಿ ಎಂದು ಹೇಳಿದ್ದಾರೆ. ಇಂಥಾದ್ದು ಪ್ರಪಂಚದಲ್ಲಿ ಎಲ್ಲೂ ಇಲ್ಲ. ಒಂದು ಹೊಸ ರೀತಿಯಲ್ಲಿ ಮಾಡಿದ್ದಾರೆ. ಬ್ಯಾಂಕ್ ಷೂರಿಟಿ ಕೊಟ್ಟಿದ್ದರೆ ಸಾಕಾಗಿತ್ತು.

(ಶ್ರೀ ಎಚ್. ಎನ್. ನಂಜೇಗೌಡ)

ಆಮೇಲೆ (ಬಿ) 3ರಲ್ಲಿ payment of extra cost due to escalation in proce of ಮೈಲ್ಡ್ ಸ್ಟೀಲ್ ಪ್ಲೇಟ್ಸ್, ಸಿಮೆಂಟ್, ಎಲೆಕ್ಟ್ರೋಡ್ಸ್ ಇದರಲ್ಲಿ ನನಗೆ ಅನುಮಾನವಿದೆ. ಮೈಲ್ಡ್ ಸ್ಟೀಲ್ ಪ್ಲೇಟಿನ ರೇಟು ಏರುವ ಸಂದರ್ಭ ಇದೆ. ಇದಕ್ಕೆ ಯಾರು ಜವಾಬ್ದಾರರು? ಸಾಮಾನು ಗಳ ರೇಟು ಏರಿದ ಹಾಗೆ ರೇಟು ಕೊಟ್ಟುಕೊಂಡು ಬಂದಿದ್ದಾರೆ. ಎಸ್ಟಿಮೇಟುಗಳನ್ನು ಚೀಫ್ ಇಂಜಿನಿಯರು ಬದಲಾವಣೆ ಮಾಡಿದ್ದಾರೆ. ಅರ್ನೆಸ್ಟ್ ಮನಿ ಡಿಪಾಜಿಟ್ ಕಟ್ಟಿಲ್ಲ. ಟೆಂಡರ್ ಹಾಕಿಲ್ಲ. ಅವರಿಗೆ ಕೊಟ್ಟಿರುವುದು ಲೋಯಸ್ಟ್ ಟೆಂಡರಿನಲ್ಲಿ. ಈ ರೀತಿಯಾಗಿ ಅವರಿಗೆ ನಾನಾ ಸವಲತ್ತುಗಳನ್ನು ಕೊಟ್ಟು ಅನ್ಯಾಯ ಮಾಡಿರುವುದರಿಂದ ನೀವು ಸರ್ಕಾರದ ಅಧಿಕಾರದಲ್ಲಿ ಇರುವು ದಕ್ಕೆ ಯೋಗ್ಯರಲ್ಲ. ಇದು ಜನತೆ ದೃಷ್ಟಿಯಿಂದ ಪ್ರಶ್ನೆ ಮಾಡತಕ್ಕ ವಿಷಯವಾಗಿದೆ. ಈ ಬಗ್ಗೆ ನಾನು ಇನ್ನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಇನ್ನು ಈ ಬಗ್ಗೆ ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಈ ಕಂಟ್ರಾಕ್ಟರ್‌ಗೆ 90 ಪರ್‌ಸೆಂಟ್ ಅಡ್ವಾನ್ಸ್ ಕೊಟ್ಟಿದ್ದಾರೆ. ಅಂದರೆ 100ಕ್ಕೆ 90ರಷ್ಟು ಸರ್ಕಾರದವರು ಕೊಡುತ್ತಿದ್ದಾರೆ. 181ಲಕ್ಷದ ಕಂಟ್ರಾಕ್ಟನ್ನು ಈ ಕಂಟ್ರಾಕ್ಟರ್‌ಗೆ ಕಾನೂನಿಗೆ ವಿರುದ್ಧವಾಗಿ ಕೊಟ್ಟು ಕೇವಲ ಅವರಿಗೆ ಸಹಾಯ ಮಾಡಬೇಕೆಂದು ಅಧಿಕಾರದ ದುರುಪ ಯೋಗ ಮಾಡುತ್ತಿದ್ದಾರೆ. ಆದ್ದರಿಂದ ಈ ಸರ್ಕಾರದವರು ನಂಬಿಕೆಗೆ ಅನರ್ಹರು ಎಂದು ಸಾಕ್ಷಿ ರೂಪವಾಗಿ ಹೇಳುತ್ತಿದ್ದೇನೆ.

ಇನ್ನು 24ನೇ ಅಗ್ರಿಮೆಂಟ್ ಬಗ್ಗೆ ಹೇಳಬೇಕೆಂದರೆ, ಇದು ಔಟ್ ಮೋಡೆಡ್ ಅಗ್ರಿಮೆಂಟ್. ಈ ಬಗ್ಗೆ ವಿವರಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಇದು 1892ರಲ್ಲಿ ಆದಂತಹ ಒಂದು ಅಗ್ರಿಮೆಂಟ್. ಈ ಅಗ್ರಿಮೆಂಟ್ ಪ್ರಕಾರ :

We have equitable basis and prescriptive rights; For the atchkat in existance already, according to prescriptive rights they were bound to give consent for our construction. Now, we are bound by the agreement to prove our *bona fides*.

ಈ ಅಗ್ರಿಮೆಂಟ್‌ನಿಂದ ನಮಗೆ ಅನ್ಯಾಯವಾಗಿದೆ. ನಮಗೆ ಪ್ರಜಾರಾಜ್ಯ ಬಂದಮೇಲೆ, ಅಂದರೆ, 1947ನೇ ಇಸವಿಯಿಂದ ಇದುವರೆಗೆ ಈ ಸರ್ಕಾರದವರು ಈ ಬಗ್ಗೆ ಕಣ್ಣುಮುಚ್ಚಿಕೊಂಡು ಕುಳಿತಿದ್ದರೇ ಎಂದು ಕೇಳುತ್ತೇನೆ. 1961ನೇ ಇಸವಿಯಲ್ಲಿ ಆಗಿನ ಲೋಕೋಪಯೋಗಿ ಮಂತ್ರಿ ಗಳಾದ ಶ್ರೀ ವೀರಣ್ಣಗೌಡರು ಮತ್ತು ಮುಖ್ಯಮಂತ್ರಿಗಳಾದಂಥ ಶ್ರೀ ಜತ್ತಿಯವರು ಕೇಂದ್ರದಲ್ಲಿ ನೀರಾವರಿ ಮಂತ್ರಿಗಳು ಹೇಳಿದಂತೆ ಕೇಳಿಕೊಂಡು ಈ ಬಗ್ಗೆ ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ಈ ಅಗ್ರಿಮೆಂಟ್ ಪ್ರಕಾರ ನಮ್ಮ ರಾಜ್ಯದವರು 44 ಟಿ. ಎಂ. ಸಿ. ಫೀಟ್ ಉಪಯೋಗ ಮಾಡಿ ಕೊಳ್ಳುವ ಬಗ್ಗೆ ಅವಕಾಶವಿದ್ದರೂ ಸಹ ಮಾನ್ಯ ಮಂತ್ರಿಗಳು ಕಾರ್ಯಕ್ರಮ ಕೈಕೊಳ್ಳಲು ಹಣವಿಲ್ಲ, ಕ್ಲಿಯರೆನ್ಸ್ ಇಲ್ಲವೆಂದು ಹೇಳಿಕೊಂಡು ಬಂದಿದ್ದಾರೆ. ಹೇಮಾವತಿ ಮತ್ತು ಹಾರಂಗಿ ಯೋಜನೆ ಗಳಿಂದಲೇ 28 ಟಿ. ಎಂ. ಸಿ. ಫೀಟ್ ನೀರನ್ನು ಉಪಯೋಗ ಮಾಡಿಕೊಳ್ಳಬಹುದಾಗಿದೆ. ಈ ಅಗ್ರಿ ಮೆಂಟ್ ಪ್ರಕಾರ ನಮ್ಮ ಭಾಗದ ನೀರನ್ನು ಉಪಯೋಗಿಸಿಕೊಳ್ಳುವ ಬಗ್ಗೆ ನಮ್ಮ ಸರ್ಕಾರದವರು ಜಾಣತನವನ್ನು ತೋರಿಸಬೇಕೆಂದು ಹೇಳುತ್ತೇನೆ.

ಇನ್ನು ನಾಗಾರ್ಜುನಸಾಗರದ ಬಗ್ಗೆ ಹೇಳಬೇಕೆಂದರೆ, ಅಲ್ಲಿ ತೆಗೆದಂಥ ಎರಡು ಫೋಟೋ ಗಳು ನನ್ನಲ್ಲಿ ಇವೆ. ಮೂರು ತಿಂಗಳ ಹಿಂದೆ ತೆಗೆದಂಥ ಫೋಟೋಗಳು ಇವು. (ಫೋಟೋಗಳನ್ನು ಸಭೆಯಲ್ಲಿ ತೋರಿಸಿದರು). ಈ ಅಣೆಕಟ್ಟಿನ ಮೇಲೆ ರಸ್ತೆ ಕೂಡ ತಯಾರಾಗಿದೆ. ಕ್ರೆಸ್ಟ್‌ಗೇಟ್ ಯಾವ ಸ್ಟೇಜ್‌ನಲ್ಲಿದೆ ಎಂಬುದನ್ನು ಮಾನ್ಯ ಮಂತ್ರಿಗಳು ಈ ಫೋಟೋ ನೋಡಿ ತಿಳಿದುಕೊಳ್ಳ ಬಹುದು. ನಾನೇನು ಇಂಜಿನಿಯರಿಂಗ್ ಎಕ್ಸ್‌ಪರ್ಟ್ ಅಲ್ಲ. ಈ ಗೇಟ್‌ಗಳನ್ನು ಫಿಕ್ಸ್ ಮಾಡಿದರೆ ಎಫ್. ಆರ್. ಎಲ್ ಎರಡನೆಯ ಸ್ಟೇಜ್ ಮುಕ್ತಾಯವಾಗುತ್ತದೆ. ಮೊದಲನೆಯ ಸ್ಟೇಜ್ ಹಾರಿ ಹೋಗುತ್ತದೆ. ಇನ್ನು ಮುಂದೆ ಕ್ರೆಸ್ಟ್ ಗೇಟ್ ವಿಷಯ ಸತ್ತುಹೋದ ವಿಷಯ ಎಂದು ಹೇಳ ಬೇಕಾಗುತ್ತದೆ. ಇನ್ನು ಮುಂದೆ ನೀವು ಏನೂ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಇನ್ನು ಉಳಿದಿರುವುದೆಂದರೆ, ಈ ಮಂತ್ರಿಮಂಡಲದವರಿಗೆ ದುಃಖದಿಂದ ಕಂಡೋಲೆನ್ಸ್ ವ್ಯಕ್ತಪಡಿಸುವುದು ಒಂದೇ ಉಳಿದಿರುವುದು.

ಇನ್ನು ಇಂಟರ್ ಸ್ಟೇಟ್ ರಿವರ್ ವಾಟರ್ ಆಕ್ಟ್ ಬಗ್ಗೆ ಒಂದು ಪ್ರಾವಿಜನ್ ಇದೆ. ನೆಗೋಷಿ ಯೇಷನ್ ಎಂದು ಮಾತ್ರ ಈ ಆಕ್ಟ್‌ನಲ್ಲಿ ಹೇಳಿದ್ದಾರೆಯೇ ಹೊರತು, ಟೈಮ್ ಫಿಕ್ಸ್ ಮಾಡಿಲ್ಲ.

ಈ ಆಕ್ಟ್ ಪ್ರಕಾರ 10ವರ್ಷ ಬೇಕಾದರೂ ನೆಗೋಷಿಯೇಷನ್ ನಡೆಸಬಹುದು. ಆದ್ದರಿಂದ ನಮ್ಮ ಸರ್ಕಾರದವರು ಈ ಪ್ರಾವಿಜನ್ ಬಗ್ಗೆ ಒಂದು ಅಮೆಂಡ್‌ಮೆಂಟ್ ತರುವಂತೆ ಕೇಂದ್ರಸರ್ಕಾರಕ್ಕೆ ಒತ್ತಾಯ ಮಾಡಿ ಒಂದು ವರ್ಷದೊಳಗೆ ನೆಗೋಷಿಯೇಷನ್ ಮುಗಿಯಬೇಕೆಂದು ಈಗಿರತಕ್ಕಂಥ ಆಕ್ಟ್ ಬದಲಾವಣೆ ಮಾಡಿಸಬೇಕು. ಮತ್ತು ಈ ಬಗ್ಗೆ ಕಾನೂನುಬದ್ಧವಾಗಿ ತೀರ್ಮಾನ ತೆಗೆದು ಕೊಳ್ಳಬೇಕೆಂದು ಹೇಳುತ್ತೇನೆ.

ನಮ್ಮ ರಾಜ್ಯದಲ್ಲಿ ಮೇಜರ್ ಇರಿಗೇಷನ್ ಪ್ರಾಜೆಕ್ಟ್‌ಗಳನ್ನು ಕಂಟ್ರಾಕ್ಟರ್‌ಗೆ ವಹಿಸುತ್ತಿರುವು ದರಿಂದ ಅವರು ಅಷ್ಟೊಂದು ಸಮರ್ಪಕವಾಗಿ ಕಟ್ಟುತ್ತಿಲ್ಲ. ಇದರಿಂದ ಸರ್ಕಾರದ ಹಣ ಹಾಳಾಗು ತ್ತಿದೆ. ಈ ಒಂದು ಪದ್ಧತಿ ಶ್ರೀ ಚೆನ್ನಬಸಪ್ಪನವರ ಕಾಲದಿಂದ ಬಂದಿದೆಯೆಂದು ತಾವು ಹೇಳ ಬಹುದು. ಇನ್ನು ಮುಂದೆಯಾದರೂ ಈ ಪ್ರಾಜೆಕ್ಟ್‌ಗಳನ್ನು ಕಂಟ್ರಾಕ್ಟರ್‌ಗಳಿಗೆ ಕೊಡದೆ ಇಲಾಖೆ ಯವರೇ ವಹಿಸಿಕೊಂಡು ಮಾಡಿಸಬೇಕು. ಆ ರೀತಿ ಮಾಡಿಸುವುದಕ್ಕೆ ನಮ್ಮಲ್ಲಿ ಹಣವಿಲ್ಲವೆಂದು ಹೇಳ ಬಹುದು. ಆ ರೀತಿ ಹಣ ಬೇಕಾದರೆ ಪಿ. ಎಲ್. 480ರ ಹಣವನ್ನು ಕೇಂದ್ರ ಸರ್ಕಾರದವರಿಂದ ಸಾಲವಾಗಿ ಪಡೆದು ನೀರಾವರಿ ಯೋಜನೆಗಳನ್ನು ಕಟ್ಟಿಸಬಹುದು. ಪಿ. ಎಲ್. 480ಕ್ಕೆ ಸೇರಿದಂತೆ ಕೇಂದ್ರ ಸರ್ಕಾರದವರ ಹತ್ತಿರ ಸುಮಾರು 1,200 ಕೋಟಿ ರೂಪಾಯಿಗಳಿವೆ. ಈ ಹಣವನ್ನು ಮತ್ತೆ ಅಮೇರಿಕಾಕ್ಕೆ ಕಳಿಸುವ ಹಾಗಿಲ್ಲವಾದ್ದರಿಂದ ಕೇಂದ್ರ ಸರ್ಕಾರದವರನ್ನು ಕೇಳಿ ಸಾಲವಾಗಿ ಪಡೆದು ಕೊಳ್ಳುವುದಕ್ಕೆ ಅವಕಾಶವಿದೆ. ಕಲಸುಮೇಲೋಗರದಂತೆ ಅನೇಕ ಕಂಟ್ರಾಕ್ಟರ್‌ಗಳಿಗೆ ಕೆಲಸವನ್ನು ವಹಿಸುವುದಕ್ಕಿಂತ ಸರ್ಕಾರದವರೇ ಎಲ್ಲಾ ಕೆಲಸಗಳನ್ನೂ ಮಾಡಿಸುವುದು ಒಳ್ಳೆಯದು. ಈ ನೀರಾ ವರಿ ಕಾಮಗಾರಿಗಳು ಯಶಸ್ವಿಯಾಗಿ ನಡೆದುಕೊಂಡು ಹೋಗುವ ಬಗ್ಗೆ ಒಂದು ನದಿ ಮಂಡಲ ಯನ್ನು ರಚನೆ ಮಾಡಿದರೆ ಒಳ್ಳೆಯದು. ಆ ರೀತಿ ರಚನೆ ಮಾಡಿದರೆ ಆ ಮಂಡಲಿಯವರು ಎಲ್ಲಾ ಕೆಲಸಗಳನ್ನೂ ಸುಗಮವಾಗಿ ನಡೆಸಿಕೊಂಡು ಹೋಗುತ್ತಾರೆ. ಮತ್ತು ಈ ಮೂಲಕ ಈ ಸರ್ಕಾರ ದವರಿಗೂ ಒಳ್ಳೆಯ ಹೆಸರು ಬರುತ್ತದೆಂದು ಸೂಚನೆ ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಮಂಚೇಗೌಡ (ಮದ್ದೂರು).—ಮಾನ್ಯ ಅಧ್ಯಕ್ಷರೇ, ಮರಾಮತ್ತು ಶಾಖಾ ಸಚಿವರು ಈ ಸಭೆಯ ಮುಂದೆ ಮಂಡಿಸಿರತಕ್ಕಂಥ ಬೇಡಿಕೆಗಳನ್ನು ಸ್ವಾಗತಿಸುತ್ತಾ ಈ ಬಗ್ಗೆ ಕೆಲವು ಅಂಶಗಳನ್ನು ಈ ಸಭೆಯ ಮುಂದೆ ಇಡಲಿಕ್ಕೆ ಇಷ್ಟಪಡುತ್ತೇನೆ. ಮುಂದಿನ ವರ್ಷದ ಬಡ್ಜೆಟ್‌ನಲ್ಲಿ ಈ ಇಲಾಖೆಗೆ ಏನು ಮೊಬಲಗನ್ನು ಒದಗಿಸಿದ್ದಾರೆಂದರೆ, ಒಟ್ಟು ಮೊಬಲಗಿನ ಸುಮಾರು ಅರ್ಧದಷ್ಟು ಭಾಗವನ್ನು ಈ ಇಲಾಖೆಗೆ ಒದಗಿಸಿದ್ದಾರೆ. ಈ ಇಲಾಖೆಗೆ ಒದಗಿಸಿರುವ ಒಟ್ಟು ಮೊಬಲಗು 91,30,74,500 ರೂಪಾಯಿಗಳು. ಇಷ್ಟೊಂದು ಹೆಚ್ಚಿನ ಮೊಬಲಗನ್ನು ನಮ್ಮ ಹಣಕಾಸಿನ ಸಚಿವರು ಈ ಇಲಾಖೆಗೆ ಒದಗಿಸಿರುವುದಕ್ಕಾಗಿ ನಾವೆಲ್ಲರೂ ಹೆಮ್ಮೆ ಪಡಬೇಕಾಗಿದೆ. ಈ ರೀತಿ ಒದಗಿಸಿರುವುದರ ಹಿನ್ನೆಲೆಯಾದರೂ ಕೂಡ ನಮ್ಮ ರಾಜ್ಯದಲ್ಲಿ ಏನು ಒಂದು ಅತಿ ಮುಖ್ಯವಾದಂಥ ಆಹಾರದ ಸಮಸ್ಯೆಯಿದೆ ಅದನ್ನು ಪರಿಹಾರ ಮಾಡುವುದಕ್ಕಾಗಿ ಎಂದು ಹೇಳಬಹುದು.

[MR. CHAIRMAN (SRI S. D. KOTHAVALE) in the Chair].

ಅಲ್ಲದೆ ಜನರ ನಿರ್ಧಿಷ್ಟವಾದಂಥ ಅಭಿಮತ ಏನಿದೆ ಅದನ್ನು ಗಮನದಲ್ಲಿಟ್ಟುಕೊಂಡು, ಕೇವಲ ನೀರಾವರಿ ಸೌಲಭ್ಯಗಳನ್ನು ಹೆಚ್ಚಿಸದ ಹೊರತು ನಮ್ಮ ಜನಗಳ ದುಸ್ಥಿತಿ ಸರಿಮಾಡುವುದಕ್ಕೆ ಅಸಾಧ್ಯ ಮತ್ತು ಸಮಾಜದಲ್ಲಿ ಏನು ಒಂದು ಅನಿಶ್ಚಿತ ಪರಿಸ್ಥಿತಿ ತಾಂಡವಾಡುತ್ತಿದೆ ಅದನ್ನು ಹೋಗಲಾಡಿಸುವುದಕ್ಕೆ ನೀರಾವರಿ ಯೋಜನೆಗಳಿಂದಲೇ ಸಾಧ್ಯ ಎಂದು ತಿಳಿದು ಇಷ್ಟು ಹಣವನ್ನು ಈ ಇಲಾಖೆಗೆ ಒದಗಿಸಿದ್ದಾರೆ. ಈ ರಾಷ್ಟ್ರದಲ್ಲಿ ನಾವು ಏನನ್ನು ನೋಡುತ್ತಿದ್ದೇವೆಂದರೆ ತಿಂಗಳಿಗೆ ಒಂದೊಂದು ಸರ್ಕಾರಗಳು ಉರುಳುತ್ತಿರುವುದನ್ನು. ಈ ರೀತಿ ಉರುಳಬೇಕಾದರೆ ಪಕ್ಷಗಳ ಮೇಲಿನ ಪ್ರೀತಿ ಅಲ್ಲ, ದ್ವೇಷ ಅಲ್ಲ. ನಮಗೆ ಏನು ಒಂದು ಅಧಿಕಾರ ಬಂದಿದೆ, ಅದನ್ನು ಯಾವ ಧಾಟಿಯಲ್ಲಿ ನಡೆಸುತ್ತಿದ್ದೇವೆಯೋ, ಅದರ ಮೇಲೆ ಜನರಿಗೆ ವಿಶ್ವಾಸವಿಲ್ಲದಾಗ ರೋಷ ಹತ್ತಿ ಸರ್ಕಾರವನ್ನು ಬದಲಾಯಿಸುವುದರಲ್ಲಿ ತಲ್ಲೀನರಾಗಿದ್ದಾರೆ. 91 ಕೋಟಿ ರೂಪಾಯಿ ಚಿಲ್ಲರೆಯನ್ನು ಈ ಇಲಾಖೆಗೆ ಸರ್ಕಾರದವರು ಒದಗಿಸಿರಬೇಕಾದರೆ, ನಾವು ಎದುರಿಸುತ್ತಿರುವ ಆಹಾರ ಸಮಸ್ಯೆ ಯನ್ನು ಬಗೆಹರಿಸಬೇಕೆಂಬುದಾಗಿ ಹೆಚ್ಚು ಆಹಾರವನ್ನು ಉತ್ಪತ್ತಿ ಮಾಡಲೇಬೇಕೆಂಬುದಾಗಿ ಇಷ್ಟು ಹಣವನ್ನು ಒದಗಿಸಿದ್ದಾರೆ. ಈ ಹಣವನ್ನು ಒಟ್ಟು ಆರು ಭಾಗಗಳಾಗಿ ವಿಂಗಡಿಸಿದ್ದಾರೆ. ಯಾವ ಯಾವ ಬಾಬುಗಳಿಗೆ ಎಷ್ಟೆಷ್ಟು ಹಣವನ್ನು ಒದಗಿಸಿದ್ದಾರೆ, ಒದಗಿಸಿರತಕ್ಕಂಥ ಹಣದಿಂದ ನಮ್ಮ ಉದ್ದೇಶ ಸಾಧನೆಯಾಗುತ್ತದೆಯೇ, ಜನತೆ ನಮ್ಮಿಂದ ಏನನ್ನು ಅಪೇಕ್ಷೆ ಪಡುತ್ತಿದ್ದಾರೆ,

(ಶ್ರೀ ಎಂ. ಮಂಚೇಗೌಡ)

ಅವರ ಅಪೇಕ್ಷೆಯನ್ನು ಈಡೇರಿಸುವುದಕ್ಕೆ ಸಾಧ್ಯವೇ ಎಂಬುದನ್ನೆಲ್ಲಾ ನಾವು ನೋಡಬೇಕಾಗಿದೆ. ಈಗ ಹಾಲ ನಡೆಯುತ್ತಿರುವ ನೀರಾವರಿ ಕೆಲಸಗಳನ್ನು ಮತ್ತು ಮುಂದೆ ತೆಗೆದುಕೊಳ್ಳುವಂಥ ನೀರಾವರಿ ಕೆಲಸಗಳನ್ನು ಸೇರಿಸಿ ಒಟ್ಟು 12 ಕೋಟಿ, 86 ಲಕ್ಷ 11 ಸಾವಿರ ರೂಪಾಯಿಗಳನ್ನು ಒದಗಿಸಿದ್ದಾರೆ. ಈಗ ನೀರಾವರಿ ಕೆಲಸಗಳು ಏನಿವೆ, ಅವುಗಳ ರಿಪೇರಿಗಾಗಿ, ಮೆಂಟೆನೆನ್ಸ್‌ಗಾಗಿ, ಟೂಲ್ಸ್ ಅಂಡ್ ಪ್ಲ್ಯಾಂಟ್ಸ್ ಮತ್ತು ಸಿಬ್ಬಂದಿ ವೆಚ್ಚಕ್ಕಾಗಿ 16 ಕೋಟಿ 45 ಲಕ್ಷ 12 ಸಾವಿರದ 200 ರೂಪಾಯಿಗಳನ್ನು ಒದಗಿಸಿದ್ದಾರೆ. ಅದೇ ರೀತಿ ಕಟ್ಟಡಗಳು, ರಸ್ತೆಗಳು, ಸೇತುವೆಗಳು ಮತ್ತು ಇವುಗಳಿಗೆ ಸಂಬಂಧಪಟ್ಟಂತಿರುವ ಸಿಬ್ಬಂದಿಗಳ ವೆಚ್ಚ ಮತ್ತು ರಿಪೇರಿಗಾಗಿ 37 ಕೋಟಿ 41 ಲಕ್ಷದ 85 ಸಾವಿರ ರೂಪಾಯಿಗಳನ್ನು ಒದಗಿಸಿದ್ದಾರೆ. ನಾವು ತಯಾರು ಮಾಡುತ್ತಿರುವ ವಿದ್ಯುಚ್ಛಕ್ತಿಯನ್ನು ಉಪಯೋಗಿಸಲಿಕ್ಕೆ ಅವಕಾಶವಿಲ್ಲದೆ ನೆರೆ ರಾಜ್ಯಗಳಿಗೆ ಮಾರಾಟ ಮಾಡುವುದಕ್ಕೆ ಒಡಾಡುತ್ತಿದ್ದೇವೆ. ನಮಗೆ ಬೇರೆ ಯೋಜನೆಗಳನ್ನು ಮಾಡುವುದಕ್ಕೆ ಸಾಧ್ಯವಿಲ್ಲದೆ ಈ ರೀತಿ ಮಾರಾಟ ಮಾಡಬೇಕಾಗಿದೆ. ಬೇರೆ ವಿದ್ಯುಚ್ಛಕ್ತಿ ಯೋಜನೆಗಳನ್ನು ಕೈಕೊಳ್ಳುವ ಬಗ್ಗೆ 23 ಕೋಟಿ 11 ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ? ಜೊತೆಗೆ ನಮ್ಮ ಮಾನ್ಯ ಸ್ನೇಹಿತರು ಹೇಳಿದರು, ನೀರು ಸರಬರಾಜು ವ್ಯವಸ್ಥೆಗೋಸ್ಕರ ಒಂದು ಕೋಟಿ 12 ಲಕ್ಷ ಒದಗಿಸಿದ್ದಾರೆ ಎಂದು. ಇದನ್ನು ಯಾರಿಗೋಸ್ಕರ ಸರಬರಾಜು ಮಾಡುತ್ತಾರೆ? ಫರ್ಟಿಲೈಸರ್ ಫ್ಯಾಕ್ಟರಿ, ಅಸೀಟೇಟ್ ಫ್ಯಾಕ್ಟರಿ ಮತ್ತು ಇತರ ಫ್ಯಾಕ್ಟರಿಗೋಸ್ಕರ ಒದಗಿಸುತ್ತಾರೆ. ಇದರಲ್ಲಿ ನಾವು ಯೋಚಿಸಬೇಕಾದುದು, ಮರಾಮತ್ ಇಲಾಖೆಯ ಜವಾಬ್ದಾರಿ ಇದೆಯೇ? ಅಸಿಟೇಟ್ ಫ್ಯಾಕ್ಟರಿಗೆ ಮಾಡುವಂತದ್ದನ್ನು, ಅವರು ವಹಿಸಿಕೊಳ್ಳಬೇಕು, ಫರ್ಟಿಲೈಸರ್ಸ್ ಫ್ಯಾಕ್ಟರಿಗೆ ಆಗುವಂತಹ ವೆಚ್ಚವನ್ನು ಅವರೇ ವಹಿಸಿಕೊಳ್ಳಬೇಕು. ಆ ರೀತಿ ಮಾಡದೆ ಈ ಇಲಾಖೆ ವಹಿಸಿಕೊಳ್ಳತಕ್ಕದ್ದು ಸಮಂಜಸವಲ್ಲವೆಂದು ನನ್ನ ಅಭಿಪ್ರಾಯ. ಅಂದಮೇಲೆ ಏನು ಹಣಕಾಸನ್ನು ಒದಗಿಸಿದ್ದಾರೆ, ಇದರ ಪ್ರಕಾರ 60 ಕೋಟಿ ಚಿಲ್ಲರೆ ರೂಪಾಯಿ ಬೇರೆ ಬೇರೆ ಬಾಬುಗಳಿಗೆ ಖರ್ಚಾಗುತ್ತದೆ. ಇದರಿಂದ ನಿಜವಾಗಿಯೂ ನೀರಾವರಿ ಕಾರ್ಯಗಳನ್ನು ಮುಂದುವರಿಸಬೇಕಾದರೆ, ನಾವು ಖರ್ಚು ಮಾಡತಕ್ಕ ಮೊಬಲಗು ಒಟ್ಟು ಮೊಬಲಗಿನಲ್ಲಿ ಕೇವಲ ಎಂಟನೇ ಒಂದು ಭಾಗ. ಕಳೆದ ಸಾರಿಯೂ ಅನೇಕ ಸದಸ್ಯರು ಎಲ್ಲಾ ವ್ಯಕ್ತಪಡಿಸಿದ್ದಾರೆ, ಏನೆಂದರೆ ಮೂರು ನಾಲ್ಕು ವರ್ಷ ಹೊಸ ರಸ್ತೆಗಳ ನಿರ್ಮಾಣ ಮಾಡದಿದ್ದರೂ ಚಿಂತೆ ಇಲ್ಲ, ಆರೋಗ್ಯ ಇಲಾಖೆಯನ್ನು ಬಿಟ್ಟು ಉಳಿದ ಇಲಾಖೆಗಳಿಗೆ ಕಟ್ಟಡ ಕಟ್ಟದಿದ್ದರೂ ಚಿಂತೆ ಇಲ್ಲ, ನಮಗೆ ಅತ್ಯಂತ ಮುಖ್ಯವಾಗಿ ಬೇಕಾದುದು ನೀರಾವರಿ ಸೌಲಭ್ಯವೆಂದು ಎಲ್ಲರೂ ಒಮ್ಮತದಿಂದ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಅದಕ್ಕೆ ಮಿಗಿಲಾಗಿ, ಈ ಆಡಳಿತ ಪಕ್ಷದ ಧ್ಯೇಯವೇನೆಂದರೆ, ನೀರಾವರಿ ಹೆಚ್ಚು ಮಾಡಿ ಆಹಾರ ಸಮಸ್ಯೆಯನ್ನು ಬಿಡಿಸಬೇಕಾದುದು. ಇದರಿಂದ ಈಗ ಎಷ್ಟುಮಟ್ಟಿಗೆ ನೀರಾವರಿ ಸೌಲಭ್ಯಗಳನ್ನು ಒದಗಿಸುವುದಕ್ಕೆ ಸಹಕಾರಿಯಾಗಿದೆ ಎಂಬುದನ್ನು ಪ್ರತ್ಯಕ್ಷವಾಗಿ ಕಾಣುತ್ತೇವೆ. ಮಾನ್ಯ ಮಂತ್ರಿಯವರು ಇದಕ್ಕೆ ಗಮನ ಕೊಟ್ಟಿಲ್ಲವೆಂದು ಕಾಣುತ್ತದೆ. ಕೇವಲ ಅಧಿಕಾರಿಗಳು ತಯಾರಿಸಿದಂತಹ ಪಟ್ಟಿಯನ್ನು ಈ ಸಭೆಯ ಮುಂದೆ ಇಟ್ಟಿದ್ದಾರೆ. ಇದು ಪ್ರಜಾಪ್ರಭುತ್ವವಲ್ಲವೇ? ಕಣ್ಣಿಟ್ಟು ನಾವು ಸ್ವತಃ ಪ್ರತಿಯೊಂದನ್ನೂ ವಿಮರ್ಶೆಮಾಡಿ, ಒಂದು ಜನತಾ ಯೋಜನೆಯನ್ನು ಮಾಡದೆ ಹೋದರೆ ಪ್ರಯೋಜನವಿಲ್ಲ, ಅದರ ಹೊರತು, ಅಧಿಕಾರಿಗಳ ಯೋಜನೆಯಿಂದ ನಮ್ಮ ರಾಷ್ಟ್ರದ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಿಲ್ಲ. 20 ವರ್ಷಗಳ ಕಾಲ ಏನು ಹಣವನ್ನು ಖರ್ಚುಮಾಡಿದ್ದೇವೆ, ಬಹುಶಃ ಅದರಲ್ಲಿ ಬಹು ಭಾಗವನ್ನು ಈ ಬಾಬಿಗೆ ಖರ್ಚು ಮಾಡುತ್ತಿದ್ದರೆ, ನಾವು ಇಂದು ಎದುರಿಸುತ್ತಿರುವ ಸಮಸ್ಯೆಯನ್ನು ಎದುರಿಸಬೇಕಾಗಿರಲಿಲ್ಲವೆಂದು ಕಾಣುತ್ತದೆ. ಎರಡನೆಯದು ವಿದ್ಯುಚ್ಛಕ್ತಿ ಬೇಕಾದಷ್ಟು ಉತ್ಪತ್ತಿಯಾಗುತ್ತಿದೆ. ಆ ವಿದ್ಯುತ್ ಮಂಡಳಿ ಏನಿದೆ, ಅದರ ಕಾನೂನು ಕುಸಿದು ಬೀಳುತ್ತದೆ. ಕಾರಣವಾದರೂ ಇಷ್ಟೇ. ನಾವು ತಜ್ಞರ ಮುಖಾಂತರ ಏನು ಯೋಜನೆ ಇದ್ದರೂ ಮಾಡಿ ಕಾರ್ಯಗತ ಮಾಡುತ್ತೇವೆ. ಇಲ್ಲಿ ತಜ್ಞರಿಗೆ ಆಡಳಿತ ಪೂರ್ಣ ಅನುಭವವಿದೆ ಎಂದು ಯಾರೂ ಒಪ್ಪುವುದಕ್ಕಾಗುವುದಿಲ್ಲ. ಇದನ್ನು ಗಮನದಲ್ಲಿಟ್ಟುಕೊಂಡು ಜನರ ಕಷ್ಟಸುಖಗಳ ಅನುಭವ ಇಲ್ಲದಿದ್ದರೆ, ಬಹಳ ಕಷ್ಟ. ಅದನ್ನು ಸರ್ಕಾರವೇ ವಹಿಸಿಕೊಳ್ಳತಕ್ಕದ್ದು ಬಹಳ ಅಗತ್ಯ. ಈಗ ರಿಪೇರಿಗಾಗಿ ಬಹಳ ಹಣ ಒದಗಿಸುತ್ತಿದ್ದಾರೆ.

ಕೊನೆಯದಾಗಿ ಇಲಾಖೆಯಲ್ಲಿ ವ್ಯಯವನ್ನು ತಡೆಯುವುದಕ್ಕೋಸ್ಕರ ಒಂದು ಆಡಿಟ್ ಸೆಲ್ ಎಂದು ರಾಜ್ಯಮಟ್ಟದಲ್ಲಿದೆ. ಅದನ್ನು ತಪ್ಪಿಸಿ, ಜಿಲ್ಲಾ ಮಟ್ಟದಲ್ಲಿ ಇದನ್ನು ಮಾಡಬೇಕು ಮತ್ತು ಸೂಪರಿಂಟೆಂಡಿಂಗ್ ಇಂಜಿನಿಯರ್ಸ್ ಏನಿದ್ದಾರೆ, ಅವುಗಳನ್ನು ರದ್ದು ಮಾಡಬೇಕು. ಹಾಗೆ ಮಾಡಿದಲ್ಲಿ ಎಲ್ಲೆಲ್ಲಿ ಹಣ ವ್ಯಯವಾಗುತ್ತದೆ, ಅದು ಸರಿಯಾಗಿ ಖರ್ಚಾಗಿ, ಅದರಿಂದ ರೈತರಿಗೆ

ಅನುಕೂಲವಾಗುತ್ತದೆ ಮತ್ತು ಸರ್ಕಾರಕ್ಕೂ ಕೂಡ ಕೆಟ್ಟ ಹೆಸರು ತಪ್ಪುತ್ತದೆ ಎಂದು ಹೇಳಿ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Mr. CHAIRMAN.—Now Sri Parameswarappa.

I was informed by the hon'ble Deputy Speaker that the Minister will commence his reply at 6 P.M.

Sri H. SIDDAVEERAPPA.—Sir, I feel it is not correct because this is an important Demand covering Rs. 90 crores, nearly half the budget. Instead of taking up reply at the fag end of the day I suggest that the speech may go on upto 6 O' clock and tomorrow after the question hour let the Minister commence his reply. If it is only a question of ritual of giving reply and then asking the vote of the House, it is a different matter. But there are very important issues in which the Minister will be willing to take this House into confidence and say whatever he wants to say. Therefore I request to see that the discussions go on till 6 P.M. to day and let the reply commence tomorrow.

ಶ್ರೀ ಎನ್. ಹುಚ್ಚಮಾಸ್ತಿ ಗೌಡ (ಹುಲಿಯೂರುದುರ್ಗ).—ಸ್ವಾಮಿ, ಕಾಂಗ್ರೆಸ್ ಪಕ್ಷದ ಮುಖ್ಯ ಸಚೇತಕರ ಜೊತೆಗೆ ನಾನು ಸಮಾಲೋಚನೆ ಮಾಡಿದ್ದೇನೆ. ಇನ್ನೂ ಅನೇಕ ಸದಸ್ಯರು ಮಾತನಾಡಲಿರುವುದರಿಂದ, ಈ ದಿವಸ ಸುಮಾರು ಏಳು ಗಂಟೆಯವರೆಗೆ ಕುಳಿತುಕೊಂಡು ಭಾಗವಹಿಸಬೇಕಾದಂಥವರಿಗೆ ಅವಕಾಶ ಸಿಗುವ ಹಾಗೆ ಮಾಡಿ, ಮಾನ್ಯ ಮಂತ್ರಿಯವರು ನಾಳೆ ಉತ್ತರ ಕೊಡುವುದು ಎಂದು ಒಂದು ಅಭಿಪ್ರಾಯವನ್ನು ತೆಗೆದುಕೊಂಡಿದ್ದೇವೆ. ಇದನ್ನು ಮಾನ್ಯ ಡೆಪ್ಯುಟಿ ಸ್ಪೀಕರವರ ಗಮನಕ್ಕೂ ತಂದಿದ್ದೇವೆ.

Mr. CHAIRMAN.—If it is the desire of the House to continue the debate tomorrow, of course I am in the hands of the House.

Sri H. SIDDAVEERAPPA.—The consensus appears to be that the Minister will give reply tomorrow and whoever wants to speak today can speak so that every member may feel a sense of satisfaction.

Mr. CHAIRMAN.—As I have said before, it is difficult to accommodate every member to speak on every subject.

Sri VEERENDRA PATIL (Minister for Public Works).—I suggest that I will reply to the debate tomorrow but let the general discussion be over today. If there is any time, then I will request my collegue the Deputy Minister for Irrigation to speak for about half an hour. I am told that there are a number of members who want to speak and it may be difficult to accommodate every member.

Mr. CHAIRMAN.—I would like to know from the House whether we shall close at 6-30 P.M. or at 7 P.M.

HON'BLE MEMBER.—7 P.M.

5-30 P.M.

ಶ್ರೀ ಬಿ. ಪರಮೇಶ್ವರಪ್ಪ (ಹೊಳಲ್‌ಕೆರೆ).—ಸನ್ಮಾನ್ಯ ಅಧ್ಯಕ್ಷರೇ, ಲೋಕೋಪಯೋಗಿ ಇಲಾಖೆಯ ಮಂತ್ರಿಗಳು ಮಂಡಿಸಿರತಕ್ಕ ಹಣಕಾಸಿನ ಬೇಡಿಕೆಗಳನ್ನು ಈಗ ವಿಚಾರ ಮಾಡ ಬೇಕಾಗಿದೆ. ಈ ಸಂದರ್ಭದಲ್ಲಿ ನಮ್ಮ ದೇಶದಲ್ಲಿ ಅನೇಕ ಮೇಜರ್ ಇರಿಗೇಷನ್ ಕೆಲಸ ಕಾರ್ಯಗಳು ನಡೆಯುತ್ತಿವೆ. ಹೀಗೆ ಇದ್ದರೂಕೂಡ ಲಕ್ಕವಳ್ಳಿ, ತುಂಗಭದ್ರ ಪ್ರಾಜೆಕ್ಟುಗಳನ್ನು ಮಾಡಿ ನಾಲೆ ನಿರ್ಮಿಸುವ ಕೆಲಸ ನಡೆದಿದೆ. ಭದ್ರಾವತಿ, ಚೆನ್ನಗಿರಿ, ದಾವಣಗೆರೆ, ಹರಿಹರ ಈ ಭಾಗದಲ್ಲಿ ನಾಲೆ

(ಶ್ರೀ ಬಿ. ಪರಮೇಶ್ವರಪ್ಪ)

ಕೆಲಸಕಾರ್ಯಗಳು ನಡೆದಿದೆ. ಕಾರಣಾಂತರದಿಂದ ಅಂಥ ನಾಲೆ ತೆಗೆಯುವ ಕೆಲಸಕಾರ್ಯ ನಮ್ಮ ತಾಲ್ಲೂಕಿಗೆ ಬಾರದೆ ಮೈನರ್ ಇರಿಗೇಷನ್ ಸಣ್ಣಪುಟ್ಟ ಕೆರೆಗಳನ್ನು ಕಟ್ಟುತಕ್ಕಂಥ ಅವಕಾಶ ಇದೆ. ಈ ಸಂದರ್ಭದಲ್ಲಿ ನಮ್ಮ ತಾಲ್ಲೂಕಿನಲ್ಲಿ 20—30 ಹೊಸ ಕೆರೆಗಳನ್ನು ನಿರ್ಮಾಣ ಮಾಡಿದ್ದಾರೆ. ಎರಡು ಮೂರು ವರ್ಷಗಳ ಹಿಂದೆ ಮಂಜೂರಾದ ಕೆಲಸ ಕಾರ್ಯಗಳಿಗೆ ಹಣ ಮಂಜೂರು ಮಾಡಿದ್ದಾರೆಯೇ ಎಂದು ಬಜೆಟ್ಟಿನಲ್ಲಿ ನೋಡಿದೆ ಆದರೆ ಅವುಗಳ ಬಗ್ಗೆ ಏನೂ ಇಲ್ಲ. ಮಂಜೂರಾಗಿದೆ ಎಂಬ ಭಾವನೆ ಇರುವಾಗ ಈಗ ನಿರಾಶೆ ಪಡತಕ್ಕಂಥ ಸನ್ನಿವೇಶ ಬಂದಿದೆ. ಮಂಜೂರಾದ ಕೆಲಸಗಳನ್ನು ಪೂರೈಸಬೇಕು ಎಂಬ ಉದ್ದೇಶ ಇಟ್ಟುಕೊಂಡು ಕೆಲಸ ಮಾಡತಕ್ಕಂಥಾದ್ದು ಮುಖ್ಯ. ಹೊಸ ಹೊಸ ಕೆರೆಗಳ ನಿರ್ಮಾಣ ಮಾಡಿದ್ದೇವೆ, ಅನುಕೂಲತೆ ಮಾಡಿಕೊಟ್ಟಿದ್ದೇವೆ ಎಂದು ಹೇಳುವುದು ಅಷ್ಟೇ ಆಗಿದೆ. ಈ ಸಂದರ್ಭದಲ್ಲಿ ಇನ್ನೊಂದು ಮಾತು ಹೇಳಬೇಕಾಗುತ್ತದೆ. ಹಳೇ ಕೆರೆಗಳ ಜೀರ್ಣೋದ್ಧಾರ ಮಾಡತಕ್ಕ ಕೆಲಸ ಮುಖ್ಯ. ಇದು ಸಮರ್ಪಕವಾಗಿ ನಡೆದಿಲ್ಲ. ಹೊಸ ಕೆಲಸ ಮಾಡತಕ್ಕಂಥ ಮಾತನ್ನು ಹೇಳದೆ ನಾವು ಈ ಹಿಂದೆ ಮಾಡಿದ ಕೆಲಸದ ಕಡೆಗೆ ಗಮನ ಕೊಡದೇ ಹೋದರೆ ಕೆರೆಗಳು ಹಾಳಾಗಿ ಹೋಗುತ್ತವೆ ಮತ್ತು ಅನುಪಯುಕ್ತವಾಗುವ ಸಂದರ್ಭ ಬರುತ್ತದೆ. ಆದುದರಿಂದ ಹಳೇ ಕೆರೆಗಳ ಜೀರ್ಣೋದ್ಧಾರ ಕೆಲಸದ ಕಡೆಗೆ ಗಮನ ಕೊಟ್ಟು ಇಂಥ ಕೆಲಸ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ. ಆಹಾರ ಉತ್ಪಾದನೆಯ ವಿಚಾರದಲ್ಲಿ ನಮ್ಮ ದೇಶ ಸ್ವಾವಲಂಬನವಾಗಬೇಕು ಆದಕ್ಕೆ ಅನುಕೂಲತೆ ಬೇಕು ಎನ್ನುವುದನ್ನು ಮನಗಂಡು ನಮ್ಮ ಸರಕಾರ ಮೈನರ್ ಇರಿಗೇಷನ್ ಹೆಚ್ಚಾಗಿ ಮಾಡಿದ್ದಾರೆ. ಇರೀಗೆಷನ್ ವೆಲ್ಸ್ ಮಾಡಿದ್ದಾರೆ. ಇರಿಗೇಷನ್ ವೆಲ್‌ಗಳಿಗೆ ಇಲೆಕ್ಟ್ರಿಸಿಟಿ ಒದಗಿಸಬೇಕಾಗುತ್ತದೆ. ಆಹಾರಕ್ಕಾಗಿ ಪರದೇಶಕ್ಕೆ ಕೈ ಚಾಚಬಾರದು ಎಂದು ಹೇಳುವ ಕಾಲದಲ್ಲಿ ಶರಾವತಿ ಇಲೆಕ್ಟ್ರಿಸಿಟಿ ಉತ್ಪಾದನೆಯಾಗಿ ಬೇಕಾದಷ್ಟು ವಿದ್ಯುತ್ ಶಕ್ತಿ ಬಂದರೂ ಕೂಡ ಬಾವಿಗಳನ್ನು ತೆಗೆದಿದ್ದರೂ ಕೂಡ ಪಂಪ್‌ಸೆಟ್ಟುಗಳನ್ನು ತಂದು ಅವಕಾಶ ಮಾಡಿಕೊಂಡಿದ್ದರೂ ಕೂಡ ವಿದ್ಯುತ್‌ಶಕ್ತಿ ಕೊಡಲಿಕ್ಕೆ ತೊಂದರೆಯಾಗುತ್ತಿದೆ. ಒಂದು ಸಾವಿರ ರೂಪಾಯಿ ಕೊಡಬೇಕು ಎಂದು ನಿಗದಿ ಮಾಡಿದ್ದಾರೆ. ಅಡಮಾನ ಬ್ಯಾಂಕಿನವರು ಬಾವಿ ತೆಗೆಯುವುದಕ್ಕೆ 5,000 ರೂಪಾಯಿ ಸಾಲ ಕೊಡುತ್ತಾರೆ, ಪಂಪ್ ಸೆಟ್ ಕೊಳ್ಳುವುದಕ್ಕೆ ಸಾಲ ಕೊಡುತ್ತಾರೆ. ರೈತರ ಹತ್ತಿರ ಹಣವಿಲ್ಲ ಎಂದು ಸರಕಾರಕ್ಕೆ ಗೊತ್ತಿದ್ದರೂ ಕೂಡ ಯಾವ ಸವಲತ್ತೂ ಇಲ್ಲದೆ ಕರೆಂಟ್ ಕೊಡಬೇಕಾದರೆ ಒಂದು ಸಾವಿರ ರೂಪಾಯಿ ಡಿಪಾಜಿಟ್ ಮಾಡಬೇಕು ಅಂದರೆ ರೈತ ಎಲ್ಲಿಂದ ಹಣ ತರುವುದು ? ಪಂಪ್‌ಸೆಟ್ ಹಾಕಿಕೊಳ್ಳಲು ಸಾಲವಿಲ್ಲದೆ ಅದು ಸಾಧ್ಯವಿಲ್ಲದ ವಿಷಯ. ಇದನ್ನು ಆ ಕಡೆಯ ಸದಸ್ಯರೂ ಹೇಳಿದ್ದಾರೆ ಈ ಕಡೆಯ ಸದಸ್ಯರೂ ಮಾತನಾಡಿದ್ದಾರೆ. ನಿಜವಾಗಿಯೂ ಇಂದು ದೇಶದಲ್ಲಿ ಹೆಚ್ಚು ಆಹಾರ ಬೆಳೆಯಬೇಕು ಜನಗಳಿಗೆ ಸಮೃದ್ಧಿಯಾಗಬೇಕು ಎಂದು ಸರಕಾರದ ಉದ್ದೇಶವಿದ್ದರೆ ಕೂಡಲೇ ಅವರಿಗೆ ಕರೆಂಟ್ ಕೊಡಬೇಕು. ಬಾವಿ ತೆಗೆಸಿದ ಒಂದು ತಿಂಗಳ ಒಳಗಾಗಿ ಸರಕಾರ ಕರೆಂಟ್ ಕೊಡಬೇಕು. ಸರಕಾರ ಇದಕ್ಕೆ ಅವಕಾಶ ಮಾಡಿಕೊಡುತ್ತಾರೆ, ಅನುಕೂಲತೆ ಮಾಡಿಕೊಡುತ್ತಾರೆ ಎಂಬ ಭಾವನೆ ಜನರಲ್ಲಿದೆ. ಸರಕಾರ ಕೊಟ್ಟರ ತಕ್ಕ ವಚನ ಪರಿಪಾಲನೆ ಮಾಡಿದಹಾಗೆ ಆಗುತ್ತದೆ. ಕರೆಂಟ್ ಕೊಡುವುಕ್ಕೆ ಅನುಮಾನ ಪಟ್ಟರೆ ಹಿಂದೆ ಸರಕಾರ ಹೇಳಿರುವುದು ಸುಳ್ಳು ಆಶ್ವಾಸನೆಯಾಗುತ್ತದೆ. ಖಡಾಖಂಡಿತವಾಗಿ ಅರ್ಜಿ ಕೊಟ್ಟು ಒಂದು ತಿಂಗಳೊಳಗಾಗಿ ಪಂಪ್ ಸೆಟ್ಟುಗಳಿಗೆ ವಿದ್ಯುತ್ ಶಕ್ತಿ ಒದಗಿಸುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಈ ಮೂಲಕ ಬಿನ್ನವಿಸಿಕೊಳ್ಳುತ್ತೇನೆ.

ಭೀಮಸಮುದ್ರ ಕೆರೆಯ ಚಾನಲ್ ಒಡೆದುಹೋಗಿ ಅದು ಹಾಳಾಗುತ್ತಿದೆ. ಅದನ್ನು ಕೂಡಲೇ ರಿಪೇರಿ ಮಾಡಿ ನೀರು ಹರಿದು ಹೋಗದಂತೆ ಮಾಡಬೇಕು. ಇಂಥ ಕೆಲಸದ ಬಗ್ಗೆ ಹತ್ತು ವರ್ಷದಿಂದ ಕೇಳುತ್ತ ಬಂದಿದ್ದರೂ ಕೂಡ ಎಸ್ಟಿಮೇಟ್ ಮಾಡಿಸುತ್ತೇವೆ, ಪರಿಶೀಲನೆ ಮಾಡುತ್ತೇವೆ ಎಂದು ಹೇಳುತ್ತಾರೆ. ಹತ್ತು ವರ್ಷಗಳಿಂದ ಪರಿಶೀಲನೆ ಮಾಡುತ್ತಾ ಇದ್ದೇವೆ ಅಂದರ ಇವರು ಮಾಡುವ ಕೆಲಸವಾದರೂ ಏನು ? ಇದನ್ನು ಸರಕಾರದವರು ತಿಳಿದುಕೊಳ್ಳಬೇಕಾಗುತ್ತದೆ. ಅಲ್ಲಿ ಸಾವಿರಾರು ಎಕರೆ ಭೂಮಿ ಹಾಳಾಗುತ್ತಿದೆ. ಈ ವಿಚಾರವನ್ನು ಕಳೆದ ಹತ್ತುವರ್ಷ ಸರಕಾರ ಕಿವಿಗೆ ತೆಗೆದುಕೊಂಡಿಲ್ಲ. ಈಗಲಾದರೂ ಕೂಡ ಸರಕಾರ ಇದರ ಬಗ್ಗೆ ಎಚ್ಚರಿಕೆ ತೆಗೆದುಕೊಂಡು ಈ ವರ್ಷವಾದರೂ ಕೂಡ ಅದನ್ನು ಮಂಜೂರು ಮಾಡಿ ಭೂಮಿಯ ಮೇಲೆ ನೀರು ಹಾಯುವಂತೆ ಮಾಡಿಕೊಡಬೇಕು.

ಇನ್ನು ರೂರಲ್ ಕಮ್ಯುನಿಕೇಷನ್ಸ್ ವಿಚಾರದಲ್ಲಿ ಹಿಂದಕ್ಕೆ ಶ್ರೀ ಚೆನ್ನಬಸಪ್ಪನವರು ಮಂತ್ರಿಗಳಾಗಿದ್ದಾಗ ಒಂದು ತಾಲ್ಲೂಕಿಗೆ 50 ಮೈಲಿ ರಸ್ತೆ ಮಾಡಬೇಕು ಎಂದು ಅವರು ಮಾಡಿದರು. ಇದನ್ನು ಶ್ರೀಮಾನ್ ವೀರೇಂದ್ರ ಪಾಟೀಲರವರು ಮಂತ್ರಿಗಳಾದ ಮೇಲೆ ಕಳೆದ ಐದು ವರ್ಷಗಳಲ್ಲಿ

ಇದನ್ನು ಮಾಡುವುದಕ್ಕೆ ಸಾಧ್ಯವಾಗಿಲ್ಲ. ರಿಪೇರ್ ಮಾಡುವುದಕ್ಕೂ ಹಣ ಇಲ್ಲ ಎಂದು ಹೇಳುತ್ತಾರೆ. ಐದು ವರ್ಷಗಳಲ್ಲಿ ಒಂದು ಮೈಲಿ ಕೂಡ ರಸ್ತೆ ರಚನೆಯಾಗಿಲ್ಲ. ಒಂದು ವರ್ಷಕ್ಕೆ 50 ಮೈಲಿ ರಸ್ತೆ ಮಾಡುವುದು ಆಗದೇ ಇದ್ದರೆ ಒಂದು ವರ್ಷಕ್ಕೆ ಹತ್ತು ಮೈಲಿ ರಸ್ತೆಯನ್ನಾದರೂ ಮಾಡಬೇಕು. ಈ ರೂರಲ್ ಕಮ್ಯುನಿಕೇಷನ್‌ನಿಂದ ಹಳ್ಳಿಗಳಿಗೆ ನೇರವಾದ ಸಂಪರ್ಕ ಕೊಟ್ಟಹಾಗೆ ಆಗುತ್ತದೆ. ಇದು ಅತ್ಯಾವಶ್ಯಕವಾಗಿದೆ. ಈ ವಿಚಾರದಲ್ಲಿ ಇದನ್ನು ನಮ್ಮ ಕಡೆಯ ಮಾನ್ಯ ಮಿತ್ರರು ಅನೇಕರು ಹೇಳಿದ್ದಾರೆ. ಕಾಂಗ್ರೆಸ್ ಪಕ್ಷದ ಸದಸ್ಯರೂ ಸಹ ಇದನ್ನು ಹೇಳಿದ್ದಾರೆ. ಈ ಸಂದರ್ಭದಲ್ಲಿ ನಾನು ಒಂದು ಮಾತು ಹೇಳುತ್ತೇನೆ. ರೂರಲ್ ಕಮ್ಯುನಿಕೇಷನ್ 50 ಮೈಲಿ ಒಂದು ತಾಲ್ಲೂಕಿನಲ್ಲಿ ಮಾಡಬೇಕೆಂದು ನಿರ್ದಿಷ್ಟವಾದ ಸಂದರ್ಭದಲ್ಲಿ ದಾವಣಗೆರೆಯಲ್ಲಿ 90 ಮೈಲಿ, ಚಿತ್ರದುರ್ಗದಲ್ಲಿ 80 ಮೈಲಿ ಮಾಡಿ ನಮ್ಮ ಹೊಳಲ್‌ಕೆರೆ ತಾಲ್ಲೂಕಿನಲ್ಲಿ ಮಾತ್ರ 38 ಮೈಲಿ ಏತಕ್ಕೆ ಮಾಡಿದ್ದಾರೆ ? ಈ ವಿಚಾರದಲ್ಲಿ ಸರಕಾರ ಪಕ್ಷಾತೀತವಾಗಿ ಕೆಲಸ ಮಾಡಬೇಕು. ಈ ರೀತಿ ಹೇಳಬೇಕಾದಂಥ ಸಂದರ್ಭ ಬಂದಿದೆ ಎಂದು ಹೇಳಿದರೆ ಅವರು ತಲೆ ತಗ್ಗಿಸಬೇಕಾಗುತ್ತದೆ. ಸದ್ಭಾವನೆಯಿಂದ ಕೆಲಸ ಮಾಡದೇಇದ್ದರೆ ಜನರ ಟೀಕೆಗೆ ಗುರಿಯಾಗಬೇಕಾಗುತ್ತದೆ, ಇಲ್ಲವೆ ಅವರು ಇದನ್ನು ತಿದ್ದಿಕೊಳ್ಳಬೇಕಾಗುತ್ತದೆ. ಒಂದು ವರ್ಷದಲ್ಲಿ ರಸ್ತೆ ರಚನೆ 10 ಮೈಲಿಯನ್ನಾದರೂ ತೆಗೆದುಕೊಳ್ಳಬೇಕು ಎಂದು ಈ ಮೂಲಕ ಹೇಳುತ್ತೇನೆ.

ದೊಡ್ಡ ದೊಡ್ಡ ರಸ್ತೆಗಳನ್ನು ಮಾಡಿರುವುದನ್ನು ನೋಡುತ್ತೇವೆ. ಆದರೆ ನಮ್ಮ ತಾಲ್ಲೂಕಿನಲ್ಲಿ ಒಂದು ಸಾಸವೇ ಹಳ್ಳಕ್ಕೆ ಸೇತುವೆ ಕಟ್ಟುವ ಯೋಜನೆಯು ಅಂದಾಜು 3 ವರ್ಷಗಳ ಹಿಂದೆಯೇ 2 ಲಕ್ಷ 60 ಸಾವಿರ ರೂಪಾಯಿಗೆ ಅಂದಾಜಾಗಿದೆ. ನಮ್ಮ ತಾಲ್ಲೂಕಿಗೆ ಮಂತ್ರಿಗಳು ಪ್ರವಾಸಕ್ಕೆ ಬಂದಾಗ್ಗೆ ಇದನ್ನು ಕೇಳಿಕೊಂಡಿದ್ದೆವು. ಈ ವರ್ಷದ ಬಜೆಟ್ಟಿನಲ್ಲಿ ಅದನ್ನು ಸೇರಿಸುತ್ತೇನೆ ಎಂದು ಅವರು ಹೇಳಿದ್ದಾರೆ. ಆದರೆ ಕಾರಣಾಂತರದಿಂದ ಅದು ಈ ಬಜೆಟ್ಟಿನಲ್ಲಿ ಬಂದಿಲ್ಲ. ಇದೊಂದು ಕೆಲಸವಾಗದೆ ಇರುವುದರಿಂದ ದಾವಣಗೆರೆ, ಹೊಳಲ್‌ಕೆರೆ, ಹೊಸದುರ್ಗ ಮಾರ್ಗದಲ್ಲಿ ಓಡಾಡುವುದಕ್ಕೆ ಜನರುಗಳಿಗೆ ಜಾನುವಾರುಗಳಿಗೆ ಬಹಳ ತೊಂದರೆಯಾಗಿದೆ.

ಇನ್ನು ಲಿಫ್ಟ್ ಇರಿಗೇಷನ್ ಬಗ್ಗೆ ಮಾತನಾಡುವುದಾದರೆ ಗುಲಬರ್ಗ ಜಿಲ್ಲೆಗೆ ಬೀದರ್ ಜಿಲ್ಲೆಗೆ ಬೇಕಾದಷ್ಟು ಹಣ ಲಕ್ಷಾಂತರ ರೂಪಾಯಿ ಒದಗಿಸಿದ್ದಾರೆ ಎಂದು ಅನೇಕರು ಹೇಳಿದ್ದಾರೆ. ನೀರು ಇದೆ ಎಂದು ಲಿಫ್ಟ್ ಇರಿಗೇಷನ್ ಮಾಡಬಹುದು ಎಂದು ಹೇಳುವುದು ಸರಿಯಲ್ಲ. ಎಲ್ಲಿ ಲಿಫ್ಟ್ ಇರಿಗೇಷನ್ ಅವಶ್ಯಕತೆ ಇದೆ ಅಲ್ಲಿ ಮಾಡಬೇಕಾಗುತ್ತದೆ. ನಾವು ಅನೇಕ ಸಲ ಮನವಿ ಮಾಡಿಕೊಂಡಿದ್ದೇವೆ. ಕೆಲಸದ ಎಸ್ಟಿಮೇಟು ಆಗಿದ್ದರೂ ಕೂಡ ಮಲ್ಲನಹಳ್ಳಿ, ಹೊಳಲ್‌ಕೆರೆ ಇಲ್ಲಿ ಯಾವ ಕೆಲಸವೂ ಮಂಜೂರು ಆಗಿಲ್ಲ. ಮಂತ್ರಿಗಳು ತಮ್ಮ ತಾಲ್ಲೂಕಿಗೆ ತಮ್ಮ ಜಿಲ್ಲೆಗೆ ಬೇಕಾಗುವ ಕೆಲಸ ಮಾಡುವುದು ಸರಿಯಲ್ಲ. ನೀವು ದೇಶದ ಆಡಳಿತ ವಹಿಸಿಕೊಂಡಿದ್ದೀರಿ. ಮಂತ್ರಿಗಳು ಒಂದು ತಾಲ್ಲೂಕಿನ ಮಂತ್ರಿಗಳಲ್ಲ. ಅವರು ಇಡೀ ದೇಶದ ಮಂತ್ರಿಗಳು. ಆದುದರಿಂದ ಸಮತಾವಾದದಿಂದ ಕೆಲಸ ಮಾಡಬೇಕು. ಅಂದರೆ ಯಾರೂ ವಿರೋಧಿಸುವುದಿಲ್ಲ. ನೀವು ಒಳ್ಳೇ ಕೆಲಸ ಮಾಡಿದರೆ ಅದಕ್ಕೆ ನಿಮ್ಮನ್ನು ಅಭಿನಂದಿಸುತ್ತೇನೆ. ಆದುದರಿಂದ ಸಮತಾವಾದದಿಂದ ಕೆಲಸ ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಕೊನೆಯದಾಗಿ ನನಗೆ ಮಾತನಾಡಲು ಅವಕಾಶ ಕೊಟ್ಟದ್ದಕ್ಕೆ ಅಧ್ಯಕ್ಷರನ್ನು ವಂದಿಸಿ, ನನ್ನ ಮಾತು ಮುಕ್ತಾಯಗೊಳಿಸುತ್ತೇನೆ.

ಶ್ರೀ ಎಸ್. ಎಂ. ಗುರೆಡ್ಡಿ (ಮುದ್ದೇಬಿಹಾಳ).—ಮಾನ್ಯ ಸಭಾಪತಿಗಳೇ, ಲೋಕೋಪಯೋಗಿ ಶಾಖೆಯ ಮಂತ್ರಿಗಳು ಮಂಡಿಸಿದ ಬೇಡಿಕೆಗಳಿಗೆ ಅನುಮೋದನೆ ಕೊಡುತ್ತಾ ಒಂದೆರಡು ವಿಚಾರ ಹೇಳಲು ಬಯಸುತ್ತೇನೆ. ಈಗಾಗಲೇ ಅನೇಕರು ಕೃಷ್ಣಾ ಮೇಲ್ದಂಡೆ ಯೋಜನೆಯ ಬಗ್ಗೆ ಸಾಕಷ್ಟು ಮಾತನಾಡಿದ್ದಾರೆ. ಆದರೆ ಈ ಮಾತುಗಳು ಮಾತೇ ಆಗಿ ಉಳಿಯುತ್ತವೆಯೋ ಇಲ್ಲವೆ ಕೆಲಸದಲ್ಲಿ ಮಾರ್ಪಡುತ್ತವೆಯೋ ಹೇಗೆ ನೋಡಬೇಕಾಗಿದೆ ಯಾಕೆಂದರೆ ಹೋದ ವರ್ಷ ಈ ಮನೆಯಲ್ಲಿ ಒಮ್ಮತವಾಗಿ ರೆಜಲ್ಯೂಷನ್ ಪಾಸುಮಾಡಿ ''ಕೇಂದ್ರ ಸರಕಾರ ಈ ಯೋಜನೆ ತೆಗೆದುಕೊಳ್ಳಲೇಬೇಕು ಅಥವಾ ಪೂರ್ಣ ಹಣಕೊಡಲಿ outside the plan ಕೊಡಲಿ'' ಎಂದು ನಿರ್ಣಯ ಮಾಡಿದ್ದರೂ ಕೂಡ ಕೇಂದ್ರ ಸರಕಾರದಿಂದ ಇದುವರೆಗೆ ಯಾವ ಉತ್ತರವಿಲ್ಲ. ಇದರಿಂದ ಏನು ಅನಿಸುತ್ತದೆ ಅಂದರೆ ಕೇಂದ್ರ ಸರಕಾರ ಇದನ್ನು ನ್ಯಾಷನಲ್‌ಪ್ರಾಜೆಕ್ಟ್ ಎಂದು ಗಣನೆಗೆ ತೆಗೆದುಕೊಂಡಿಲ್ಲ ಮತ್ತು ಮೈಸೂರಿನ ನ್ಯಾಯವಾದ ಬೇಡಿಕೆಗೆ ತಾತ್ಸಾರಮಾಡಿದೆ ಎಂದು ಸಂಶಯ ಬಂದಿದೆ. ಈಗಾಗಲೇ ನಮ್ಮ ರಾಜ್ಯಸರಕಾರವು ಅಲ್ಪಸ್ವಲ್ಪ ಹಣವನ್ನು ಕೃಷ್ಣಾ ಮೇಲ್ದಂಡೆ ಯೋಜನೆಯ ಸಲುವಾಗಿ ಖರ್ಚು ಮಾಡುತ್ತಾ ಇರುತ್ತಾರೆ ಇದರಿಂದ ಲಾಭವಾಗದೆ ಪ್ರತಿ ವರ್ಷ ಲಕ್ಷಾಂತರ ರೂಪಾಯಿ ಹಾಳು ಮಾಡಿದ ಹಾಗೆ ಆಗುತ್ತದೆ. ಯಾಕೆಂದರೆ, ಬಕಾಸುರನ ಹೊಟ್ಟೆಗೆ ಅರ್ಧಸೇರು ಅನ್ನದಹಾಗೆ.

(ಶ್ರೀ ಎಸ್. ಎಂ. ಗುರೆಡ್ಡಿ)

ಇವೊತ್ತು ನಮ್ಮ ಲೋಕೋಪಯೋಗಿ ಇಲಾಖೆಯ ಮಂತ್ರಿಗಳು ಕೊಟ್ಟಂಥ ಬಜೆಟ್ಟನ್ನು ನೋಡಿದರೆ ಕೃಷ್ಣಾ ಮೇಲ್ದಂಡೆ ಯೋಜನೆಗೆ ಕೇವಲ 50 ಲಕ್ಷ ರೂಪಾಯಿಗಳನ್ನು ತೆಗೆದಿರಿಸಿದ್ದಾರೆ. ಇದು ಏತಕ್ಕಾಗಿ, ಅಲ್ಲಿರುವ ಸಿಬ್ಬಂದಿ ಖರ್ಚಿಗೋ ಹೇಗೆ ? ಪ್ರಾರಂಭದಲ್ಲಿ ಒಂದು ವರ್ಷಕ್ಕೆ ಕನಿಷ್ಟ ಪಕ್ಷ ಎರಡು ಕೋಟಿ ರೂಪಾಯಿಗಳಾದರೂ ಬಹಳ ಅವಶ್ಯ ? ಇವಕ್ಕೆ ಒದಗಿಸುವ ಹಣವನ್ನು ನೋಡಿದರೆ ಆ ಯೋಜನೆ ಆಗುವುದೇ ಇಲ್ಲ ಎಂದು ನನಗನ್ನಿಸುತ್ತದೆ. 1964ರಲ್ಲಿ ಅಸ್ತಿಭಾರ ಹಾಕುವ ಕಾಲಕ್ಕೆ ಒಂದುನೂರ ಇಪ್ಪತ್ತುಕೋಟಿ (೧೨೦ ಕೋಟಿ) ರೂಪಾಯಿ ಈ ಯೋಜನೆಗೆ ಬೇಕಾಗುತ್ತದೆ ಎಂದು ಹೇಳಿದರು. ಈ ಯೋಜನೆಯ ವೆಚ್ಚ ಬರಬರುತ್ತ 200 ಕೋಟಿ ರೂಪಾಯಿಗಳಿಗೆ ಹೋಗಬಹುದು. ವರ್ಷಕ್ಕೆ ಒಂದು ಕೋಟಿ ರೂಪಾಯಿನಷ್ಟು ಹಣವನ್ನು ಬಜೆಟ್ಟಿನಲ್ಲಿ ಕೊಟ್ಟರೆ ಈ ಯೋಜನೆಯನ್ನು ಮುಗಿಸಲಿಕ್ಕೆ 200 ವರ್ಷಗಳಾದರೂ ಹಿಡಿಯುತ್ತದೆ. ಹೀಗಾದರೆ ಅದನ್ನು ಕೈ ಬಿಡುವುದು ಲೇಸು ಅನ್ನಿಸುತ್ತದೆ. ಈಗಾಗಲೇ ಘಟಪ್ರಭ ಯೋಜನೆ, ಮಲಪ್ರಭ ಯೋಜನೆ, ಹಾರಂಗಿ, ಹೇಮಾವತಿ ಹೀಗೆ ಅನೇಕ ಯೋಜನೆಗಳನ್ನು ತೆಗೆದುಕೊಂಡರೂ ನಮಗೆ ಯಾವ ಯೋಜನೆಗಳನ್ನೂ ಮುಗಿಸುವುದಕ್ಕೆ ಸಾಧ್ಯವಾಗಿಲ್ಲ. ಕೇವಲ ಅಲ್ಲಿಷ್ಟು, ಇಲ್ಲಿಷ್ಟು ತೆಗೆದುಕೊಳ್ಳುವುದರಿಂದ ಯಾವ ಪ್ರತಿಫಲವೂ ಆಗುವುದಿಲ್ಲ. ಇವೊತ್ತು ನಾವು ಕೃಷ್ಣಾ ಯೋಜನೆಯ ಮೇಲೆ ಮಾತನಾಡುವುದೇ ಬೇಡ ಎಂದು ಅನ್ನಿಸಲಿಕ್ಕೆ ಹತ್ತಿದೆ. ಮಾಡುವ ಹಾಗಿದ್ದರೆ ಮಾಡುತ್ತೇವೆಂದು ದಿಟ್ಟತನದಿಂದ ಯಾವುದಾದರೂ ಯೋಜನೆಯನ್ನು ನಿಲ್ಲಿಸಿ ಈ ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ತೆಗೆದುಕೊಳ್ಳಿ, ಇಲ್ಲವೇ ಕೈ ಬಿಡಿ. ಹಣಕಾಸು ಯಾವಾಗ ಒದಗುತ್ತದೆಯೋ ಅವಾಗ ಶುರು ಮಾಡಿ. ಕೃಷ್ಣಾ ಮೇಲ್ದಂಡೆಯ ಯೋಜನೆಯನ್ನು ಮಾಡಬೇಕೆಂದಿದ್ದರೆ ದಾಮೋದರ ವ್ಯಾಲಿ ಕಾರ್ಪೋರೇಷನ್ ಮಾಡಿರುವಂತೆ ಕೃಷ್ಣಾ ವ್ಯಾಲಿ ಕಾರ್ಪೋರೇಷನ್ ಏಕೆ ಮಾಡಬಾರದು ಎಂದು ಕೇಳುತ್ತೇನೆ. ಆ ರೀತಿ ಮಾಡುವುದರಿಂದ ನಾವು ಹಣವನ್ನು ಹೇರಳವಾಗಿ ಸಾಲದ ರೂಪದಲ್ಲಾಗಲೀ, ರೈತರಿಂದಾಗಲೀ ತೆಗೆದುಕೊಂಡು ಯೋಜನೆಯನ್ನು ಕಾರ್ಯರೂಪಕ್ಕೆ ತರುವುದಕ್ಕೆ ಸಾಧ್ಯವಿದೆ. ಆದುದರಿಂದ ಕಾನ್‌ಕ್ರೀಟ್ ಆಗಿ ಕೆಲಸ ಮಾಡತಕ್ಕ ಪ್ರವೃತ್ತಿಯನ್ನು ನಾವು ತಾಳದೆ ಹೋದರೆ ದೇಶಕ್ಕೆ ಬಹಳ ಲುಕ್ಸಾನಾಗುತ್ತದೆ.

ನಮ್ಮಲ್ಲಿಯ ನದಿಗಳ ನೀರಿನ ಹಂಚಿಕೆಯ ಸಲುವಾಗಿ ಕೆಲವೊಂದು ಮಾತನ್ನು ಹೇಳಬೇಕಾಗಿದೆ. ನಮ್ಮ ಸರ್ಕಾರದವರು ಕೃಷ್ಣಾ—ಗೋದಾವರಿ ನೀರಿನ ಹಂಚಿಕೆಯ ಬಗ್ಗೆ ಸೂಕ್ತವಾದ ಪರಿಹಾರವನ್ನು ಕಂಡುಕೊಳ್ಳದೆ ಇರುವುದು ಶೋಚನೀಯ. ಆಂಧ್ರದವರು ನಾಗಾರ್ಜುನ ಸಾಗರದ ಕ್ರೆಸ್ಟ್ ಗೇಟುಗಳನ್ನು ಕೂಡ ಮುಗಿಸುವಂಥ ಸಂದರ್ಭವಿದೆ. ಕೃಷ್ಣಾ—ಗೋದಾವರಿ ನೀರಿನ ಸಮಸ್ಯೆಯನ್ನು ಬಗೆಹರಿಸದೆ ಹೋದರೆ ನಮ್ಮ ರಾಜ್ಯಕ್ಕೆ ಗಂಡಾಂತರವಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಆದುದರಿಂದ ಹೆಚ್ಚಾಗಿ ಕೇಂದ್ರ ಸರ್ಕಾರದ ಮೇಲೆ ಒತ್ತಾಯ ಮಾಡಿ ಈ ಎರಡೂ ನದಿಗಳ ನೀರಿನ ಹಂಚಿಕೆಯ ಸಮಸ್ಯೆಗಳನ್ನು ಬಗೆಹರಿಸಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ರಸ್ತೆಗಳ ವಿಚಾರವಾಗಿ ಹೇಳಬೇಕಾದರೆ ನಮ್ಮ ರಾಜ್ಯದಲ್ಲಿ ರಸ್ತೆಗಳ ಪ್ರಗತಿ ಸಾಕಷ್ಟು ಆಗಿದೆ; ಆಗಬೇಕಾದ್ದು ಬಹಳವಿದೆ. ನಾವು ಉಳಿದ ರಾಜ್ಯಗಳಿಗೆ ಹೋಲಿಕೆ ಮಾಡಿದರೆ ರಾಷ್ಟ್ರೀಯ ಹೆದ್ದಾರಿಗಳ ಮೈಲೇಜ್ ನಮ್ಮಲ್ಲಿ ಬಹಳ ಕಡಮೆ ಇದೆ. ಒಂದೇ ಒಂದು ರಾಷ್ಟ್ರೀಯ ಹೆದ್ದಾರಿ ನಂಬರ್ 4 ಬಹಳ ಉದ್ದವಾದ ರಸ್ತೆ. ಇದನ್ನು ಬಿಟ್ಟರೆ ನ್ಯಾಷನಲ್ ಹೈವೇ ನಂಬರ್—13 ಈ ರಸ್ತೆ ಯಾವಾಗ ಬರುತ್ತದೆ ಎಂದು ತಿಳಿಯುತ್ತಿಲ್ಲದು. ಆದುದರಿಂದ ಕೇಂದ್ರ ಸರ್ಕಾರದವರಿಗೆ ನಮ್ಮಲ್ಲಿ ಇನ್ನೂ ಎರಡು ಮೂರು ರಾಷ್ಟ್ರೀಯ ಹೆದ್ದಾರಿಗಳು ನಮ್ಮ ರಾಜ್ಯಕ್ಕೆ ಬರುವ ಹಾಗೆ ಪ್ರಯತ್ನ ಮಾಡುವುದು ಒಳ್ಳೆಯದು ಎಂದು ನಾನು ತಿಳಿದುಕೊಂಡಿದ್ದೇನೆ.

ಬಿಜಾಪುರ ಜಿಲ್ಲೆಯ ರಸ್ತೆಗಳ ಮಟ್ಟಿಗೆ ಹೇಳಬೇಕಾದರೆ ಒಂದು ತಾಲ್ಲೂಕಿನಿಂದ ಜಿಲ್ಲಾ ಸ್ಥಳಕ್ಕೆ ಹೋಗಲು ಸರ್ವರುತು ರಸ್ತೆ ಒಂದೂ ಇಲ್ಲ. ಮಾನ್ಯ ಲೋಕೋಪಯೋಗಿ ಮಂತ್ರಿಗಳು ಚಾರ್ಜ್ ತೆಗೆದುಕೊಂಡಮೇಲೆ ಕೆಲವೊಂದು ರಸ್ತೆಗಳನ್ನು ಮಾಡಿದ್ದಾರೆ. ದುರ್ದೈವವಶಾತ್ ಬಿಜಾಪುರದಲ್ಲಿ ಐದು ನದಿಗಳು ಹರಿಯುತ್ತಿದ್ದು ತಾಲ್ಲೂಕು ಮತ್ತು ಜಿಲ್ಲೆಯನ್ನು ಎಲ್ಲ ಬೈಫರ್‌ಕೇಟ್ ಮಾಡಿವೆ. ಹೀಗಾಗಿ ಹೇರಳ ಹಣವನ್ನು ಬ್ರಿಜ್‌ಗಳ ಸಲುವಾಗಿ ಅಲ್ಲಿ ಹಾಕಿದರೂ ಕೂಡ ಇನ್ನೂ ಒಂದು ತಾಲ್ಲೂಕಿನಿಂದ ಜಿಲ್ಲಾ ಸ್ಥಳಕ್ಕೆ ಮುಟ್ಟಲು ಒಂದು ಸರ್ವರುತು ರಸ್ತೆ ಇಲ್ಲ. ತಾಲ್ಲೂಕಿನಿಂದ ಜಿಲ್ಲಾ ಸ್ಥಳಕ್ಕೆ ಹೋಗಲಿಕ್ಕೆ ಒಂದಾದರೂ ಸರ್ವರುತು ರಸ್ತೆಗಳಲ್ಲಿ ಮಾಡಿಕೊಡಿ ಎಂದು ನಾನು ಕೇಳುತ್ತಿದ್ದೇನೆ.

ಗ್ರಾಮೀಣ ರಸ್ತೆಗಳ ಪ್ರಗತಿಯೂ ಮಹತ್ವದ್ದು. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರದಲ್ಲಿ ಸಾರಿಗೆ ವ್ಯವಸ್ಥೆ ಬಹಳ ಮಹತ್ವವಾದ ಪಾತ್ರವನ್ನು ವಹಿಸುತ್ತಿದೆ. ಅದನ್ನು ಉದಾಸೀನ ಮಾಡುವುದಕ್ಕೆ ಬರುವುದಿಲ್ಲ. ಗ್ರಾಮಾಂತರ ಪ್ರದೇಶದ ಜನತೆಗೆ ಶಾಶ್ವತವಾದ ಸಾರಿಗೆಯ ಸಂಪರ್ಕದ ವ್ಯವಸ್ಥೆ ಮಾಡುವುದು ನಮ್ಮ ಗುರಿಯಾಗಿರಲಿ ಅಲ್ಲಿರುವ ರಸ್ತೆಗಳನ್ನು ಸುವ್ಯವಸ್ಥಿತವಾಗಿಟ್ಟು ಅವರು ಮಾರುಕಟ್ಟೆಗೆ ಬರುವ ಹಾಗೆ ಏರ್ಪಾಡು ಮಾಡುವುದು ಬಹಳ ಅವಶ್ಯ. ಕಳೆದ ಯೋಜನೆಯಲ್ಲಿ ಪ್ರತಿಯೊಂದು ತಾಲ್ಲೂಕಿನಲ್ಲಿ 50 ಮೈಲಿ ರೂರಲ್ ಕಮ್ಯೂನಿಕೇಷನ್ ರಸ್ತೆಯನ್ನು ತೆಗೆದುಕೊಳ್ಳುವ ಗುರಿ ಇತ್ತು. ಅದನ್ನು ಕೈಬಿಟ್ಟಿದ್ದಾರೆ. ನಾಲ್ಕನೆಯ ಯೋಜನೆಯಲ್ಲಿ ಗ್ರಾಮೀಣ ರಸ್ತೆಗಳ ಸಲುವಾಗಿ ಸಾಕಷ್ಟು ಹಣ ಒದಗಿಸುವುದು ಅವಶ್ಯವಿದೆ, ಹಾಗೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ವಿದ್ಯುಚ್ಛಕ್ತಿ ಸಂಬಂಧದಲ್ಲಿ ನಮ್ಮಲ್ಲಿ ಸಾಕಷ್ಟು ಜನ ಮಾತನಾಡಿದ್ದಾರೆ. ನಮ್ಮ ರಾಜ್ಯದಲ್ಲಿ ಹೇರಳವಾಗಿ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡಿದರೂ ಅದನ್ನು ಉಪಯೋಗ ಮಾಡಿಕೊಳ್ಳುವ ಶಕ್ತಿ ಇಲ್ಲದೆ ಹೋಗಿದೆ. ಇದಕ್ಕೆ ಕಾರಣ ಹಣವಿಲ್ಲ, ಕಂಬಗಳಿಲ್ಲ, ತಂತಿ ಇಲ್ಲ, ಕಂಡಕ್ಟರುಗಳಿಲ್ಲ, ಟ್ರಾನ್ಸ್‌ಫಾರ್ಮರುಗಳಿಲ್ಲ ಎಂದು ಹೇಳುತ್ತಾರೆ. ಮದ್ರಾಸ್ ರಾಜ್ಯದಲ್ಲಿ ವಿದ್ಯುಚ್ಛಕ್ತಿಯನ್ನು ಹುಟ್ಟಿಸುವ ಪೂರ್ವದಲ್ಲಿಯೇ ಇವುಗಳ ವ್ಯವಸ್ಥೆಯನ್ನು ಮಾಡಿದ್ದರು. ನಾವು ಯೋಜನೆಗಳನ್ನು ಮಾಡುವಾಗ ನಮ್ಮಲ್ಲಿ ವಿದ್ಯುಚ್ಛಕ್ತಿ ಎಷ್ಟು ಉತ್ಪತ್ತಿಯಾಗುತ್ತದೆ ಅದನ್ನು ಸರಬರಾಜು ಮಾಡಲಿಕ್ಕೆ ಬೇಕಾಗುವ ಸಾಮಗ್ರಿಗಳನ್ನು, ಬೇಕಾದ ಸಲಕರಣೆಗಳನ್ನು ಒದಗಿಸುವ ವ್ಯವಸ್ಥೆಯನ್ನು ಆಗಿನ ಕಾಲಕ್ಕೆ ಮಾಡದೆ ಇದ್ದುದರಿಂದ ಎರಡನೆ ರಾಜ್ಯಕ್ಕೆ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡುವ ಸಂದರ್ಭ ಬಂತು. ಇದಾಗಬಾರದಾಗಿತ್ತು ಎಂದು ಹೇಳುತ್ತೇನೆ.

ಶರಾವತಿ ಪ್ರಾಜೆಕ್ಟ್ ಒಂದರಿಂದ ಮೈಸೂರಿನ ಬೇಡಿಕೆ ಸಂಪೂರ್ಣವಾಗಿ ಪರಿಹಾರವಾಗುತ್ತದೆ ಎಂದು ನಾನು ತಿಳಿದುಕೊಂಡಿಲ್ಲ. ವಿದ್ಯುಚ್ಛಕ್ತಿ ನಮಗೆ ಬಹಳ ಬೇಕಾಗಿದೆ. ಕಾಳಿನದಿ ಯೋಜನೆಗೆ ಈಗಾಗಲೇ ಬಜೆಟ್‌ನಲ್ಲಿ ಸ್ವಲ್ಪ ಹಣವನ್ನು ಒದಗಿಸಿದ್ದಾರೆ. ಯಾವುದೇ ದೊಡ್ಡ ಪ್ರಾಜೆಕ್ಟ್‌ಗಳ ಕೆಲಸಗಳನ್ನು ಮುಂದಕ್ಕೆ ಹಾಕುವುದರಿಂದ ಖರ್ಚು ಏರುತ್ತಾ ಹೋಗುತ್ತದೆ. ಕಾರಣ ಇದಕ್ಕೆ ಹೆಚ್ಚು ಹಣವನ್ನು ಒದಗಿಸಿ ತೀವ್ರ ಕಾರ್ಯರೂಪಕ್ಕೆ ತರಬೇಕೆಂದು ಕೇಳಿಕೊಳ್ಳುತ್ತೇನೆ.

ಗ್ರಾಮಾಂತರ ಪ್ರದೇಶಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವಲ್ಲಿ ಎಷ್ಟು ಪ್ರಗತಿ ಸಾಧಿಸಿದ್ದೇವೆ ಎಂದು ನೋಡಿದರೆ ಬಹಳ ಕಡಮೆ ಎಂದು ಹೇಳಲೇಬೇಕಾಗಿದೆ. ಇತರ ರಾಜ್ಯಗಳಿಗೆ ಹೋಲಿಸಿ ನೋಡಿದರೆ ಪ್ರಗತಿ ತೀರ ಕಡಮೆಯಾಗಿದೆ. ಗ್ರಾಮಾಂತರ ಪ್ರದೇಶಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಲು ಪ್ರತ್ಯೇಕವಾದ ಒಂದು ಯೋಜನೆ ಹಾಕಿಕೊಂಡು ಗ್ರಾಮಾಂತರ ಪ್ರದೇಶಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡುವುದಕ್ಕೆ ಹೆಚ್ಚು ಗಮನಕೊಡಬೇಕೆಂದು ಕೇಳಿಕೊಂಡು ನನ್ನ ಒಂದೆರಡು ಮಾತನ್ನು ಮುಗಿಸುತ್ತೇನೆ.

† ಶ್ರೀ ಪಿ. ವೆಂಕಟಗಿರಿಯಪ್ಪ (ಕೋಲಾರ).—ಮಾನ್ಯ ಸಭಾಪತಿಗಳೇ, ಈ ದಿನ ನಮ್ಮ ಮುಂದಿರುವ ಪಬ್ಲಿಕ್ ವರ್ಕ್ಸ್ ಮತ್ತು ಎಲೆಕ್ಟ್ರಿಸಿಟಿಗೆ ಸಂಬಂಧಪಟ್ಟ ಬೇಡಿಕೆಗಳನ್ನು ವಿರೋಧಿಸುತ್ತಾ ಕೆಲವು ವಿಷಯಗಳನ್ನು ಈ ಸಭೆಯ ಗಮನಕ್ಕೆ ತರಲು ಬಯಸುತ್ತೇನೆ.

ಮೈಸೂರು ರಾಜ್ಯಕ್ಕೆ ಕನ್ನಂಬಾಡಿಯಂಥ ಜಲಾಶಯವನ್ನು ನಿರ್ಮಿಸಿದ ಕೀರ್ತಿ ಇದ್ದರೂ ಕೂಡ ಸ್ವಾತಂತ್ರ್ಯ ಬಂದ 20 ವರ್ಷಗಳಲ್ಲಿ ಬಹಳ ಹೆಚ್ಚಿನ ಪ್ರಗತಿಯನ್ನು ಸಾಧಿಸಿದ್ದೇವೆ ಎಂದು ನಮ್ಮ ಸರ್ಕಾರ ಹೇಳುತ್ತಿದ್ದರೂ ಕೂಡ ನಾವು ನೆರೆ ರಾಜ್ಯಗಳ ಲೆಕ್ಕದಲ್ಲಾಗಲೀ ಅಥವಾ ಇಡೀ ಹಿಂದೂಸ್ಥಾನದ ಲೆಕ್ಕದಲ್ಲಾಗಲೀ ತೆಗೆದುಕೊಂಡರೆ ನೀರಾವರಿ ವಿಷಯದಲ್ಲಿ ನಾವು ಬಹಳ ಹಿಂದುಳಿದಿದ್ದೇವೆ ಎನ್ನುವುದನ್ನು ಒಪ್ಪಿಕೊಳ್ಳಬೇಕಾಗಿದೆ. ಕೇವಲ 10 ಪರ್ಸೆಂಟ್‌ನಷ್ಟು ನಮ್ಮ ಭೂಮಿಗೆ ನೀರಾವರಿ ಸೌಕರ್ಯ ಇವೊತ್ತು ಇದೆ. ಇದನ್ನು ಏನಾದರೂ ಮಾಡಿ ಹೆಚ್ಚು ಮಾಡಲೇಬೇಕಾದ್ದು ಅನಿವಾರ್ಯವಾಗಿದೆ. ಮಾತೆತ್ತಿದರೆ ಹಣವಿಲ್ಲ, ಹಣ ಒದಗಿದಾಗ ಮಾಡುತ್ತೇವೆ ಎಂದು ಯಾವತ್ತಿಗೂ ಒಂದೇ ಒಂದು ಪದವನ್ನು ಮಾನ್ಯ ಲೋಕೋಪಯೋಗಿ ಮಂತ್ರಿಗಳು ಹೇಳುತ್ತಿರುತ್ತಾರೆ. ಆದರೆ ಹಣ ಹೇಗೆ ನಮ್ಮಲ್ಲಿ ಉಳಿತಾಯವಾಗುತ್ತದೆ ಎನ್ನುವುದಕ್ಕೆ ಬೇಕಾದ ಸಲಹೆಗಳನ್ನು ಕೊಟ್ಟಿದ್ದಾರೆ. ಅನಾವಶ್ಯಕವಾದ ಅನೇಕ ಇಲಾಖೆಗಳನ್ನು ಬೆಳೆಸಿ ಹೊಸ ಹೊಸ ಹುದ್ದೆಗಳನ್ನು ನಿರ್ಮಾಣ ಮಾಡಿ ಬೇಕಾದಷ್ಟು ಹಣವನ್ನು ಖರ್ಚು ಮಾಡುವುದಕ್ಕೆ ಪ್ರಯತ್ನ ಮಾಡಿದರೆ ಎಷ್ಟು ಹಣವಾದರೂ ಸಾಕಾಗುವುದಿಲ್ಲ. ಆದುದರಿಂದ ದುಂದು ವೆಚ್ಚವನ್ನು ಕಡಮೆ ಮಾಡಿ ಮಿತವ್ಯಯವನ್ನು ಸಾಧಿಸಬೇಕು ಎಂದು ನಾನು ಹೇಳುತ್ತೇನೆ. ನೀರಾವರಿ ಕಾರ್ಯಗಳಿಗೆ ಸಾಧ್ಯವಾದರೆ ರಾಜ್ಯದಲ್ಲಿ ಕೂಡ ಪ್ರತ್ಯೇಕವಾಗಿ ಡಿಬೆಂಚರ್

(ಶ್ರೀ ಪಿ. ವೆಂಕಟಗಿರಿಯಪ್ಪ)

ಮೂಲಕ ಸಾಲವನ್ನಾದರೂ ಎತ್ತಿ ನಮ್ಮಲ್ಲಿ ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳೇನಿವೆ ಆ ಪ್ರಾಜೆಕ್ಟ್‌ಗಳನ್ನೆಲ್ಲ ತೆಗೆದುಕೊಂಡು 5-10 ವರ್ಷಗಳಲ್ಲಿ ಮುಗಿಸುವುದಕ್ಕೆ ಒಂದು ಕಾರ್ಯಕ್ರಮವನ್ನು ಸರ್ಕಾರದವರು ಹಾಕಿಕೊಳ್ಳಬೇಕೆಂದು ತಿಳಿಸುತ್ತೇನೆ.

ಕೋಲಾರ ಜಿಲ್ಲೆಯ ವಿಚಾರ ಹೇಳುವುದಾದರೆ, ಅಲ್ಲಿ ಯಾವುದೇ ಭಾರಿ ಜಲಾಶಯವನ್ನು ಕಟ್ಟುವುದಕ್ಕೆ ಅವಕಾಶವಿಲ್ಲ, ಅಲ್ಲಿ ಬರೀ ಮೈನರ್ ಇರಿಗೇಷನ್‌ಗೆ, ಸಣ್ಣ ಕೆರೆಗಳಿಗೆ ಅವಕಾಶವಿದೆ. ಆ ಆಧಾರದಮೇಲೆ ಅಲ್ಲಿಗೆ ಬಾವಿಗಳಿಗಾಗಿ ಹೆಚ್ಚಿನ ಪ್ರಮಾಣದಲ್ಲಿ ಹಣ ಕೊಡುತ್ತಿದ್ದಾರೆ, ಸಂತೋಷ. ಆದರೆ ಬಾವಿಗಳಿಗೆ ನೀರು ಬರಬೇಕಾದರೆ ಇರುವ ಕೆರೆಗಳನ್ನು ಸರಿಯಾಗಿ ದುರಸ್ತುಮಾಡಬೇಕು, ಒಡೆದಿರುವ ಕೆರೆಗಳನ್ನು ರಿಪೇರಿಮಾಡಬೇಕು. ಹಾಗೆ ಮಾಡಿದರೆ ಬಾವಿಗಳಿಗೆ ನೀರು ಬರುವುದು. ಆದುದರಿಂದ ನಮ್ಮ ಜಿಲ್ಲೆಯಮಟ್ಟಿಗೆ ಹೇಳುವುದಾದರೆ ಸಣ್ಣ ನೀರಾವರಿ ಕೆಲಸ ದೊಡ್ಡ ಪ್ರಮಾಣದಲ್ಲಿ ಆಗಬೇಕಾಗಿದೆ. ಆದರೆ ಸರಕಾರದವರು 19 ಕೋಟಿ ರೂಪಾಯಿಗಳ ಬೇಡಿಕೆಯನ್ನು ಸಭೆಯ ಮುಂದೆ ಇಟ್ಟಿರುವುದರಲ್ಲಿ ಕೋಲಾರ ಜಿಲ್ಲೆಯ ಬಗ್ಗೆ ಮಲತಾಯಿ ಧೋರಣೆಯನ್ನು ಅನುಸರಿಸಿದ್ದಾರೆ. ಲೋಕೋಪಯೋಗಿ ಇಲಾಖೆಯ ಅಂದಾಜಿನ ತಪಶೀಲನ್ನು 239ನೆಯ ಪುಟದಲ್ಲಿ ನೋಡಿದರೆ ಬರೀ ಒಂದು ಸಾವಿರ ರೂಪಾಯಿಗಳನ್ನು ಮಾತ್ರ ಹೊಸ ಕೆರೆಗಳಿಗಾಗಿ ಕೊಟ್ಟಿದ್ದಾರೆ, ಕೆರೆಗಳ ಜೀರ್ಣೋದ್ಧಾರಕ್ಕೆ 5 ಸಾವಿರ ರೂಪಾಯಿಗಳು ಮಾತ್ರ ಮೀಸಲಾಗಿವೆ. ಇದು ಅರ್ಥವಾಗುವುದಿಲ್ಲ. ಬಂಗಾರುಪೇಟೆ ತಾಲ್ಲೂಕಿಗೆ 10 ಲಕ್ಷ ರೂಪಾಯಿಗಳ ಒಂದು ಅಂದಾಜನ್ನು ತಯಾರಿಸಿದ್ದರು. ಮದ್ರಾಸು ಭಾಗದ ಕಾಡುಗಳಲ್ಲಿ ಹರಿಯುವ ನೀರನ್ನು ಉಪಯೋಗ ಮಾಡಿಕೊಳ್ಳಲು ಒಂದು ದೊಡ್ಡ ಕೆರೆ ಕಟ್ಟಬೇಕೆಂದು ಶಿಫಾರಸುಮಾಡಿದ್ದರು. ಅದಕ್ಕೆ ಅಂದಾಜಾಗಿತ್ತು, ಮುತ್ತನಹಳ್ಳಿ ಕೆರೆಯ ಆ ಕೆಲಸವನ್ನು ಮಂಜೂರು ಮಾಡಲಿಲ್ಲ. ಚಿಕ್ಕಬಳ್ಳಾಪುರ ತಾಲ್ಲೂಕು ಜಕ್ಕಲಮಡಗು ಪ್ರಾಜೆಕ್ಟಿನ ಕೆಲಸ 15—16 ವರ್ಷಗಳಿಂದ ಆಗುತ್ತಿದೆ, ಕಂಟ್ರಾಕ್ಟರು ತಕರಾರುಮಾಡಿದ, ಆದುದರಿಂದ ನಿಧಾನವಾಗಿದೆ ಎಂದು ಹೇಳುತ್ತಾರೆ. ಏಕೆ ಮಾಡಿದ? ಈ ರೀತಿ ಕೆಲಸ ನಿಧಾನಮಾಡಿದರೆ ಜನರಿಗೆ ಅನುಕೂಲವಾಗುವುದು ಹೇಗೆ? ಬಾಗೇಪಲ್ಲಿ, ಚಿಂತಾಮಣಿ ಮುಂತಾದ ಕ್ಷಾಮ ಪ್ರದೇಶಗಳೇನಿವೆ ಅಲ್ಲಿ ಕೆಲವು ಹೊಸ ಪ್ರಾಜೆಕ್ಟುಗಳನ್ನು ಮಾಡುವುದಕ್ಕೆ ಅವಕಾಶವಿದೆ. ಆದರೆ ತೆಲುಗು ಪ್ರದೇಶ ಅದು ಎಂತಲೋ ಅಥವಾ ಬೇರೆ ಕಾರಣದಿಂದಲೋ ಅಲ್ಲಿ ಅನೇಕ ಯೋಜನೆಗಳ ಕೆಲಸವಾಗಬೇಕೆಂದು ಅರ್ಜಿಕೊಟ್ಟರೂ ಇಂದಿನವರೆಗೂ ಅವಕ್ಕೆ ಗಮನಕೊಡದೆ ಉದಾಸೀನಮಾಡಿದ್ದಾರೆ. ಆದರೆ ಅಲ್ಲಿನವರು ಮೈಸೂರು ರಾಜ್ಯದವರೇ ಆಗಿರುವುದರಿಂದ, ಇಲ್ಲೇ ಇರುವುದಕ್ಕೆ ಒಪ್ಪಿರುವುದರಿಂದ ಅಂಥ ಪ್ರದೇಶಗಳನ್ನು ಕಡೆಗಾಣಿಸಬಾರದು. ಅಲ್ಲಿ ಅವಶ್ಯಕತೆಯಿರುವುದನ್ನು ನೋಡಿ ಅದರ ಬಗ್ಗೆ ಪರಿಶೀಲನೆ ಮಾಡಿ ಮಾಡುವುದಕ್ಕೆ ಸಾಧ್ಯವಿರುವ ಪ್ರಾಜೆಕ್ಟುಗಳನ್ನೆಲ್ಲಾ ಮಾಡಬೇಕೆಂದು ಒತ್ತಾಯಮಾಡುತ್ತೇನೆ.

ಇಂದು ಈ ಇಲಾಖೆ ಬಗ್ಗೆ ಒಂದು ವಿಷಯವನ್ನು ಕೆಲವರು ಹೇಳುತ್ತಾರೆ, ಇದರಲ್ಲಿ 5 ಜನ ಚೀಫ್ ಎಂಜನಿಯರುಗಳಿದ್ದಾರೆ, ಅವರ ಒಂದು ಬೋರ್ಡ್ ಇದೆ. ನೌಕರರನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ವರ್ಗಮಾಡುವುದು ಕಷ್ಟವಾಗಿದೆ, ಒಬ್ಬ ಚೀಫ್ ಎಂಜನಿಯರ ಕೈಕೆಳಗಿರುವವರನ್ನು ಬೇರೊಬ್ಬ ಚೀಫ್ ಎಂಜನಿಯರ ಕೈಕೆಳಗೆ ಹಾಕಬೇಕಾದರೆ ಅವರು ಒಪ್ಪಬೇಕು, ಒಬ್ಬರು ಒಪ್ಪಿ ಬರೆದರೆ ಇನ್ನೊಬ್ಬರು ಒಪ್ಪುವುದಿಲ್ಲ. ಹೀಗಾಗಿ ನೌಕರರು ತಮ್ಮ ಊರುಗಳಿಗೆ ಹತ್ತಿರವಾಗಿ ಇರುವುದಕ್ಕೆ ಸಾಧ್ಯವಿಲ್ಲವಾಗಿದೆ. ಹಳೆಯ ಮೈಸೂರು ನೌಕರರು ಒಂದೆರಡು ವರ್ಷಗಳ ಕಾಲ ಧಾರವಾಡ ಮುಂತಾದ ಕಡೆ ಕೆಲಸಮಾಡಿದಮೇಲೆ ಅವರು ತಮ್ಮ ಊರುಗಳ ಕಡೆಗೆ ಹೋಗುವುದಕ್ಕೆ ಅವಕಾಶಕೊಡಬೇಕು. ಎಷ್ಟೋ ದೊಡ್ಡ ದೊಡ್ಡ ಆಫೀಸರುಗಳೇ ಬೆಂಗಳೂರಿನಲ್ಲಿ 20—30 ವರ್ಷಗಳವರೆಗೆ, ರಿಟೈರ್ ಆಗುವವರೆಗೆ ಇರುತ್ತಾರೆ. ಹಾಗಿರುವಾಗ ಸಣ್ಣ ನೌಕರರೇನು ಅಪರಾಧ ಮಾಡಿದ್ದಾರೆ? ಅವರಿಗೆ ತೊಂದರೆ ಮಾಡಬಾರದು. ಸಾಧ್ಯವಾದಮಟ್ಟಿಗೆ ಅವರನ್ನು ಅವರವರ ಪ್ರದೇಶಗಳಲ್ಲೇ ಇಟ್ಟಿರಬೇಕು. ಮೊದಲನೆಯ ದರ್ಜೆಯ ಗುಮಾಸ್ತರನ್ನು ವರ್ಗಮಾಡುವುದು ಒಂದು ದೊಡ್ಡ ಪ್ರಮಾದದ ಕೆಲಸವೇ? ಕೆಲವರು ಬೇಕಾದವರಿದ್ದರೆ ಯಾರಾದರೂ ಶಿಫಾರಸು ಮಾಡಿದರೆ ಅವರ ಕೆಲಸ ಬೇಗ ಆಗುತ್ತದೆ. ಎಸ್ಟಾಬ್ಲಿಷ್‌ಮೆಂಟ್ ಚೀಫ್ ಎಂಜನಿಯರನ್ನು ನಾವು ನೋಡಲು ಹೋದಾಗ ನಮಗೆ ಅವಕಾಶ ಕೊಡದೆ ಬೇರೆ ಯಾರೋ ಒಬ್ಬಿಬ್ಬರೊಂದಿಗೆ ಮಾತನಾಡಿ ಕಳಿಸಿ ನಮಗೆ ನಾಳೆ ಬರುವಂತೆ ಹೇಳಿದರು. ಅವರಿಗೂ ಮಂತ್ರಿಗಳಿಗೂ ಸಂಬಂಧವಿದೆಯೆಂದು ಹೇಳುತ್ತಾರೆ, ಇರಬಾರದೆಂದು ಹೇಳುತ್ತಿಲ್ಲ. ಇರಬಹುದು, ಅವರು ಯಾವ ಜಾತಿಯವರೇ ಆಗಲಿ ಅವರು ನಡೆದುಕೊಳ್ಳುವ ರೀತಿ ಸರಿಯಾಗಿಲ್ಲ, ನಮ್ಮಂಥ ಸದಸ್ಯರಿಗೇ ಅನಾದರಣೆ ಮಾಡಿದಮೇಲೆ

ಉಳಿದವರ ಗತಿಯೇನು ? ಸದಸ್ಯರು ಹೋದರೆ ಅವರು ಸರಿಯಾಗಿ ಗಮನಕೊಡಬೇಕು. ಅವರು ಸರಿಯಾಗಿ ನಡೆದುಕೊಳ್ಳದಿದ್ದರೆ ಅವರನ್ನು ತೆಗೆದು ಅವರ ಜಾಗಕ್ಕೆ ಬೇರೆಯವರನ್ನು ಹಾಕಿ.

ಈಗ ವಿದ್ಯುಚ್ಛಕ್ತಿ ಬೋರ್ಡಿದೆ. ಅದು ಚೆನ್ನಾಗಿ ಕೆಲಸಮಾಡಬಹುದೆಂಬ ನಿರೀಕ್ಷೆಯಿತ್ತು ಆದರೆ ಹಾಗೆ ಮಾಡುತ್ತಿಲ್ಲ. ಒಂದು ಉದಾಹರಣೆ ಕೊಡುತ್ತೇನೆ. ಕೋಲಾರದಲ್ಲಿ 50 ಸ್ಟೈಕರ್‌ಗೆ ಕನ್‌ವರ್ಷನ್ ಆಗಿ 3-4 ವರ್ಷವಾಯ್ತು, ದೀಪಗಳು ದಿನಕ್ಕೆ 4 5 ಸಲ ಆರಿಹೋಗುತ್ತವೆ, ಎಲ್ಲರಿಗೂ ಈ ವಿಚಾರ ಹೇಳಿದ್ದಾಯ್ತು. ಏನೂ ಪ್ರಯೋಜನವಾಗಲಿಲ್ಲ, ಕೆಲವು ವೇಳೆ ಎಳೆಂಟು ಸಲ ದೀಪ ಆರಿಹೋಗುವುದೂ ಉಂಟು. ಇದನ್ನು ಕೇಳುವವರೇ ಇಲ್ಲವಾಗಿದೆ ವಿದ್ಯುಚ್ಛಕ್ತಿ ಬೋರ್ಡ್ ಎಂದು ಬೇರೆ ಮಾಡಿದರೂ ಸರಕಾರ ಅದಕ್ಕೆ ಹಣ ಕೊಡುತ್ತಿದೆ ಕೆಲವರನ್ನು ನಾಮಕರಣ ಮಾಡುತ್ತಿವೆ. ಹಾಗಿರುವಾಗ ಸರಕಾರ ನಿಜವಾಗಿಯೂ ಜನರಿಗೆ ಸಹಾಯವಾಗುವಂತೆ ಬಹಳ ದಕ್ಷತೆಯಿಂದ ಕೆಲಸಮಾಡುವಂಥ ಯಾರನ್ನಾದರೂ ಆ ಬೋರ್ಡಿಗೆ ಹಾಕಿ ಕೆಲಸ ಚೆನ್ನಾಗಿ ನಡೆಯುವಂತೆ ನೋಡಿಕೊಳ್ಳಬೇಕು. ಹಳ್ಳಿಗಳಿಗೆ ವಿದ್ಯುಚ್ಛಕ್ತಿ ಕೊಟ್ಟಿದ್ದಾರೆ, ಅಲ್ಲಿ ನೀರಾವರಿ ಬಾವಿಗಳಿವೆ. ಆದರೆ ಫ್ಯೂಸ್ ಹೋದರೆ ಜನರು 7-8 ಮೈಲಿ ದೂರ ಹೋಗಿ ವೈರ್‌ಮನ್ ಕರೆದುಕೊಂಡುಹೋಗಬೇಕು. ಆದುದರಿಂದ 20 ಪಂಪುಸೆಟ್ಟುಗಳಿರುವ ಕಡೆ ಒಬ್ಬ ವೈರ್‌ಮೆನ್ ಇಡಬೇಕೆಂದು ಹೇಳಿದರೂ ಕೂಡ ಆ ರೀತಿ ಮಾಡಿರುವುದಿಲ್ಲ. ಎರಡು ವರ್ಷಗಳಿಂದ ಇದನ್ನು ಹೇಳುತ್ತಿದ್ದೇವೆ. ಇದರಿಂದ ಅನಾವಶ್ಯಕವಾಗಿ ಜನರಿಗೆ ತೊಂದರೆಯಾಗುತ್ತಿದೆ. ದರ ಬಹಳ ಜಾಸ್ತಿಯಾಗಿದೆ, ಅದನ್ನು ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು, ಬೋರ್ಡಿನ ವ್ಯವಹಾರಕ್ಕೆ ಗಮನಕೊಡಬೇಕು.

ಶ್ರೀ ಎ. ಮುನಿಯಪ್ಪ (ಬಾಗೇಪಲ್ಲಿ).—ಮಾನ್ಯ ಅಧ್ಯಕ್ಷರೇ, ಈ ದಿವಸ ನಮ್ಮ ಮುಂದಿರುವ ಬೇಡಿಕೆಗಳನ್ನು ಸ್ವಾಗತಿಸುತ್ತಾ ಒಂದೆರಡು ವಿಚಾರಗಳನ್ನು ತಮ್ಮ ಮುಂದಿಡಬೇಕೆಂದು ಇಚ್ಛೆಪಡುತ್ತೇನೆ. ಈ ಇಲಾಖೆಯಲ್ಲಿ ಇಷ್ಟೊಂದು ಹಣವನ್ನು ಖರ್ಚುಮಾಡಬೇಕೆಂದು ಸರಕಾರದವರು ಮತ್ತು ಅಧಿಕಾರಿಗಳು ವಿಶಾಲವಾದ ಭಾವನೆಯಿಂದ ಬೇಡಿಕೆಯನ್ನಿಟ್ಟಿದ್ದಾರೆ. ಕೆಳಗಿನ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳು ಇಷ್ಟು ಹಣವನ್ನು ಸುಸೂತ್ರವಾಗಿ ಸರಕಾರದ ಉದ್ದೇಶ ನೆರವೇರುವಂತೆ ಖರ್ಚುಮಾಡಬೇಕೆಂದು ಹೇಳುತ್ತೇನೆ. ಹಿಂದೆ ಪಾಳೆಯಗಾರರ ಕಾಲದಲ್ಲಿ ಕಟ್ಟಿದಂಥ ಕಟ್ಟಡವನ್ನು ಈಗ ಕಟ್ಟುವುದಕ್ಕೆಷ್ಟು ಕಷ್ಟ ಎಂಬುದನ್ನು ಗಮನಿಸಬೇಕು. ಏಕೆಂದರೆ ನಂದಿ ಬೆಟ್ಟದಲ್ಲಿ ಒಂದು ಇಟ್ಟಿಗೆ ಕಟ್ಟಡವನ್ನು ಡೈನಮೈಟ್ ಹೊಡೆದರೂ ಕೆಡವಲು ಸಾಧ್ಯವಾಗಲಿಲ್ಲ. ಈ ಇಲಾಖೆಗೆ ಬಹಳ ಗೌರವವಿದೆ. ಏಕೆಂದರೆ ಇಂಜನಿಯರಾಗಿರುವವರಿಗೆ ತಕ್ಷಣ ಹೆಣ್ಣು ಕೊಡುತ್ತಾರೆ. ತೆಲುಗಿನಲ್ಲಿ ಇಚ್ಚಿ ಪುಚ್ಚಿನವಾಳ್ಳಿಕಿ ಇಂಜನಿಯರಿಂಗ್ ಇಲಾಖೆ ಎಂಬ ಒಂದು ಗಾದೆ ಇದೆ. ಈ ಇಲಾಖೆಯವರಿಗೆ ಅಷ್ಟು ಸೌಲಭ್ಯಗಳಿವೆ. ಒಂದೇ ಜಾತಿಯವರು ಒಂದೇ ಖಾತೆಯಲ್ಲಿ ಇಂಜನಿಯರಾಗಿದ್ದಾರೆ ಎಂದು ಮಾನ್ಯ ಸದಸ್ಯರು ಹೇಳಿದರು. ಯಾರೇ ಆಗಲಿ ಜಾತಿಯ ಆಧಾರದಮೇಲೆ ಯಾವ ಕೆಲಸವನ್ನೂ ಮಾಡಬಾರದು, ಅರ್ಹತೆ, ದಕ್ಷತೆ ಮಾಡುವ ಉತ್ತಮ ಕೆಲಸ ಇವುಗಳ ಆಧಾರದಮೇಲೆ ಈ ವಿಚಾರವನ್ನು ವಿಮರ್ಶೆಮಾಡಬೇಕೇ ಹೊರತು ಜಾತಿಯ ಆಧಾರದಮೇಲೆ ಮಾತನಾಡಬಾರದು.

6-00 P. M.

ಏಕೆಂದರೆ ಜಾತ್ಯಾತೀತ ರಾಜ್ಯವನ್ನು ಕಟ್ಟತಕ್ಕ ನಾವು ಜಾತಿಯ ಆಧಾರದ ಮೇಲೆ ಕೆಲಸ ಮಾಡಿದರೆ ಮಾತನಾಡಿದರೆ ಖಂಡಿತವಾಗಿಯೂ ಒಳ್ಳೆಯದಲ್ಲ—ಹೆಚ್ಚು ಕಮ್ಮಿ ಇದ್ದರೆ ಮಾತನಾಡೋಣ. ಇಂಜನಿಯರುಗಳು ಮತ್ತು ಮಂತ್ರಿಗಳು ಬಹಳ ಶ್ರಮಪಟ್ಟು ಈ ಒಂದು ಹಣವನ್ನು ಕೊಟ್ಟಿದ್ದಾರೆ, ಸುಸೂತ್ರವಾಗಿ ಕೆಲಸ ನಡೆಯಬೇಕಾದರೆ ಮೈನರ್ ಇರಿಗೇಷನ್‌ನಲ್ಲಿ ಮಾನ್ಯ ವೆಂಕಟಗಿರಿಯಪ್ಪನವರು ಹೇಳಿದ ಹಾಗೆ ಕೋಲಾರ ಜಿಲ್ಲೆಗೆ ಹೊಸ ಕೆರೆಗಳು ಬೇಡಿ, ನಿಮ್ಮ ಪ್ರಾಜೆಕ್ಟ್‌ಗಳೂ ಬೇಡಿ ನಾವು ಕೇಳುವುದು ಒಡೆದು ಹೋಗಿರತಕ್ಕ ಕೆರೆಗಳು ಮತ್ತು ತೂಬುಗಳು ಏನಿವೆ ಅವನ್ನು ಸರಿಮಾಡಿಸಿಕೊಟ್ಟರೆ ಖಂಡಿತವಾಗಿಯೂ ನಾವು ನಿಮಗೆ ಚಿರಋಣಿಗಳಾಗಿರುತ್ತೇವೆ. ಏಕೆಂದರೆ ಈ ಒಂದು ಮಳೆಗಾಲದಲ್ಲಿ ಒಡೆದು ಹೋಗಿರುವ ಕೆರೆಯನ್ನು ಸದ್ಯಕ್ಕೆ ಮರಳು ಹಾಕಿ ಟೆಂಪೊರೆರಿಯಾಗಿ ರಕ್ಷಣೆ ಮಾಡುತ್ತಾರೆ, ಬಿಸಿಲು ಕಾಲದಲ್ಲಿ ಅದನ್ನು ರಿಪೇರಿ ಮಾಡುವುದಕ್ಕೆ ಹೋಗುವುದಿಲ್ಲ. ಆದ್ದರಿಂದ ಈ ಒಂದು ಕೆಲಸಕಾರ್ಯಗಳನ್ನು ಮಾಡಿ ಕೊಡಬೇಕು ಎಂದು ಹೇಳುತ್ತೇನೆ. ಪಂಚನದಿಗಳ ಮಧ್ಯದಲ್ಲಿ ಪಂಚಗಿರಿಗಳ ಮಧ್ಯದಲ್ಲಿ ವಿಶ್ವೇಶ್ವರಯ್ಯನವರು ಕೆರೆ ಕಟ್ಟಿದ್ದಾರೆ, ಉತ್ತರ ಪಿನಾಕಿನಿ ನದಿ ಸಮುದ್ರಕ್ಕೆ ಹೋಗುತ್ತದೆ, ಅದಕ್ಕೆ ಒಂದು ಸಣ್ಣ ಕಾಲುವೆಯನ್ನು ತೆಗೆದುಕೊಂಡು ಬಂದು ವಿಶ್ವೇಶ್ವರಯ್ಯನವರು ಕಟ್ಟಿರತಕ್ಕ ಕೆರೆಗಳಿಗೆ ಬಿಟ್ಟರು. ಅದು ಯಾವಾಗಲೂ ನೀರು

(ಶ್ರೀ ಎ. ಮುನಿಯಪ್ಪ)

ಇರುತ್ತೆ. ಉತ್ತರ ಪಿನಾಕಿನಿಯಿಂದ ಹೋಗತಕ್ಕ ನೀರನ್ನು ಒಂದು ಚಾನಲ್ ಮೂಲಕ ಯಾವುದನ್ನು ತಂದಿದ್ದಾರೆ ಅದನ್ನು ಈ ಕಡೆಗೆ ಪೂರ್ವಾಭಿಮುಖವಾಗಿ, ಕಣಿವೆ ನಾರಾಯಣಪುರದ ಮೂಲಕ ದೊಡ್ಡ ಕಾಲುವೆ ತಿರುಗಿಸಿದರೆ ಖಂಡಿತವಾಗಿಯೂ ಕೋಲಾರ ಜಿಲ್ಲೆಗೆ ಎಷ್ಟೋ ಅನುಕೂಲ ಮಾಡಿದಂತಾಗುತ್ತದೆ.

ಪಿ.ಡಬ್ಲ್ಯೂ.ಡಿ. ವಿಚಾರದಲ್ಲಿ 44 ಐ. ಎನ್. ಇ. ಡಿ. ಮತ್ತು 100 ಐ. ಎನ್. ಇ. ಡಿ. ಅಂತ ಎರಡು ಇದೆ. ಮಾನ್ಯ ಮಂತ್ರಿಗಳು ಬಹಳ ವಿಶಾಲಭಾವನೆಯಿಂದ ದುಡ್ಡು ಅಲಾಟ್ ಮಾಡಿದ್ದಾರೆ. ಆದರೆ ಅಲ್ಲಿನ ಅಧಿಕಾರಿಗಳು ಚಿಕ್ಕಬಳ್ಳಾಪುರದ ಒಂದು ಡಿವಿಜನ್‌ನಿಂದ 6 ಲಕ್ಷ ರೂಪಾಯಿಗಳವರೆಗೂ ನನ್ನ ಕೈಯಲ್ಲಿ ಖರ್ಚು ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳಿ ವಾಪಸು ಮಾಡಿದ್ದಾರೆ. ಎಷ್ಟೋ ಕೆಲಸಗ (ಹಳೆ)ಳು ಇದ್ದರೂ ಖರ್ಚು ಇದು ಎಂತಹ ಅನ್ಯಾಯ ? ಖಂಡಿತವಾಗಿಯೂ ಇದು ಬಹಳ ವ್ಯಥೆ ಪಡಬೇಕಾದ ವಿಚಾರ. ಮೈನರ್ ಇರಿಗೇಷನ್‌ನಲ್ಲಿ ಸ್ವಲ್ಪವಾದರೂ ರಿಪೇರಿ ಮಾಡಿ ಎಂದು ಅಷ್ಟು ವಿಶಾಲವಾದ ಭಾವನೆಯಿಂದ ಮಂತ್ರಿಗಳು ಕೊಟ್ಟಂಥ ಹಣವನ್ನು ಉಪಯೋಗಮಾಡಿ ಕೆಲಸಕಾರ್ಯಗಳನ್ನು ಈಡೇರಿಸಲಿಲ್ಲ. ಆದ್ದರಿಂದಲೇ ಎದುರು ಪಕ್ಷದವರು ಮತ್ತು ಈ ಪಾರ್ಟಿಯವರೂ ಎಲ್ಲರೂ ಈ ಒಂದು ಕೆಲಸಕಾರ್ಯಗಳು ಆಗಲಿಲ್ಲ ಎಂದು ನಿಮಗೆ ಹೇಳುತ್ತಾ ಇರುವುದು. ಆದ್ದರಿಂದ ನಾನು ಹೇಳುವುದೇನೆಂದರೆ ಬಾಗೇಪಲ್ಲಿ ತಾಲ್ಲೂಕಿನಲ್ಲಿ ಮೊದಲನೆ ಪಂಚವಾರ್ಷಿಕ ಯೋಜನೆಯಲ್ಲಿ ತಿರುವಣಿ ಚಾನಲ್ ಅಂತ ಕಟ್ಟಿ ಅದಕ್ಕೆ 50 ಸಾವಿರ ರೂಪಾಯಿ ಖರ್ಚು ಮಾಡಿದ್ದಾರೆ, ಕುಶಾವತಿ ನದಿಗೆ ಒಂದು ಚಾನಲ್ ಮಾಡಿದ್ದಾರೆ ಅದಕ್ಕೆ 60 ಸಾವಿರ ರೂಪಾಯಿ ಖರ್ಚಾಗಿದೆ. ರಂಗಧಾಮ ಚಾನಲ್‌ಗೆ ಒಂದು ಲಕ್ಷ 25 ಸಾವಿರ ರೂಪಾಯಿ ಖರ್ಚಾಗಿದೆ ಇದೆಲ್ಲಾ ಮುಕ್ಕಾಲು ಭಾಗ ಕೆಲಸ ಮಾಡಿ ಅಲ್ಲಿಗೇ ನಿಲ್ಲಿಸಿದ್ದಾರೆ. ಅಧಿಕಾರಿಗಳು ಮೊದಲು ಸರ್ವೆ ಮಾಡಿದಾಗ ಏಕೆ ಸರಿಯಾಗಿ ಮಾಡಲಿಲ್ಲ ? ಅದನ್ನು ಅವರು ಮೊದಲೇ ಮಾಡಿದ್ದರೆ ಖಂಡಿತವಾಗಿಯೂ ಈ ಸ್ಥಿತಿಗೆ ಬರುತ್ತಾ ಇರಲಿಲ್ಲ, ಅದಕ್ಕೆ ಯಾರು ಜವಾಬ್ದಾರರು ? ಮಂಚೇನಹಳ್ಳಿಯಲ್ಲಿ ಒಂದು ಪೋಲೀಸ್ ಕ್ವಾರ್ಟರ್ಸ್ ಕಟ್ಟಿದ್ದಾರೆ 6 ವರ್ಷದಿಂದ ಯಾರೂ ಕೂಡ ಅದರ ಕಡೆ ತಿರುಗಿ ನೋಡಿಲ್ಲ, ಅದಕ್ಕೆ ಯಾರು ಜವಾಬ್ದಾರಿ ಅಂತ ?

ಪಂಪ್ ಸೆಟ್ಟುಗಳ ವಿಚಾರದಲ್ಲಿ ಬಹಳ ಜನ ಮಾತನಾಡಿದ್ದಾರೆ. ಅವನ ಜೀವಮಾನದಲ್ಲೇ ಒಂದು ಪಂಪ್‌ಸೆಟ್ಟೂ ಇಲ್ಲದೇ ಇರತಕ್ಕ ಒಬ್ಬ ಮನುಷ್ಯ ಅದಕ್ಕೆ ಹಾಕಿದರೆ ಒಂದು ಸಾವಿರ ರೂಪಾಯಿ ಒಂದು ಎಚ್.ಪಿ.ಗೆ ಕೊಡಬೇಕು, ನಮ್ಮ ಜಿಲ್ಲೆಯಲ್ಲಿ 3 ಎಚ್.ಪಿ. ಬೇಕಾಗುತ್ತದೆ. 3,000 ರೂಪಾಯಿ ಇದ್ದರೆ ಅವನು ಸರ್ಕಾರದ ಹತ್ತಿರ ಏಕೆ ಬರುತ್ತಾ ಇದ್ದ ? ನನ್ನ ಒಂದು ಅಭಿಪ್ರಾಯ ನನ್ನ ಸಂಸಾರದಲ್ಲಿ ಪಂಪ್ ಸೆಟ್ ಇಲ್ಲ ಅಂತ ಹೇಳಿ ಅಫಿಡವಿಟ್ ಮಾಡಿಸಿಕೊಂಡು ಬಂದು ಎಕ್ಸಿಕ್ಯೂಟಿವ್ ಇಂಜನಿಯರಿಗೆ ಕೊಟ್ಟರೆ ಆತನಿಗೆ ಯಾವ ಅಡ್ಡಿ ಆತಂಕವೂ ಇಲ್ಲದೆ ಪಂಪ್‌ಸೆಟ್ಟನ್ನು ಕೊಡಬೇಕು. 3-4 ಪಂಪ್‌ಸೆಟ್ ಇದ್ದರೆ ಬೇಕಾದರೆ ತಾವು ಹೇಳುವಂತೆ ಮಾಡಿ ಒಂದು ಪಂಪ್ ಸೆಟ್ಟೂ ಇಲ್ಲದೇ ಇರುವವರಿಗೆ ಯಾವ ನಿರ್ಬಂಧವೂ ಇರಕೂಡದು ಎಂದು ಹೇಳಿ ಇವತ್ತಿನ ದಿವಸ ಮಾತನಾಡಲು ಅವಕಾಶ ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

SRI J. P. SARVESH (Sedam).—Sir, I am very sorry that the Hon'ble Speaker has not made any arrangement to take down speeches in Hindi. So, I will try to explain in English, which language I know very little.

First of all, I would like to congratulate the Hon'ble Minister for Public Works, Sri Veerendra Patil for doing remarkable work in Chincholi Taluka, his constituency. I am very happy about it, because he has really done good work, and every member is happy about it. In the past the other Ministers also have been doing the same thing. In the same manner, every Minister is trying to develop his taluka. What I plead is that they have to feel that all taluks in the State belong to them, and with that motto if they work there will be great satisfaction among the masses.

The Hon'ble Minister knows well that Sadem taluka is a very backward taluka. There is only one road, the mileage of which is only 20 miles, and except that tar road, there is no other road. This taluka happens to be on the border of our State. In Andhra, people of Sedam see that there is so much of progress. They question me as to why this taluka is neglected so much; is it because that the majority people are Telugu speaking?

With regard to electricity supply in Sedam taluka, I can say that the Department is acting in the most laziest manner. Only those villages where the Congress got the highest number of votes are being supplied with electricity. It is a fact which can be verified. When main lines are drawn, the villages where the Opposition candidate got more votes, even if it is only two miles, electricity is not supplied to those villages. But, they have supplied electricity to villages at a distance of 10-12 miles where Congress condidates got majority votes. That kind of discrimination is very bad. Revenge is sweet when is avenges injury with love. We must win people by love, and I am sure Hon'ble Minister's capable of doing that. I do not understand why they are resorting to such small things.

I do not know from where the Department buys these electricity meters. By putting an ordinary pin, and a wire the meter stops running. I have seen people doing this, who have taught them, the employees of Government thereby use powerful bulbs and pay very little amount by way of electricity charges. This should be stopped immediately, because it affects the finances of the State.

Several villages in the Gulburga District, perticularly Sedam Taluk were informed through the Taluk Boards that the villages will be electrified if they apply for the pumpsets, *viz.*, Kukunda, Taranahalli, Batgira, Nadepalli, Madkal, Kurkunta, etc. Unfortunately, these villages are ignored, but other villages which are not at all irrigation-minded are supplied with electricity. You know very well, Sir, Sedam taluka is the only taluka where paddy is produced. I request that some attention should be paid to provide irrigation and road facilities to Sedam taluka. They should consider that Sedam taluka also belongs to them as every other taluk.

With these few words, I thank the Chair.

† ಶ್ರೀ ಕೆ. ಪ್ರಭಾಕರ್ (ವರ್ತೂರು).—ಮಾನ್ಯ ಸಭಾಪತಿಯವರೇ, ಕಟ್ಟಕಡೆಗೆ ಈ ಬಡ್ಜೆಟ್ಟಿನ ವಿಷಯದಲ್ಲಿ ನನಗೆ ಮಾತನಾಡಲು ಐದು ನಿಮಿಷಗಳ ಕಾಲಾವಕಾಶವನ್ನು ನಿಗದಿ ಮಾಡಿದ್ದೀರಿ. ಅಷ್ಟರಲ್ಲೇ ಮುಗಿಸಲು ಅಸಾಧ್ಯವಾದರೂ ಕೂಡ ಕೆಲವು ಸೂಚನೆಗಳನ್ನು ಮಾತ್ರ ಕೊಡಬಯಸುತ್ತೇನೆ. ಈಗ ಲೋಕೋಪಯೋಗಿ ಶಾಖೆ ಏನು ಕಾರ್ಯ ಮಾಡುತ್ತಾ ಇದೆ ಎನ್ನುವುದು ಗೊತ್ತಿದೆ. If you were to take away the work of the Public Works Department from the map of any country, the progress can never be measured. ಇದನ್ನು ನಮ್ಮ ಇಂಜನಿಯರುಗಳು ಮನಸ್ಸಿನಲ್ಲಿಟ್ಟುಕೊಂಡು ಇಲ್ಲಿ ಚೆನ್ನಾಗಿ ಕೆಲಸ ಮಾಡಿದ್ದಾರೆ. ಇದನ್ನು ನಾವು ಮೆಚ್ಚಬಹುದು. ಹೇಗೆಂದರೆ ಆಂಧ್ರ ಪ್ರದೇಶದಲ್ಲಿರುವ ರೋಡ್ ಮತ್ತು ಮೈಸೂರು ದೇಶದಲ್ಲಿರುವ ರೋಡನ್ನು ಹೋಲಿಸಿ ನೋಡಿದರೆ ಅಲ್ಲಿ ಮಾಡಿರುವ

(ಶ್ರೀ ಕೆ. ಪ್ರಭಾಕರ್)

ರೋಪುಗಳು ಒಂದು ತರಹ ಮುಚ್ಚಿ ಇದ್ದಹಾಗೆ ಇವೆ. ಇದು ನಮ್ಮನ್ನು ನಾವು ಹೊಗಳುವ ವಿಚಾರವಲ್ಲ. ಅಷ್ಟುವಾದರೆ ಅದು ದೆನ್ನಿ ಇಲ್ಲವಾದರೆ ಇಲ್ಲವೆನ್ನಿ. A good work requires patting on the back. ಹೀಗೆ ಅತಿ ಹೆಚ್ಚು ಖರ್ಚು ಮಾಡದೆ ಒಳ್ಳೆಯ ಕೆಲಸಗಳನ್ನು ಈ ಲೋಕೋಪಯೋಗಿ ಶಾಖೆ ಮಾಡುತ್ತಿದೆ ಎನ್ನುವುದನ್ನು ಹೇಳುತ್ತೇನೆ.

ಇನ್ನು ಸೋಷಿಯಲಿಸಮ್ ವಿಚಾರವಾಗಿ ಹೇಳುವುದಾದರೆ ಪಿ.ಡಬ್ಲ್ಯು.ಡಿ. ಇಲಾಖೆ ಇದೆ. ಇದಕ್ಕೆ 93 ಕೋಟಿ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದಾರೆ. What is the new technique evolved and applied to achieve that goal of socialism? ಇದಕ್ಕೆ ಉತ್ತರ ಕೊಡಬೇಕು. ಇಂಡಿವಿಜ್ಯುಯಲ್ ಕಂಟ್ರಾಕ್ಟರ್ ತೆಗೆದುಬಿಟ್ಟು ಈ ಕೆಲಸಗಳನ್ನು ಕೋ-ಆಪ ರೇಟಿವ್ಸ್ ಮುಖಾಂತರವಾಗಲಿ ಅಥವಾ ಕೋ-ಆಪರೇಟೀವ್ ಮೆಥಡ್‌ನಲ್ಲಾಗಲಿ ಮಾಡಿಸಬೇಕು. ಮಾಗಡಿ ತಾಲ್ಲೂಕಿನಲ್ಲಿ ಒಂದು ವೆಟರ್ನರಿ ಆಸ್ಪತ್ರೆ ಬಹಳ ಹಿಂದಿನಿಂದಲೂ ಇದೆ. ಮತ್ತು ನೆಲಮಂಗಲ ತಾಲ್ಲೂಕಿನಲ್ಲಿ ಒಂದು ಪ್ರಾಜೆಕ್ಟ್ ಹಾಗೆಯೇ ಇದೆ. ಈ ಸರ್ಕಾರಗಳು ಹೊಸದಾಗಿ ಬರುವುದು ಹೋಗುವುದರಲ್ಲಿ ಬದಲಾವಣೆಯಾಗಿ ಒಂದೊಂದು ಪಾಲಿಸಿ ಬದಲಾಯಿಸಿ ಹೊಸದಾಗಿ ತರುತ್ತಾರೆ. ಈ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್‌ನಲ್ಲಿ ಫಸ್ಟ್ ಸ್ಟೇಜ್, ಸೆಕೆಂಡ್ ಸ್ಟೇಜ್, ಮತ್ತು ಥರ್ಡ್ ಸ್ಟೇಜ್, ಎಂದು ಬೇರೆ ಇದೆ. ಕಬಿನಿ ಪ್ರಾಜೆಕ್ಟ್ ಇನ್ನೂ ಸೆಕೆಂಡ್ ಸ್ಟೇಜ್‌ನಲ್ಲಿ ಇದೆ. ಇದು ನಿಧಾನವಾಗುತ್ತಾ ಇದೆ. ಇದನ್ನು ಸರಿಪಡಿಸಬೇಕು.

ಇನ್ನು ಪಾಲಿಸಿ ವಿಚಾರ. "Equal justice to all areas" ಇದನ್ನು ಎಲ್ಲರೂ ಅನುಸರಿಸಬೇಕು. ಬರೀ ಮೇಜರ್ ಮತ್ತು ಮೀಡಿಯಂ ಯೋಜನೆಗಳಿಗೆ ಗಮನ ಕೊಡದೆ ಚಿಕ್ಕ ಚಿಕ್ಕ ಪ್ರಾಜೆಕ್ಟ್ಸ್‌ಗೂ ಹೆಚ್ಚು ಪ್ರಾಶಸ್ತ್ಯ ಕೊಡಬೇಕು. ಆಮೇಲೆ ನಾನು ಹೇಳಿದಹಾಗೆ ಟೆಂಡರ್ ಸಿಸ್ಟಮ್‌ನ್ನು ಬದಲಾಯಿಸಿ ಕೋ-ಆಪರೇಟೀವ್ ಮೆಥಡ್‌ನಲ್ಲಿ ಮಾಡಬೇಕು. ಈ ತತ್ವವನ್ನು ಹಿಂದಿನ ಮಂತ್ರಿಗಳು ಅನುಸರಿಸಿದ್ದರು. ಅದು ಈಗ ನೋಡಿದರೆ ಕಾಣುವುದಿಲ್ಲ. ಕರೆಂಟ್ ಷೆಡ್ಯೂಲ್ ಆಫ್ ರೇಟ್ಸ್ ವಿಚಾರದಲ್ಲಿ ಸೀಕ್ರೆಟ್ ಮೆಥೆಡ್ ಇವೆ. ಅದನ್ನು ಯಾವ ಆಧಾರದ ಮೇಲೆ ಮಾಡುತ್ತಾ ಇದ್ದೀರಿ ಎನ್ನುವುದನ್ನು ತಿಳಿಸಬೇಕು.

ಇನ್ನು ಬೆಂಗಳೂರು ವಾಟರ್ ವರ್ಕ್ಸ್ ಸ್ಕೀಮು ಏನು ಇದೆ ಅದಕ್ಕೆ ವರ್ಲ್ಡ್ ಬ್ಯಾಂಕಿನವರು ಹಣ ಕೊಡುವುದನ್ನು ನಿಲ್ಲಿಸಿಬಿಟ್ಟಿದ್ದಾರೆ. ಅದಕ್ಕೋಸ್ಕರ ದುಡ್ಡನ್ನು ಬೇರೆ ರೀತಿಯಲ್ಲಿ ಒದಗಿಸಿ ಕೊಂಡು ಮುತುವರ್ಜಿ ವಹಿಸಿ ಕೆಲಸ ಬೇಗ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ.

ಇನ್ನು ಕಂಟ್ರಾಕ್ಟರ್ಸ್ ಬ್ಲ್ಯಾಕ್ ಲಿಸ್ಟ್ ಮಾಡಿದ್ದಾರೆ. ಆದರೆ ಇದನ್ನು ಸೀರಿಯಸ್ ಆಗಿ ತೆಗೆದುಕೊಳ್ಳುವುದಿಲ್ಲ. ವರ್ತೂರು ಕೆರೆ ಯಾವ ಇಲಾಖೆಗೆ ಸೇರಿದೆ ಎನ್ನುವುದೇ ಸಂಶಯಾಸ್ಪದ ವಾಗಿದೆ. ಇದು ರೆವಿನ್ಯೂ ಇಲಾಖೆಗೆ ಸೇರಿದೆಯೋ ಅಥವಾ ಪಿ.ಡಬ್ಲ್ಯು.ಡಿ. ಇಲಾಖೆಗೆ ಸೇರಿದೆಯೋ ಎನ್ನುವುದು ಗೊತ್ತಿಲ್ಲ. ಬೆಳ್ಳಂದೂರು ಮತ್ತು ವರ್ತೂರು ಕೆರೆಯನ್ನು ಆದಷ್ಟು ಬೇಗ ರಿಪೇರಿ ಮಾಡಿ ಕೊಡಬೇಕು. ಇಷ್ಟು ಈ ಸಂದರ್ಭದಲ್ಲಿ ನಾನು ಹೇಳಲು ಕಾಲಾವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಟಿ. ಪಿ. ಬೋರಯ್ಯ (ಟಿ. ನರಸೀಪುರ).—ಮಾನ್ಯ ಸಭಾಧ್ಯಕ್ಷರೇ, ಈ ಲೋಕೋಪಯೋಗಿ ಶಾಖೆಯ ಮಂತ್ರಿಗಳು ಮಂಡಿಸಿದಂಥ ಬೇಡಿಕೆಗಳನ್ನು ವಿರೋಧಿಸುತ್ತಾ ಕೆಲವು ಸಲಹೆಗಳನ್ನು ಮಾತ್ರ ಸರ್ಕಾರದ ಮುಂದೆ ಇಡಲು ಬಯಸುತ್ತೇನೆ.

ಸ್ವಾಮಿ, ಈ ನೀರಾವರಿ ಯೋಜನೆಗೆ ಸಾಕಾದಷ್ಟು ಪ್ರೋತ್ಸಾಹ ಸರಕಾರ ಕೊಡುತ್ತಾ ಇಲ್ಲ. ತಾವು ಕೈಗೊಂಡಿರತಕ್ಕ ಅನೇಕ ನೀರಾವರಿ ಯೋಜನೆಗಳನ್ನು ಇನ್ನೂ ಕೂಡ ಪೂರ್ತಾ ಮುಗಿಸಿಲ್ಲ. ನಮ್ಮ ಜಿಲ್ಲೆಯ ವಿಚಾರವಾಗಿ ಹೇಳುವುದಾದರೆ ಕಬಿನಿ ಪ್ರಾಜೆಕ್ಟ್ ತೆಗೆದುಕೊಂಡು ಸುಮಾರು 7—8 ವರ್ಷ ಆಗಿದೆ. ಈ ಕೆಲಸ ಇನ್ನೂ ಪೂರ್ಣ ಆಗಿಲ್ಲ. ತಾವು ಒದಗಿಸಿರತಕ್ಕ ಹಣ ಕಳೆದ ವರ್ಷ 50 ಲಕ್ಷ, ಈ ವರ್ಷ 60 ಲಕ್ಷ ರೂಪಾಯಿಗಳು. ಈ ಪ್ರಮಾಣದಲ್ಲಿ ತಾವು ಒದಗಿಸಿದರೆ ಇನ್ನು 30 ವರ್ಷವಾದರೂ ಕೂಡ ಮುಗಿಯುವುದಿಲ್ಲ. ಈ ಕಬಿನಿ ಪ್ರಾಜೆಕ್ಟನ್ನು ಮುಗಿಸಿದರೆ ಮೈಸೂರು ಜಿಲ್ಲೆಯಲ್ಲಿರತಕ್ಕ ಜನರಿಗೆ ಆಹಾರದ ಅಭಾವ ಮತ್ತು ದಾರಿದ್ರ್ಯ ಹೋಗಲು ಅನುಕೂಲವಾಗುತ್ತದೆ. ಇದನ್ನು ಪೂರ್ಣಗೊಳಿಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು. ಈ ಕಬಿನಿ ಪ್ರಾಜೆಕ್ಟ್ ಪೂರ್ಣ ಆದರೆ ಇದರ ನೀರಿನ ಸೌಕರ್ಯ ಕೆ. ಆರ್. ಸಾಗರಕ್ಕೂ ದೊರೆಯುವುದಲ್ಲದೆ ನುಗು

ರಿಸರ್ವಾಯರ್‌ಗೂ ಅನುಕೂಲವಾಗುತ್ತದೆ. ಈಗ ನುಗು ರಿಸರ್ವಾಯರ್‌ನಲ್ಲಿ ನೀರು ಇಲ್ಲದೆ 20 ಸಾವಿರ ಎಕರೆಗೆ ನಷ್ಟ ಸಂಭವಿಸಿದೆ. ಆದುದರಿಂದ ಸರ್ಕಾರ ಈ ಕೆಲಸವನ್ನು ತೆಗೆದುಕೊಂಡು ಪೂರ್ಣಗೊಳಿಸಬೇಕೆಂದು ಒತ್ತಾಯಪಡಿಸುತ್ತೇನೆ.

ಇನ್ನು ನಮ್ಮ ಜಿಲ್ಲೆಯ ಚಿಕ್ಕಹೊಳೆ ಪ್ರಾಜೆಕ್ಟ್‌ನಿಂದ 1,170 ಎಕರೆಗೆ ನೀರು ಕೊಡುತ್ತಾ ಇದ್ದೇವೆ. ತಮ್ಮ ಒಂದು ಯೋಜನೆಯ ಪ್ರಕಾರ 3,238 ಎಕರೆಗೆ ನೀರು ಕೊಡಬೇಕಾಗಿದೆ. ಆದುದರಿಂದ ಇನ್ನೂ 2,068 ಎಕರೆಗೆ ನೀರು ಕೊಡಬೇಕಾಗಿರುವುದರಿಂದ ಇದರ ಬಗ್ಗೆ ಹೆಚ್ಚು ಗಮನ ಕೊಡಬೇಕು ಎಂದು ಹೇಳುತ್ತೇನೆ. ಹಾಗೆಯೇ ಸುವರ್ಣಾವತಿ ಪ್ರಾಜೆಕ್ಟನ್ನು ಕೈಕೊಂಡಿದ್ದಾರೆ. ಅದು ನಿಧಾನವಾಗುತ್ತಾ ಇದೆ. ಆ ಪ್ರಾಜೆಕ್ಟಿನ ಕೆಲಸವನ್ನು ತುರ್ತಾಗಿ ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಕೃಷ್ಣರಾಜಸಾಗರದ ಜಲಾಶಯವನ್ನು ಅಭಿವೃದ್ಧಿ ಮಾಡುವುದ ಕ್ಕೋಸ್ಕರ 3ನೇ ಪಂಚವಾರ್ಷಿಕ ಯೋಜನೆಯಲ್ಲಿ 300 ಲಕ್ಷ ರೂಪಾಯಿಗಳನ್ನು ಒದಗಿಸಿಕೊಂಡಿದ್ದಾರೆ. ಅಲ್ಲಿನ ಕೊನೆಯ ಅಚ್ಚುಕಟ್ಟುದಾರರಿಗೆ ನೀರು ಸರಬರಾಜು ಆಗದೆ ತೊಂದರೆಯಾಗಿದೆ ಎಂಬುದಾಗಿ ಮನವಿಗಳನ್ನು ರೈತ ಮುಖಂಡರು ಸರ್ಕಾರಕ್ಕೆ ತಿಳಿಸುತ್ತಿದ್ದರೂ ಕೂಡ ಇನ್ನೂ ಪರಿಸ್ಥಿತಿ ಉತ್ತಮವಾಗಿಲ್ಲ. ಕೃಷ್ಣರಾಜಸಾಗರದ ಟೇಲ್ ಎಂಡ್‌ನಲ್ಲಿರತಕ್ಕ 30—35ಸಾವಿರ ಎಕರೆ ಜಮೀನಿಗೆ ನೀರು ಇಲ್ಲದೆ ಪ್ರತಿವರ್ಷವೂ ಒಣಗಿ ಹೋಗುವ ಪರಿಸ್ಥಿತಿ ಬಂದಿದೆ. ಅಲ್ಲಿ ನೀರು ಇಲ್ಲದೇ ಇರುವುದೇ ಮುಖ್ಯ ಕಾರಣವಾಗಿರುತ್ತದೆ. ನೀರಿನ ಹಂಚಿಕೆ ವಿಚಾರದಲ್ಲಿ ಸರ್ಕಾರ ಸಾಕಷ್ಟು ಆಸಕ್ತಿಯನ್ನು ವಹಿಸಲಿಲ್ಲ, ದಕ್ಷತೆ ವಹಿಸಲಿಲ್ಲವೆಂದು ನಾನು ವಿಷಾದದಿಂದ ಹೇಳಬೇಕಾಗಿದೆ. ಯಾವ್ಯಾವ ನಾಲೆಗಳಿಗೆ ಎಷ್ಟೆಷ್ಟು ನೀರು ಬಿಡಬೇಕೋ ಅದನ್ನು ಅವರು ತಿಳಿದಿದ್ದರೂ ಕೂಡ ನೀರು ಸರಿಯಾದ ರೀತಿಯಲ್ಲಿ ಹಂಚಿಕೆಯಾಗುತ್ತಾ ಇಲ್ಲ. ಎಲ್ಲಿ ಪ್ರಭಾವಶಾಲಿಗಳು ಇದ್ದಾರೆಯೋ ಅಲ್ಲಿ ನೀರು ಹೆಚ್ಚಿಗೆ ಹರಿಯುತ್ತಾ ಇದೆ. ಬೇರೆ ಕಡೆಗಳಲ್ಲಿ ನೀರು ಸಿಗುತ್ತಾ ಇಲ್ಲ. ಮಡಬಾಯಿ ನಿಗದಿ ಮಾಡಿದ್ದರೂ ಸಹ ಅಕ್ರಮ ಡಬ್ಬಲ್ ಮಡಬಾಯಿ ಇದ್ದರೆ ಅದನ್ನು ಕಂಟ್ರೋಲ್ ಮಾಡುವುದಕ್ಕೆ ಇಲಾಖೆಗೆ ಅಸಾಧ್ಯವಾಗಿದೆ ಎಂಬುದಾಗಿ ಹೇಳುತ್ತಾ ಇದ್ದಾರೆ. ಆದ್ದರಿಂದ ಇಂತಹ ಅಕ್ರಮವಾದಂಥ ಮಡಬಾಯಿಗಳನ್ನು ನಿಲ್ಲಿಸಿ ಎಲ್ಲಾ ಅಚ್ಚುಕಟ್ಟುದಾರರಿಗೂ ನೀರು ಸಿಗುವಂತೆ ಏರ್ಪಾಡು ಮಾಡಬೇಕು. ವಿಶ್ವೇಶ್ವರಯ್ಯ ನಾಲೆಯಿಂದ ಟಿ· ನರಸೀಪುರ ತಾಲ್ಲೂಕಿಗೆ ತುರಗನೂರು ಒಂದು ಬ್ರ್ಯಾಂಚ್ ನಾಲಾ ಇದೆ. ಅಲ್ಲಿ ಕಳೆದ 40 ವರ್ಷಗಳಿಂದಲೂ ನೀರಿನ ಪರಿಸ್ಥಿತಿ ಉತ್ತಮವಾಗಿಲ್ಲ, ತೊಂದರೆಯಾಗಿದೆ. ದಿನೇ ದಿನೇ ಕೆಡುತ್ತಾ ಇದೆ. ಅಲ್ಲಿಗೆ 250 ಕ್ಯೂಸೆಕ್ಸ್ ನೀರು ಬಿಡಬೇಕು. 170—180 ಕ್ಯೂಸೆಕ್ಸ್‌ನಷ್ಟು ಕೂಡ ನೀರು ಬಿಡುತ್ತಾ ಇಲ್ಲ. ಆಫ್ ಅಂಡ್ ಆನ್ ಸಿಸ್ಟಂನಲ್ಲಿ ಅಲ್ಲಿ ನೀರು ಕೊಟ್ಟರೂ ಕೂಡ ಅಲ್ಲಿರತಕ್ಕ ರೈತರಿಗೆ ಸಾಕಷ್ಟು ನೀರು ಸಿಗುತ್ತಾ ಇಲ್ಲ. ಕೊನೆ ಪಕ್ಷ 250 ಕ್ಯೂಸೆಕ್ಸ್ ನೀರು ಕೊಟ್ಟರೆ ಸಾಕು. ಆ ನೀರಿನಿಂದಲೇ 16 ಸಾವಿರ ಎಕರೆ ಅಚ್ಚುಕಟ್ಟಿನಲ್ಲಿ ಸಹಸ್ರಾರು ಪಲ್ಲ ಬತ್ತ ಬೆಳೆದು ರಾಜ್ಯಕ್ಕೆ ಕೊಡಬಹುದಾಗಿತ್ತು. ಆದರೆ ಈ ವರ್ಷ ನಾಲ್ಕೈದು ಸಾವಿರ ಎಕರೆಗೆ ನೀರು ಸರಿಯಾಗಿ ತಲುಪದೇ ಸಹಸ್ರಾರು ಪಲ್ಲ ಬತ್ತದ ಬೆಳೆ ಬರುವುದು ನಷ್ಟವಾಗಿದೆ. ಹಿಂದಿನ ರಾಜರ ಕಾಲದಲ್ಲಿ ವಿಶ್ವೇಶ್ವರಯ್ಯ ನಾಲಾ ಏರಿಯಾದಲ್ಲಿ ಇರತಕ್ಕ ಪ್ರದೇಶವನ್ನು ಅಭಾವ ಪ್ರದೇಶ ಎಂದು ತಿಳಿದು ನಾಲಾ ತೋಡಿಸುತ್ತಿದ್ದರೂ ಸಹ ಅಂತಹ ಕಡೆ ಇವರು ನಿರ್ದಿಷ್ಟವಾದ ಗಮನವನ್ನು ಕೊಟ್ಟಿಲ್ಲ. ಎಲ್ಲ ಅಭಾವ ಪ್ರದೇಶಗಳೆಂದು ಹೇಳಿದ್ದಾರೋ ಅಂತಹ ಅಭಾವ ಪ್ರದೇಶಗಳಲ್ಲಿರತಕ್ಕ ಅಭಾವವನ್ನು ನೀಗುವುದಕ್ಕೆ ಕೂಡಲೇ ಪ್ರಯತ್ನಮಾಡಬೇಕೆಂದು ನಾನು ಸರ್ಕಾರದವರಲ್ಲಿ ಮನವಿಮಾಡಿಕೊಳ್ಳುತ್ತೇನೆ.

ಇನ್ನು ಉಕ್ಕಲಗೆರೆ ಬ್ರ್ಯಾಂಚಿನಲ್ಲಿ ಸುಮಾರು ಎರಡು ವರ್ಷಗಳಿಂದಲೂ ಸರಿಯಾಗಿ ನೀರು ಕೊಡಲಿಲ್ಲ. ತುರಗನೂರು ಬ್ರ್ಯಾಂಚ್ ನಾಲಾ ಕೆಳಗೆ ಇರುವ ಚಿಮಿಲಕೆರೆ ಅದು ಜೀರ್ಣೋದ್ಧಾರವಾಗಬೇಕೆಂದು ಹೇಳಿದ್ದೇನೆ. ಇನ್ನೂ ಆ ಕೆಲಸ ಷುರು ಆಗಲಿಲ್ಲ. 11ನೇ ಡಿಸ್ಟ್ರಿಬ್ಯೂಟರಿಯ ತೋಳು ನಾಲಾ ತೆಗೆಯುವುದಕ್ಕೆ ಸರಕಾರದ ಆಜ್ಞೆಯಾಗಿ ಸುಮಾರು 6—7 ವರ್ಷವಾದರೂ ಸಹ ಇನ್ನೂ ಆ ಕೆಲಸ ಷುರುಮಾಡಿಲ್ಲ. ರೈತರ ಒತ್ತಾಯ ಬಹಳ ಇದೆ. ಸುಮಾರು 85 ಸಾವಿರ ರೂಪಾಯಿಗಳ ಅಂದಾಜು ಆಗಿದೆ. ಆದರೂ ಆ ಕೆಲಸಗಳನ್ನು ಈವರೆಗೂ ತೆಗೆದುಕೊಂಡಿಲ್ಲ. ಹೊಳಲು ಪಿಕಪ್ ಕೆಲಸ ಪೂರೈಸಿದ ನಂತರ ಈ ಕೆಲಸ ಷುರು ಮಾಡುತ್ತೇವೆಂದು ಇಲಾಖೆಯವರು ಹೇಳುತ್ತಾರೆ. ಈ ವರ್ಷವಾದರೂ ಆ ಕೆಲಸಗಳನ್ನು ತೆಗೆದುಕೊಂಡು ಅಲ್ಲಿರುವ ಜನರಿಗೆ ನೀರು ಒದಗಿಸಿರುವ ಏರ್ಪಾಡು ಮಾಡಿ ಅಲ್ಲಿಯ ಜನರ ಅನ್ನ ದಾರಿದ್ರ್ಯವನ್ನು ಪಾರು ಮಾಡಬೇಕೆಂದು ನಾನು ತಮ್ಮನ್ನು ಪ್ರಾರ್ಥನೆಮಾಡುತ್ತೇನೆ.

(ಶ್ರೀ ಟಿ. ಪಿ. ಬೋರಯ್ಯ)

ಇನ್ನು ಎಲೆಕ್ಟ್ರಿಸಿಟಿ ವಿಷಯವಾಗಿ ನಾನು ಇನ್ನೇನೂ ಹೇಳಬೇಕಾಗಿಯೇ ಇಲ್ಲ. ಆದರೆ ಎಲ್ಲರೂ ಹೇಳಿದ್ದಾರೆ ದಿನೇ ದಿನೇ ಗ್ರಾಮಗಳ ಬೀದಿ ದೀಪ ಕೆಡುತ್ತಾ ಇದೆ. ಸ್ಟ್ರೀಟ್ ಲೈಟ್ಸ್ ಬಲ್ಬ್ಸ ಒಂದೂ ಸರಿಯಾಗಿ ಉರಿಯುತ್ತಾ ಇಲ್ಲ. ಸರ್ಕಾರ ಅತ್ತಕಡೆಗೆ ಗಮನಕೊಡಬೇಕು. ಮೈಸೂರು ಲ್ಯಾಂಪ್ ವರ್ಕ್ಸನವರಿಗೆ ಬಲ್ಬ್ಸನ್ನು ಸರಬರಾಜು ಮಾಡುವಂತೆ ಸರಕಾರ ಆಜ್ಞೆ ಮಾಡಿದೆ. ಅವರು ಸರಿಯಾದ ಬಲ್ಬ್ ಕೊಡುತ್ತಾ ಇಲ್ಲಾ ಎಂದು ಬೋರ್ಡಿನವರು ಹೇಳುತ್ತಾರೆ. ಈ ವಿಚಾರವನ್ನು ಸರ್ಕಾರದವರು ಪರಿಶೀಲನೆಮಾಡಿ ಅನುಕೂಲ ಮಾಡಿಕೊಡಬೇಕು. 5 ನಿಮಿಷಗಳ ಕಾಲಾವಕಾಶವನ್ನು ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ—ಜೈ ಹಿಂದ್

ಶ್ರೀ ನಾಗಪ್ಪ (ಮಂಡ್ಯ).—ಮಾನ್ಯ ಸಭಾಪತಿಗಳೇ, ನಮ್ಮ ಲೋಕೋಪಯೋಗಿ ಶಾಖೆಯ ಸಚಿವರು ಮಂಡಿಸಿರತಕ್ಕ ಬೇಡಿಕೆಗಳ ಬಗ್ಗೆ ನಾನು ಸ್ವಾಗತಿಸುತ್ತಾ ಒಂದೆರಡು ವಿಷಯಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನನಗೆ ತಾವು ಕೇವಲ ಐದು ನಿಮಿಷಗಳನ್ನು ಮಾತ್ರ ಕೊಟ್ಟಿರು, ತ್ತೀರಿ. ನನ್ನ ಮಿತ್ರರಲ್ಲಿ ಅನೇಕರು ಅನೇಕ ವಿಚಾರಗಳನ್ನು ಮಾತನಾಡಿದ್ದಾರೆ ನಾನು ನಮ್ಮ ಜಿಲ್ಲೆಗೆ ಸಂಬಂಧಪಟ್ಟಂಥ ಕೆಲವು ವಿಷಯಗಳನ್ನು ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮೊದಲ ಯದಾಗಿ ನಾನು ಹೋದಸಾರಿ ಇದೇ ಬಡ್ಜೆಟ್ ಸಂದರ್ಭದಲ್ಲಿ ಹೇಳಿದ್ದೇನೆ. ವಿಶ್ವೇಶ್ವರಯ್ಯ ನಾಲಾ ಪ್ರದೇಶಲ್ಲಿರತಕ್ಕ ಅಚ್ಚುಕಟ್ಟುಗಳ ಕೆರೆಗಳನ್ನು ಬ್ರೀಚ್ ಮಾಡಿದ್ದಾರೆ. ಈಗ ಆ ಮರ್ಯಾದೆಯ ಹೋಗಿದೆ. ಮಾನ್ಯ ಶ್ರೀ ಬೋರಯ್ಯನವರು ಹೇಳಿದಹಾಗೆ ವಿಶ್ವೇಶ್ವರಯ್ಯ ನಾಲಾ ಅಚ್ಚುಕಟ್ಟಿನಲ್ಲಿ ಇನ್ನೂ ಅಭಾವ ಇದೆ. ಅಲ್ಲಿರತಕ್ಕ ಅಭಾವವನ್ನು ನೀಗಿಸಬೇಕಾದರೆ ಆ ಕೆರೆಗಳನ್ನು ರೆಸ್ಟೋರ್ ಮಾಡುವುದು ಬಹಳ ಸೂಕ್ತವಾದ ಸಲಹೆ. ಅದನ್ನು ಆದಷ್ಟು ಜಾಗ್ರತೆಯಾಗಿ ಸರ್ಕಾರ ದವರು ಕಾರ್ಯಗತಮಾಡಬೇಕು. ಫೇಸ್ಟ್ ಪ್ರೋಗ್ರಾಂನಲ್ಲಿ ಎರಡು ಕೋಟಿ ರೂಪಾಯಿಗಳನ್ನು ತೆಗೆದುಕೊಂಡು 3-4 ವರ್ಷಗಳಿಂದಲೂ ಕೆರೆಗಳನ್ನು ಕಟ್ಟುತ್ತೇವೆಂದು ಹೇಳುತ್ತಿದ್ದರೂ ಅದರ ಬಗ್ಗೆ ಏನೂ ಮಾಡಿಲ್ಲ. ಆದ್ದರಿಂದ ಈಗಲಾದರೂ ಅದರ ಬಗ್ಗೆ ನಿರ್ದಿಷ್ಟವಾಗಿ ಗಮನಕೊಟ್ಟು ಆದಷ್ಟು ಬೇಗ ಆ ಕೆರೆಗಳನ್ನು ಕಟ್ಟಿಸಬೇಕು. ಕೆರೆಗಳನ್ನು ದುರಸ್ತುಮಾಡುವಾಗ ಅನೇಕ ಕೆರೆಗಳಲ್ಲಿ ಹೂಳು ತುಂಬಿ ಅವು ಮಣ್ಣಿನಿಂದ ಹೂತುಹೋಗಿವೆ. ಆದ್ದರಿಂದ ಆ ಹೂಳನ್ನು ತೆಗೆಸುವುದಕ್ಕೆ ಸರ್ಕಾರ ಕೂಡಲೇ ಗಮನಕೊಡಬೇಕು.

ಇನ್ನು ದೊಡ್ಡ ದೊಡ್ಡ ನೀರಾವರಿ ಯೋಜನೆಗಳ ಜೊತೆಗೆ ಸಣ್ಣ ಸಣ್ಣ ನೀರಾವರಿ ಯೋಜನೆ ಗಳಿಗೂ ಗಮನ ಕೊಡುವುದು ಸೂಕ್ತವೆಂದು ಕಾಣುತ್ತದೆ. ನಮ್ಮ ಜಿಲ್ಲೆಯ ರಸ್ತೆಗಳ ಬಗ್ಗೆ ಹೇಳುವುದಾದರೆ, ರಸ್ತೆಗಳು ಸಾಕಷ್ಟು ಇವೆ. ಅವುಗಳ ಸ್ಥಿತಿ ಏನಾಗಿದೆಯೆಂದರೆ ಬಹಳ ದುಸ್ಥಿತಿ ಯಲ್ಲಿವೆ. ಮೊದಲು ಸಕ್ಕರೆ ಕಂಪೆನಿಯವರು ಷುಗರ್‌ಕೇನ್ ಸೆಸ್ ತೆಗೆದುಕೊಂಡು ಅದರ ಮೇಂಟ ನೆನ್ಸ್ ಮಾಡುತ್ತಾ ಇದ್ದರು. ಜನರಲ್ ಬಡ್ಜೆಟ್ಟಿನಲ್ಲಿ ಅದನ್ನು ಸೇರಿಸಿಕೊಂಡು ಮೇಂಟೇನ್ ಮಾಡುವುದಕ್ಕೆ ಸಾಕಷ್ಟು ದುಡ್ಡು ಇಲ್ಲವೆಂದು ಇಲಾಖೆಯವರು ಹೇಳುತ್ತಾರೆ. ಈಗ ಎರಡು ಸಕ್ಕರೆ ಕಂಪೆನಿಗಳು ಪಾಂಡವಪುರ ಮತ್ತು ಮಂಡ್ಯಾಗಳಲ್ಲಿ ಇರುವುದರಿಂದ ಕಬ್ಬು ಸಾಗಿಸಬೇಕಾದರೆ ಬಹಳ ಕಷ್ಟವಾಗುತ್ತದೆ. ರಸ್ತೆಗಳು ಸುವ್ಯವಸ್ಥಿತ ರೀತಿಯಲ್ಲಿ ಇಲ್ಲದೇ ಹೋದರೆ ಕಬ್ಬು ಅತ್ತಕಡೆಗೆ ಸಾಗಿಸುವುದಕ್ಕೆ ಇನ್ನೂ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಈ ರಸ್ತೆಗಳನ್ನು ಚೆನ್ನಾಗಿ ಇಡಬೇಕು. ಏಕೆಂದರೆ ಈ ರಸ್ತೆಗಳು ಬಹಳವಾಗಿ ಹದಗೆಟ್ಟು ಹೋಗಿದೆ.

ಇನ್ನು ವಿಶ್ವೇಶ್ವರಯ್ಯ ಕೆನಾಲ್ ಏರಿಯಾದ ತುದಿಯ ನಾಲೆಗಳಲ್ಲಿ ನೀರಿಗೆ ತುಂಬಾ ಅಭಾವ ಇದೆ. ಸರ್ಕಾರದಲ್ಲಿ ಈ ವಿಚಾರವಾಗಿ ನಾನಾ ರೀತಿಯಲ್ಲಿ ಮನವಿಗಳನ್ನು ಕೊಟ್ಟು ಕೇಳಿಕೊಂಡಿ ದ್ದೇವೆ. ಅದರ ಬಗ್ಗೆ ಹೆಚ್ಚು ಗಮನಕೊಡಬೇಕೆಂದೂ ಹೇಳಿದ್ದೇವೆ. ಒಳಲು ಪಿಕಪ್ ವಿಷಯ ವಾಗಿ ಮಾನ್ಯ ಶ್ರೀ ಬೋರಯ್ಯನವರು ಹೇಳಿದಹಾಗೆ ಮೂರನೆಯ ಸ್ಟೇಜಿನಲ್ಲಿ 17ನೇ ಡಿಸ್ಟ್ರಿಬ್ಯೂಟ ರಿಯಲ್ಲಿ ನಿಂತಿದೆ. ಅದನ್ನು ಮುಂದುವರಿಸಿದರೆ ಬಹಳ ಒಳ್ಳೆಯದು, ಅನುಕೂಲವಾಗುತ್ತದೆ. ಆದ್ದರಿಂದ ಅದನ್ನು ಜಾಗ್ರತೆಯಾಗಿ ಮುಗಿಸುವುದು ಸೂಕ್ತ. ಅದರ ಕಡೆಗೆ ಸರ್ಕಾರದವರು ಹೆಚ್ಚಿಗೆ ಗಮನಕೊಡಬೇಕೆಂದು ಹೇಳಿ ನನಗೆ ಅಧ್ಯಕ್ಷರು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿ ದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಪಿ. ವಿ. ಐತಾಳ (ಸೂರತ್‌ಕಲ್).—ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಮಾನ್ಯ ಶ್ರೀ ಭಾಸ್ಕರಶೆಟ್ಟಿಯವರು ಅವರ ಭಾಷಣದಲ್ಲಿ Most uncharitable ಆಗಿ, Most ungratefull ಆಗಿ ಸೌತ್ ಕೆನರಾ ವಿಷಯದಲ್ಲಿ ಮಾತನಾಡಿದರು ಎಂಬುದಾಗಿ ಹೇಳಿದರು.

ನಾನು ಅದು ಸರಿಯಲ್ಲ ಎನ್ನುವುದನ್ನು ಪ್ರಥಮವಾಗಿ ಹೇಳುತ್ತೇನೆ. ಏಕೆಂದರೆ, ಈ ಸಲದ ರೂರಲ್ ಕಮ್ಯೂನಿಕೇಷನ್ ಪಟ್ಟಿ ನೋಡಿದರೆ ದಕ್ಷಿಣ ಕನ್ನಡಕ್ಕೆ ಬರೀ 42 ಮೈಲಿಗಳ ರಸ್ತೆ ಮಾಡುವ ಯೋಜನೆಯನ್ನೂ, ಗುಲ್ಬರ್ಗಾಕ್ಕೆ 140 ಮೈಲಿಗಳ ರಸ್ತೆ ಮಾಡುವ ಯೋಜನೆಯನ್ನೂ, ಧಾರವಾಡಕ್ಕೆ 120 ಮೈಲಿಗಳ ರಸ್ತೆ ಮಾಡುವ ಯೋಜನೆಯನ್ನೂ, ಬಿಜಾಪುರಕ್ಕೆ 120 ಮೈಲಿಗಳ ರಸ್ತೆ ಮಾಡುವ ಯೋಜನೆಯನ್ನೂ ಹಾಕಿಕೊಂಡಿರುವುದು ಗೊತ್ತಾಗುತ್ತದೆ. ಆದಕಾರಣ ಎಲ್ಲಿ ಲೋಕೋಪಯೋಗಿ ಶಾಖಾ ಸಚಿವರ ಪ್ರಭಾವ ಇದೆಯೋ ಅಂತಹ ಜಿಲ್ಲೆಗಳಿಗೆ ಮಾತ್ರ ಹೆಚ್ಚು ಮೈಲಿಗಳ ರಸ್ತೆ ಮಾಡಿಸಿ ನಮ್ಮ ಜಿಲ್ಲೆಯನ್ನು ಕಡೆಗಣಿಸಿದ್ದಾರೆಂದು ಮಾನ್ಯ ಶ್ರೀ ಭಾಸ್ಕರಶೆಟ್ಟಿಯವರು ಹೇಳಿದ್ದು ಸರಿಯೆಂದು ನಾನು ಹೇಳುತ್ತೇನೆ. ಅರ್ಥ ಮಂತ್ರಿಗಳು ಬೆಂಗಳೂರು ನಂತರ ಮಂಗಳೂರು ಈ ಸರ್ಕಾರದ ಬೊಕ್ಕಸವನ್ನು ಕೂಡಿಸುವುದರಲ್ಲಿ ಸಹಾಯಕವಾಗಿದೆ ಎಂದು ಹೇಳಿದರು. ಆದರೆ ಲೋಕೋಪಯೋಗಿ ಶಾಖಾ ಸಚಿವರು ಮಂಗಳೂರಿಗೆ ತಮ್ಮ ಇಲಾಖೆಯ ಬಾಬುಗಳಿಗಾಗಿ ಖರ್ಚು ಮಾಡಿರುವುದನ್ನು ನೋಡಿದರೆ ಸಂಸ್ಥಾನದಲ್ಲಿ ಮಂಗಳೂರು ಕೊನೆಯದು ಎಂದು ಹೇಳುವ ಹಾಗಾಗುತ್ತದೆ. ಇದು ಏನು ಅನ್ಯಾಯ ?

ಇನ್ನು ಕೃಷ್ಣಾ ಮತ್ತು ಗೋದಾವರಿ ನೀರಿನ ಹಂಚಿಕೆಯ ವಿಷಯವಾಗಿ ಬೇಕಾದಷ್ಟು ಭಾಷಣಗಳನ್ನು ವಿರೋಧ ಪಕ್ಷ ಮತ್ತು ಆಳುವ ಪಕ್ಷದವರು ಮಾಡಿದ್ದಾರೆ. ಮಾನ್ಯ ಶ್ರೀ ನಿಜಲಿಂಗಪ್ಪನವರು ತಮ್ಮ ರಾಜಕೀಯ ಮೇಲ್ಮೆಯನ್ನು ಹೊಂದುವುದಕ್ಕೋಸ್ಕರ ಈ ರಾಜ್ಯದ ಹಿತದೃಷ್ಟಿಯನ್ನು ಕಡೆಗಣಿಸುತ್ತಿದ್ದಾರೆಂದು ನಾನು ಒತ್ತಿ ಹೇಳಬೇಕಾಗಿದೆ. ಇದೀ ವಿಧಾನ ಸಭೆ ಕಳೆದ ಸಲವೇ ಒಂದು ನಿರ್ಣಯಮಾಡಿ ಕೃಷ್ಣಾ ಮತ್ತು ಗೋದಾವರಿ ನೀರಿನ ಹಂಚಿಕೆ ವಿಷಯದಲ್ಲಿ ಸರ್ಕಾರಕ್ಕೆ ಸಂಪೂರ್ಣ ಬೆಂಬಲವನ್ನು ಕೊಟ್ಟಿದ್ದರೂ, ಅ ಬಗ್ಗೆ ಆಶ್ವಾಸನೆಯನ್ನು ಕೊಟ್ಟಾಗ್ಯೂ ಕೂಡ ಮತ್ತು ಆ ವಿವಾದವನ್ನು ಬೇಗನೆ ಪರಿಹರಿಸುತ್ತೇವೆ ಎಂಬುದಾಗಿ ಭಾಷೆ ಕೊಟ್ಟಿದ್ದರೂ ಇದುವರೆಗೂ ಆ ವಿವಾದವನ್ನು ಇನ್ನೂ ಪರಿಹರಿಸದೆ ಎಸ್ ಮ್ಯಾನ್ ಪಾಲಿಸಿ ಹಾಕಿಕೊಂಡು ಇದ್ದಾರೆ. ಇವರು ಎಸ್ ಮ್ಯಾನ್ ಅಲ್ಲ. ಮಾನ್ಯ ಶ್ರೀ ಎಸ್. ನಿಜಲಿಂಗಪ್ಪನವರು, ಮಾನ್ಯ ಶ್ರೀ ಬ್ರಹ್ಮಾನಂದ ರೆಡ್ಡಿಯವರ ಶಿಫಾರಸು ಪಡೆಯಬೇಕು ಪೊಲಿಟಿಕಲ್ ಉನ್ನತಿಗಾಗಿ ಎಂದು ಹೇಳುವುದಾಗಿದೆ. ಈ ನೀರಿನ ಹಂಚಿಕೆಯಲ್ಲಿ ಸಮಾನವಾದ ಹಕ್ಕನ್ನು ಪಡೆಯಲು ಈ ಎಸ್ ಮ್ಯಾನ್ ಅವರು ಶ್ರೀ ಚವಾಣರ ಬೆಂಬಲ ಪಡೆಯಬೇಕು, ಮಾನ್ಯ ಶ್ರೀ ವಿ. ಪಿ. ನಾಯಕ್ ಅವರ ಬೆಂಬಲ ಪಡೆಯಬೇಕು. ಈಗಾಗಲೇ ಕಾಸರಗೋಡನ್ನು ಬಲಿದಾನ ಕೊಟ್ಟಿದ್ದಾರೆ. ಇತ್ತಲಾಗಿ ಬಾರ್ಡರ್ ವಿಚಾರವಾಗಿ ಮಹಾಜನ್ ಕಮಿಷನ್ ಅವರ ವರದಿ ಪ್ರಕಾರ ಬಿಡುವುದಿಲ್ಲ, ತಮ್ಮ ಪೊಲಿಟಿಕಲ್ ಅಪ್‌ಲಿಫ್ಟ್ ಆಗಬೇಕು, ನಮ್ಮ ಸ್ಟೇಟ್ ಪಾತಾಳಕ್ಕೆ ಹೋದರೂ ಚಿಂತೆ ಇಲ್ಲ, ತನ್ನ ಪ್ರಗತಿಯಾಗಬೇಕೆಂದು ಹೇಳಿದ್ದಾರೆ.

ಇನ್ನು ಮೂರನೆಯ ವಿಷಯ ಭಾಷಾ ಪ್ರಶ್ನೆ.

Mr. CHAIRMAN.—The member can take some other occasion for that.

Sri P. V. AITHALA.—I am making passing reference to it.

ನಾನಿನ್ನು ಭಾಷೆಯ ಬಗ್ಗೆ ಒಂದು ಮಾತನ್ನು ಹೇಳಬೇಕಾಗಿದೆ ಇಲ್ಲಿಯವರೆಗೆ ನಮ್ಮ ಜಿಲ್ಲೆಯಲ್ಲಿ ಏನೇನು ಅನುಕೂಲಗಳು ನಡೆದಿವೆಯೋ ಆ ಜಾಗಗಳೆಲ್ಲ ಕಾಂಗ್ರೆಸ್ಸಿನವರು ಆರಿಸಿ ಬಂದಿರುವಂಥ ಕ್ಷೇತ್ರಗಳಾಗಿವೆ. ಒಂದು ಮೈನರ್ ಇರಿಗೇಷನ್ ಕೆಲಸವನ್ನು ತೆಗೆದುಕೊಳ್ಳಲಿ—ಒಂದು ರಸ್ತೆಯ ಕೆಲಸವನ್ನು ತೆಗೆದುಕೊಳ್ಳಲಿ ಹೀಗೆ ಯಾವುದನ್ನೇ ತೆಗೆದುಕೊಂಡರೂ ಆ ಕಾರ್ಯಗಳೆಲ್ಲಾ ಕಾಂಗ್ರೆಸ್ಸಿನವರು ಆರಿಸಿ ಬಂದಿರತಕ್ಕ ಸ್ಥಳಗಳೇ ಆಗಿವೆ. ಶ್ರೀಮತಿ ಲೀಲಾವತಿ ರೈ ಅವರು ಆರಿಸಿ ಬಂದಿರತಕ್ಕ ಜಾಗದಲ್ಲಿ ಒಂದು ಲಕ್ಷ ರೂಪಾಯಿನಲ್ಲಿ ಒಂದು ನೀರಾವರಿ ಕೆಲಸವನ್ನು ಮಾಡಿಸಿದ್ದಾರೆ.

6-30 P. M.

Minor irrigation Schemes—statement of works costing above one lakh proposed to be taken up.

1. Bantwal—vented dam Smt. Leelavathi Rai.
2. Puttur—Sri Vithaldas Setty.
3. Belthangady—Speaker, Sri B. V. Baliga.

(SRI P. V. AITHAL)

ನಮ್ಮ ಜಿಲ್ಲೆಯಲ್ಲಿರತಕ್ಕ 23 ಕ್ಷೇತ್ರಗಳಿಗೆ ಯಾರಾದರೂ ಬರಲಿ ನಾನು ಅವರನ್ನು ಕರೆದುಕೊಂಡು ಹೋಗಿ ತೋರಿಸುತ್ತೇನೆ. ಅಲ್ಲಿ ಕಾಂಗ್ರೆಸ್ಸೇತರ ಸದಸ್ಯರು ಬಂದಿರುವ ಜಾಗದಲ್ಲಿ ಯಾವ ಒಂದು ಅನುಕೂಲಗಳನ್ನೂ ಮಾಡಿಸಿಲ್ಲ. ನನ್ನಲ್ಲಿ ತಾರೀಖು 17—3—68ರ ಒಂದು ಸ್ಟೇಟ್‌ಮೆಂಟ್ ಸಿಕ್ಕಿದೆ. ಅದರಲ್ಲಿ ಇವೆಲ್ಲಾ ವಿಚಾರಗಳೂ ಇವೆ. ನಾನು ನಮ್ಮ ಪಿ.ಡಬ್ಲ್ಯು.ಡಿ. ಮಂತ್ರಿಗಳಿಗೆ ಅನೇಕಾವರ್ತಿ ಪತ್ರಗಳನ್ನು ಬರೆದಿದ್ದೇನೆ—ಈ 20ನೇ ಶತಮಾನದಲ್ಲೂ ನಮ್ಮ ಕಡೆ ಹಳ್ಳಿಯ ಕೆಲವು ಹುಡುಗರು ಮಳೆಗಾಲದಲ್ಲಿ ತಿಂಗಳಿಗೆ 25 ರೂಪಾಯಿಗಳನ್ನು ಕೊಟ್ಟು ದೋಣಿಯಲ್ಲಿ ಶಾಲೆಗೆ ಹೋಗತಕ್ಕ ಪರಿಸ್ಥಿತಿ ಬಂದಿದೆ. ಇದನ್ನು ತಪ್ಪಿಸಲು ಅಲ್ಲಿ ಒಂದು ಸಣ್ಣ ಸೇತುವೆಯನ್ನು ಮಾಡಿಸಿ ಕೊಡಿ ಎಂದು. ಇಷ್ಟು ದಿನಗಳು ಕಳೆದಿದ್ದಾಗ್ಯೂ ನಮ್ಮ ಮಂತ್ರಿಗಳು ಅದಕ್ಕಿನ್ನೂ under examination ಎಂದು ಹೇಳುತ್ತಿದ್ದಾರೆ. ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡತಕ್ಕ ಈ ಸರ್ಕಾರಕ್ಕೆ ಶಾಲೆಗೆ ಹೋಗತಕ್ಕ ಶಾಲಾಬಾಲಕರಿಗೆ ದೋಣಿಯಲ್ಲಿ ಹೋಗತಕದ್ದನ್ನು ತಪ್ಪಿಸಿ ಎಂದರೆ ಅದಕ್ಕೆ ಇನ್ನೂ ಅವಕಾಶವಾಗಿಲ್ಲ. ಆ ಬಾಲಕರು ತಿಂಗಳಿಗೆ 25 ರೂಪಾಯಿಗಳನ್ನು ಕೊಡತಕ್ಕದ್ದು ತಪ್ಪಲಿಲ್ಲ. ಅಲ್ಲಿ ಹೀಗೇ ಇನ್ನು ಒಂದು ಸಣ್ಣ ಸೇತುವೆ ಒಂದು ಗ್ರಾಮದ ಹತ್ತಿರ ಆಗಬೇಕಾಗಿತ್ತು. ಅದಕ್ಕೆ 20 ಸಾವಿರ ಖರ್ಚಾಗಿದ್ದರೆ ಹೆಚ್ಚಿತ್ತು; ಅದನ್ನೂ ಸಹಾ ಮಾಡ ಲಿಲ್ಲ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಅಭಿವೃದ್ಧಿ ಆ ಶ್ರೀನಿವಾಸ ಮಲ್ಯರಿದ್ದ ಕಾಲಕ್ಕೆ ಮುಗಿಯಿತು. ಅಲ್ಲಿಂದೀಚೆಗೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಯಾವ ಒಂದು ಅಂಥಾ ಹೆಚ್ಚಿನ ಅಭಿವೃದ್ಧಿ ಕೆಲಸ ಗಳಾಗಲಿಲ್ಲ. ಅವರು ಕೇಂದ್ರದಲ್ಲಿ ತಾವು ಪಾರ್ಲಿಮೆಂಟಿನ ಸದಸ್ಯರಿದ್ದಾಗ ನಮ್ಮ ಜಿಲ್ಲೆಗೆ ಕೆಲವು ಅನುಕೂಲತೆಗಳನ್ನು ಮಾಡಿಸಲು ಅವರು. ಮಾಡಿದ ಪ್ರಯತ್ನಗಳಿಂದ ಅಲ್ಲಿ ಅಷ್ಟಿಷ್ಟು ಕೆಲಸಗಳಾ ದವು. ಅದನ್ನು ನಮ್ಮ ರಾಜ್ಯ ಸರ್ಕಾರದವರು ನಾವು ಮಾಡಿಸಿದ್ದು ಎಂದು ಇಂದು ಸ್ಟಂಟ್‌ಮಾಡು ತ್ತಿದ್ದಾರೆ. ಅವರು ದಿವಂಗತರಾದ ಮೇಲೆ ನಮ್ಮ ಜಿಲ್ಲೆಯ ಕಾಂಗ್ರೆಸ್ ಸದಸ್ಯರಿಗೆ ನಮ್ಮ ಜಿಲ್ಲೆಗೆ ಒಬ್ಬ ಮಂತ್ರಿಗಳನ್ನು ಮಾಡುವಂತೆ ಮಾಡಲು ಅವರಿಗೆ ಶಕ್ತಿಯಿಲ್ಲ. ಹಾಗೆ ಅವರಿಗೆ ಈ ಕೆಲಸ ಮಾಡುವುದಕ್ಕೆ ಶಕ್ತಿ ಇಲ್ಲವೆನ್ನುವುದಾದರೆ ಅವರು ಇಂದೇ ಆ ಕಾಂಗ್ರೆಸ್‌ಗೆ ರಾಜೀನಾಮೆ ಇತ್ತು ಇತ್ತ ಕಡೆಗೆ ಬನ್ನಿ ಎಂದು ಹೇಳುತ್ತೇನೆ.........

ಚೇರ್ಮೆನ್ ಅವರು.—ಈಗ ಶ್ರೀ ಬಿ. ನಂಜಪ್ಪನವರು ಮಾತನಾಡಬಹುದು.

† ಶ್ರೀ ಬಿ. ನಂಜಪ್ಪ (ಗಂಡಸಿ).—ಮಾನ್ಯ ಸಭಾಪತಿಗಳೇ, ನಮ್ಮ ಲೋಕೋಪಯೋಗಿ ಶಾಖೆಯ ಸಚಿವರು ಮಂಡಿಸಿರತಕ್ಕ 91 ಕೋಟಿ ಚಿಲ್ಲರೆಯ ಬಜೆಟ್ಟನ್ನು ನಾನು ಅನುಮೋದಿಸುತ್ತ ಕೆಲವು ವಿಷಯಗಳನ್ನು ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಸ್ವಾಮಿ, ಹಾಸನ ಜಿಲ್ಲೆಯಲ್ಲಿ ಅನೇ ದಿವಸಗಳಿಂದಲೂ ಕೂಡ ಹೇಮಾವತಿ ಮತ್ತು ಯಗಚಿ ಹೊಳೆ ಪ್ರಾಜೆಕ್ಟ್‌ಗಳನ್ನು ಮಾಡಿಸಿಕೊಡಬೇಕೆಂದು ಸರ್ಕಾರದವರನ್ನು ಒತ್ತಾಯ ಮಾಡುತ್ತಲೇ ಬಂದಿದ್ದೇವೆ. ಈಗೇನೋ ಆ ಹೇಮಾವತಿ ಕೆಲಸವು ಪ್ರಾರಂಭವಾಗಿದ್ದರೂ ಅದು ಜರೂರಾಗಿ ಕೆಲಸ ವಾಗುತ್ತಿಲ್ಲ. ಅಲ್ಲಿ ಕೆಲಸಗಳು ಬಹಳ ನಿಧಾನದಿಂದ ನಡೆಯುತ್ತಿವೆ. ಆ ಕಾರ್ಯವನ್ನು ಅತಿ ಜರೂರಾಗಿ ಮಾಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಆ ಯುಗಚಿ ಪ್ರಾಜೆಕ್ಟಿಗೆ ಕೇವಲ ಒಂದು ಲಕ್ಷ ರೂಪಾಯಿಗಳನ್ನು ತೆಗೆದಿಟ್ಟಿದ್ದಾರೆ. ಇದನ್ನು ಯಾವ ಉದ್ದೇಶಕ್ಕಾಗಿ ತೆಗೆದಿಟ್ಟಿ ದ್ದಾರೋ ಅದು ಗೊತ್ತಿಲ್ಲ. ಅಂತೂ ಆ ಹಣ ಅದಕ್ಕೆ ಸಾಲದು. ಈ ಕೆಲಸಕ್ಕೂ ಕೂಡ ಹೆಚ್ಚಿನ ಹಣವನ್ನು ಒದಗಿಸಿ ಈ ಕಾರ್ಯವನ್ನೂ ಕೂಡ ಅತಿ ಜರೂರಾಗಿ ಮಾಡಿಸಿಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ. ಯಗಚಿ ಹೊಳೆಯಿಂದ ಹಾಸನ ಜಿಲ್ಲೆಯಲ್ಲಿ 33 ಸಾವಿರ ಎಕರೆಗಳು ಮಾತ್ರ ನೀರಾವರಿಗೆ ಒಳಪಡುತ್ತೆ. ಹಾಸನ ತಾಲ್ಲೂಕಿನಲ್ಲಿ ಅರೆವಾಸಿಗಿಂತ ಇನ್ನೂ ಹೆಚ್ಚು ಭಾಗ ಇರಿಗೇಷ ನ್‌ಗೆ ಬರುತ್ತದೆ, ಅದನ್ನು ಇನ್‌ವೆಸ್ಟಿಗೇಟ್ ಮಾಡಬೇಕೆಂದು ನಾವು ಪದೇ ಪದೇ ಒತ್ತಾಯ ಮಾಡು ತ್ತಿದ್ದರೂ ಸ್ಥಳೀಯ ಅಧಿಕಾರಿಗಳು ಅಲ್ಲಿ ಇನ್‌ವೆಸ್ಟಿಗೇಟ್ ಮಾಡುವುದಕ್ಕೆ ಮುಂದೆ ಬರುತ್ತಿಲ್ಲ. ಇದನ್ನು ಜರೂರಾಗಿ ಮಾಡಿಸಿಕೊಡಬೇಕೆಂದು ಒತ್ತಾಯ ಮಾಡುತ್ತೇನೆ. ನಮ್ಮ ಹಾಸನ ಜಿಲ್ಲೆ ಯಲ್ಲಿ ಅದರಲ್ಲೂ ಹಾಸನ ತಾಲ್ಲೂಕಿನಲ್ಲ ಕಟ್ಟಲ್ಪಟ್ಟಿರತಕ್ಕ ಮೈನರ್ ಇರಿಗೇಷನ್ ಜಲಾಶಯಗಳೇನಿವೆ ಅವುಗಳನ್ನು ಕಟ್ಟಿ ನೂರಾರು ವರ್ಷಗಳಾಗಿವೆ. ಕೆರೆಯ ಮೇಲ್ಭಾಗದಿಂದ ಬರತಕ್ಕ ಮೆಕ್ಕಲು ಮಣ್ಣು ಏನಿದೆ ಅದು ಬಂದು ಕೆರೆಗಳೆಲ್ಲಾ ಸಿಲ್ಟಪ್ ಆಗಿವೆ. ಹಾಗೆ ಬರತಕ್ಕ ಸಿಲ್ಟನ್ನು ಅರೆಸ್ಟು ಮಾಡುವುದಕ್ಕೆ ಒಂದು ಸಾಮೂಹಿಕ ಸರ್ವೆ ಮಾಡಿಸತಕ್ಕ ಕೆಲಸ ಬಹಳ ಮುಖ್ಯವಾದದ್ದು ಈ ಕಾರ್ಯ ವನ್ನು ಸಾಮೂಹಿಕವಾಗಿ ಕೈಗೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ. ಇನ್ನು ನೀರಿನ ಹಂಚಿಕೆ ವಿಷಯಕ್ಕೆ ಬಂದರೆ ನೀರು ಹೆಚ್ಚಾಗಿ ಪೋಲಾಗುತ್ತಿದೆ. ಆ ನೀರು ಗಂಟಿಗಳು ಸರಿಯಾಗಿ ಕೆಲಸ

ಮಾಡುತ್ತಿಲ್ಲ. ಆದುದರಿಂದ ಇವರನ್ನು ತೆಗೆದುಹಾಕಿ ಖಾಯಂ ಆಗಿ ಆ ನಾಲೆಗಳಿಗೆ ನೇಮಕವಾಗಿರತಕ್ಕ ಸೌಡಿಗಳನ್ನು ನೇಮಿಸಿ ನೀರನ್ನು ರೆಗ್ಯುಲೇಟ್ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಇನ್ನು ನಮ್ಮ ಹಾಸನ ಜಿಲ್ಲೆಯಲ್ಲಿರತಕ್ಕ ಸುಮಾರು 10 ಸಾವಿರ ಮೈನರ್ ಇರಿಗೇಷನ್ ಕೆರೆಗಳ ಅಭಿವೃದ್ಧಿಯ ಕೆಲಸ ಈ ದಿವಸ ತಾಲ್ಲೂಕ್ ಬೋರ್ಡಿಗೆ ವಹಿಸಲಾಗಿದೆ. ಆ ಮಂಡಳಿಯಲ್ಲಿ ಈ ಬಾಬಿಗೆ ಸಾಕಾಗುವಷ್ಟು ಹಣವಿಲ್ಲ. ಆದುದರಿಂದ ಈ ಬಾಬಿಗೂ ಹೆಚ್ಚಿನ ಹಣವನ್ನು ಒದಗಿಸಬೇಕೆಂದು ಒತ್ತಾಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನು ರೈತರ ಬಾವಿಗಳಿಗೆ ಪಂಪ್‌ಸೆಟ್ಟನ್ನು ಅಳವಡಿಸಿಕೊಳ್ಳತಕ್ಕ ಬಗ್ಗೆ ಈಗ ಹಣವನ್ನು ಅಗ್ರಿಕಲ್ಚರಲ್ ಇಂಡಿಸ್ಟ್ರಿಯಲ್ ಕಾರ್ಪೊರೇಷನ್ ಮತ್ತು ಅಡಮಾನ ಬ್ಯಾಂಕುಗಳ ಮೂಲಕ ಒದಗಿಸಲಾಗುತ್ತಿದೆ. ಆದರೆ ಜಮೀನು ಅಡಮಾನ ಬ್ಯಾಂಕಿನವರು ಅವರು ಕೊಡತಕ್ಕ ಸಾಲದ ಹಣದ ನಾಲ್ಕನೇ ಒಂದು ಭಾಗದಷ್ಟು ಸೆಕ್ಯೂರಿಟಿ ಕೊಡಬೇಕೆಂದು ಒತ್ತಾಯ ಮಾಡುತ್ತಿದ್ದಾರೆ. ಆದರೆ ಆ ರೈತನ ಜಮೀನುಗಳು ಇನ್ನಿತರೇ ಸಾಲಗಳಿಗಾಗಲೇ ಆಧಾರವಾಗಿರುತ್ತದೆ. ಹೀಗಾಗಿ ರೈತನಿಗೆ ಸಾಲ ಸಿಕ್ಕುವುದು ಬಹಳ ಕಷ್ಟವಾಗಿದೆ. ಆದುದರಿಂದ ರೈತರಿಗೆ ಪಂಪ್‌ಸೆಟ್ಟುಗಳನ್ನು ಅಗ್ರಿಕಲ್ಚರ್ ಇಲಾಖೆಯ ಮೂಲಕ ಹೈರ್‌ಪರ್ಚೇಸ್ ಸಿಸ್ಟಂ ಪ್ರಕಾರ ಒದಗಿಸುವುದಕ್ಕೆ ಏರ್ಪಾಡು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಇನ್ನು ಲಿಫ್ಟ್ ಇರಿಗೇಷನ್ ವಿಚಾರಕ್ಕೆ ಬಂದರೆ ಇದೇ ವಿಚಾರದಲ್ಲಿ ನಾನು ಒಂದು ಪ್ರಶ್ನೆಯನ್ನು ಸಹಾ ಕಳುಹಿಸಿದ್ದೆನು. ಆ ಯಗಚಿ ನದಿಯ ದಂಡೆಯಲ್ಲಿ 12 ಕಡೆಗಳಲ್ಲಿ ಈ ಸ್ಕೀಮನ್ನು ಕೈಗೊಳ್ಳುವುದಕ್ಕೆ ಹಿಂದೆ ಇದ್ದ ಶ್ರೀಮತಿ ಯಶೋದಮ್ಮ ದಾಸಪ್ಪನವರಿದ್ದ ಕಾಲದಲ್ಲಿ ಅಳತೆ ಸಹಾ ಮಾಡಿಸಿದ್ದರು. ಈಗಲಾದರೂ ಅದನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿ ಅದನ್ನು ಕಾರ್ಯರೂಪಕ್ಕೆ ತರಬೇಕೆಂದು ಹೇಳುತ್ತೇನೆ. ಆದರೆ ಸರ್ಕಾರದವರು ಅಂಥಾ ಯಾವ ಸ್ಕೀಮೂ ನಮ್ಮಲಿಲ್ಲ ಎಂದು ಹೇಳುತ್ತಿರುವುದು ಬಹಳ ಆಶ್ಚರ್ಯ. ಆದ್ದರಿಂದ ಮಾನ್ಯ ಮಂತ್ರಿಗಳು ಅದಕ್ಕೆ ಸಂಬಂಧಪಟ್ಟ ರೆಕಾರ್ಡ್ ಎಲ್ಲಿದೆ ಎಂಬುದನ್ನು ತಕ್ಷಣ ಹುಡುಕಿ ತರಿಸಿ ಅದನ್ನು ಕೂಲಂಕಷವಾಗಿ ಪರಿಶೀಲನೆಮಾಡಿ ಆದಷ್ಟು ಜಾಗ್ರತೆ ಲಿಫ್ಟ್ ಇರಿಗೇಷನ್ ಯೋಜನೆಗಳನ್ನು ಮಂಜೂರು ಮಾಡಬೇಕು. ಅದರಿಂದ ಹೆಚ್ಚು ಹೆಚ್ಚು ಜಮೀನು ನೀರಾವರಿಗೆ ಒಳಪಡುವಂತೆ ಮಾಡಬೇಕೆಂದು ನಾನು ತಮ್ಮನ್ನು ಒತ್ತಾಯ ಮಾಡುತ್ತೇನೆ. ಇಷ್ಟು ಹೇಳಿ ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡರು.—ಮಾನ್ಯ ಅಧ್ಯಕ್ಷರೇ, ನಮ್ಮ ಲೋಕೋಪಯೋಗಿ ಖಾತೆಯ ಸಚಿವರು ಬಹಳ ಅದೃಷ್ಟವಂತರು. ಏತಕ್ಕೆಂದರೆ ರಾಜ್ಯದ ಭವಿಷ್ಯವನ್ನು ರೂಪಿಸತಕ್ಕಂಥ ಮುಖ್ಯವಾದಂತಹ ಖಾತೆಯನ್ನು ಅವರು ವಹಿಸಿಕೊಂಡಿದ್ದಾರೆ. ಅಷ್ಟೇ ಅಲ್ಲ. ಒಟ್ಟು ನಮ್ಮ ಆಯವ್ಯಯದಲ್ಲಿರತಕ್ಕ ಹಣದಲ್ಲಿ ಅರ್ಧಭಾಗದ ಹಣವನ್ನು ಖರ್ಚು ಮಾಡತಕ್ಕ ಅವಕಾಶ ಅವರಿಗೆ ಇದೆ. ಇಂಥಾ ಒಂದು ದೊಡ್ಡ ಜವಾಬ್ದಾರಿಯನ್ನು ಹೊತ್ತಿರತಕ್ಕ ಮಂತ್ರಿಗಳು ಆಡಳಿತದ ಮೇಲೆ ಬಹಳ ಭದ್ರ ಹಿಡಿತವನ್ನು ಇಟ್ಟುಕೊಂಡಿರಬೇಕು. ಎಲ್ಲಾ ಪ್ರಾಮಾಣಿಕತೆಯಿಂದ ಎಲ್ಲರಿಗೂ ಸ್ಪಷ್ಟವಾಗಿ ಕಾಣುವಹಾಗೆ ಕೆಲಸ ಕಾರ್ಯಗಳನ್ನು ಕೈಗೊಳ್ಳಬೇಕು. ಅವರಿಗೆ ಸರ್ವಸಮಾನವಾದ ದೃಷ್ಟಿ ಇರಬೇಕು. ಇದು ಜನಸಾಮಾನ್ಯರ ಮನಸ್ಸಿಗೆ ಬಂದು ಈ ಖಾತೆ ಸಮರ್ಪಕವಾಗಿ ಕೆಲಸ ಮಾಡುತ್ತದೆ, ನಮ್ಮ ಜನಗಳ ಪುರೋಭಿವೃದ್ಧಿ ಆಗುತ್ತಿದೆ ಎನ್ನತಕ್ಕಂಥ ಆಶೆ ಅವರಿಗೆ ಹುಟ್ಟುವಹಾಗೆ ಆಗಬೇಕು ಎನ್ನುವುದು ನನ್ನ ಆಶೆ. ಈ ಇಲಾಖೆಯಲ್ಲಿ ಎಲ್ಲಿ ನೋಡಿದರೂ ಭ್ರಷ್ಟಾಚಾರದ ಹೆಸರು ಕೇಳಿ ಬರುತ್ತಿದೆ. ಎಲ್ಲಿ ನೋಡಿದರೂ ಸ್ವಜನ ಪಕ್ಷಪಾತ, ಜಾತೀಯತೆಯ ವಿಷಯಗಳನ್ನು ಹೇಳತಕ್ಕಂಥ ಪರಿಸ್ಥಿತಿ ಬಂದಿದೆ. ಆ ಕಡೆ ಗಮನ ಕೊಡಬೇಕು. ನಾನು ಇಷ್ಟು ಮಾತ್ರ ಹೇಳುತ್ತೇನೆ, ಮುಖ್ಯವಾಗಿ ಈ ಖಾತೆಯಲ್ಲಿ ಜನಗಳಿಗೆ ಅನುಮಾನ ಹುಟ್ಟುವಹಾಗೆ ನಡೆದುಕೊಳ್ಳುವುದಕ್ಕೆ ಅವಕಾಶವನ್ನು ಕೊಡಬಾರದು ಎಂದು ನಾನು ಅವರನ್ನು ಕೇಳಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಈ ಆಯವ್ಯಯ ಮುಂಗಡ ಪತ್ರವನ್ನು ತಯಾರಿಸತಕ್ಕದ್ದರಲ್ಲಿ ಸಾಮಾನ್ಯ ಅಭಿವೃದ್ಧಿಗೆ ಸಂಬಂಧಪಟ್ಟ ಕೆಲಸ ಕಾರ್ಯಗಳಲ್ಲಿ ಒಂದು ಲಕ್ಷಕ್ಕಿಂತ ಹೆಚ್ಚು ಅಂದಾಜಾಗಿರತಕ್ಕ ಮೊಬಲಗನ್ನು ಒಳಗೊಂಡ ಕೆಲಸ ಮಾತ್ರ ಇದರೊಳಗೆ ಬರುತ್ತವೆ. ಮೊದಲು ಎಷ್ಟೇ ಕೆಲಸ ಕಾರ್ಯಗಳಾಗಲೀ ಹೊಸ ನೀರಾವರಿ ಕಾಮಗಾರಿಗಳನ್ನು ತೆಗೆದುಕೊಂಡಂಥ ಎಲ್ಲಾ ಕೆಲಸಗಳೂ ಇದರಲ್ಲಿ ನಮೂದಾಗುತ್ತಿದ್ದವು. ಈಗ ಅದಕ್ಕೆ ಅವಕಾಶವಿಲ್ಲದಂತಾಗಿದೆ. ಆದ್ದರಿಂದ ಆ ವಿಷಯವನ್ನು ಮುಂಗಡ ಪತ್ರದಲ್ಲಿ ಕೊಡುವುದಕ್ಕೆ ಸಾಧ್ಯವಿಲ್ಲದಿದ್ದರೂ ಕೂಡ ಈ ಖಾತೆಯ ಚರ್ಚೆ ಆಗುವುದಕ್ಕೆ ಮುಂಚೆ ಯಾವ ಯಾವ ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ಇದ್ದಾರೋ ಅಂಥವುಗಳ ಒಂದು ಪಟ್ಟಿಮಾಡಿ ಅದನ್ನು ಈ ಸಭೆಯ ಎಲ್ಲಾ ಮಾನ್ಯ ಸದಸ್ಯರಿಗೂ ಒದಗಿಸುವುದು ಅವಶ್ಯಕ. ಅದನ್ನು ಮಾಡ

(ಶ್ರೀ ಎನ್. ಹುಚ್ಚಮಾಸ್ತಿ ಗೌಡ)

ಬೇಕು ಎಂದು ನಾನು ಸೂಚಿಸುವುದಕ್ಕೆ ಇಷ್ಟಪಡುತ್ತೇನೆ. ಈ ವರ್ಷ 15—2—1968ರಲ್ಲಿ ಇಡೀ ರಾಜ್ಯದ ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಕೆಲಸಗಳನ್ನು ತೆಗೆದುಕೊಳ್ಳಬೇಕು ಎನ್ನುವ ವಿಷಯದಲ್ಲಿ ಒಂದು ಪಟ್ಟಿ ತಯಾರಾಗಿದೆ. ಆ ಪಟ್ಟಿಯನ್ನು ನೋಡಬೇಕು, ಯಾವ ಯಾವ ಕೆಲಸ ಗಳನ್ನು ತೆಗೆದುಕೊಂಡಿದ್ದಾರೆ ಎಂಬುದನ್ನು ಪರಿಶೀಲನೆ ಮಾಡಬೇಕೆಂದು ಆ ಪಟ್ಟಿಯನ್ನು ಕೊಡಿ ಎಂದು ಈ ಇಲಾಖೆಗೆ ಸಂಬಂಧಪಟ್ಟ ಮಂತ್ರಿಗಳನ್ನು ಕೇಳಿಕೊಂಡೆ, ಇಲಾಖೆಯ ಅಧಿಕಾರಿಗಳನ್ನು ಕೇಳಿಕೊಂಡೆ ನನಗೆ ಅದು ದೊರೆಯಲಿಲ್ಲ. ಇದರಲ್ಲಿ ಸ್ಪಷ್ಟವಾಗಿ ನನಗೆ ಬಂದಿರುವ ವರ್ತಮಾನದ ಪ್ರಕಾರ ಪಕ್ಷಪಾತ ಎನ್ನುವುದು ಎದ್ದು ಕಾಣುವ ಹಾಗೆ ಕೆಲಸಗಳನ್ನು ತೆಗೆದುಕೊಳ್ಳಲು ಕೈಗೊಂಡಿ ದ್ದಾರೆ. ಒಂದು ಲಕ್ಷ ರೂಪಾಯಿಗಳಿಗಿಂತ ಹೆಚ್ಚು ಇರತಕ್ಕ ಕೆಲಸಗಳನ್ನು 15—2—1968ರಲ್ಲಿ ಮಾಡೀ ಪಟ್ಟಿಯ ಪ್ರಕಾರ ತೆಗೆದುಕೊಂಡಲ್ಲಿ ಈ ರಾಜ್ಯದ ಅರ್ಧಭಾಗದ ಪ್ರದೇಶವಾದ ಹಳೆಯ ಮೈಸೂರಿಗೆ 58 ಲಕ್ಷ ರೂಪಾಯಿಗಳನ್ನು ಖರ್ಚು ಮಾಡತಕ್ಕ ಉದ್ದೇಶವನ್ನು ಇಟ್ಟುಕೊಂಡಿದ್ದಾರೆ. ಇನ್ನು ಉಳಿದ ಅರ್ಧಭಾಗಕ್ಕೆ 228 ಲಕ್ಷ ರೂಪಾಯಿಗಳನ್ನು ಖರ್ಚು ಮಾಡತಕ್ಕ ಉದ್ದೇಶವನ್ನಿಟ್ಟು ಕೊಂಡಿದ್ದಾರೆಂದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಉತ್ತರ ಕರ್ಣಾಟಕದ ಕಾಂಗ್ರೆಸ್ ಸದಸ್ಯ ರೊಬ್ಬರು ಮಾತನಾಡಿ ರಾಜ್ಯಪುನರ್ವಿಂಗಡಣೆಗೆ ಮುಂಚೆ ಸುಖವಾಗಿದ್ದೇವೆಂದು ಹೇಳಿದರಂತೆ. ಈ ಪಟ್ಟಿಯನ್ನು ನೋಡಿದರೆ ಈ ಬಗ್ಗೆ ಹಿಂದೆ ಮಾತನಾಡಿದ ಕಾಂಗ್ರೆಸ್ ಸದಸ್ಯರಿಗೆ ರಾಜ್ಯದ ಪುನರ್ವಿಂಗಡಣೆ ಆಗುವುದಕ್ಕೆ ಮುಂಚೆ ಸುಖವಾಗಿತ್ತೋ, ಈಗ ಯಾರ್ಯಾರಿಗೆ ಎಷ್ಟೆಷ್ಟು ಸುಖ ವಾಗಿದೆ ಎಂಬುದು ಅವರಿಗೇ ಗೊತ್ತಾಗುತ್ತದೆ. ಒಂದು ಲಕ್ಷ ರೂಪಾಯಿಗಳಿಗೆ ಕಡಿಮೆ ಇರುವ ಕೆಲಸಗಳ ಪಟ್ಟಿಯನ್ನು ನೋಡಿದರೆ ಸಮಾಧಾನ ಎಷ್ಟಗವಟ್ಟಿಗೆ ಯಾರು ಯಾರಿಗೆ ಆಗುತ್ತದೆ ಎಂಬುದು ಅದರಿಂದ ಸ್ಪಷ್ಟವಾಗಬಹುದು, ಆದರೆ ಆ ಪಟ್ಟಿ ನನ್ನಲಿಲ್ಲ. ಆಯುವ್ಯಯ ಮುಂಗಡ ಪತ್ರ ಕೈಗನ್ನಡಿಯಾಗಿರಬೇಕು. ಈ ಸಭೆಯ ಮಾನ್ಯ ಸದಸ್ಯರಿಗೆ ಮತ್ತು ಇಡೀ ರಾಜ್ಯದ ಜನಗಳಿಗೆ ಇಂತಿಂಥಾ ಕೆಲಸಗಳನ್ನು ಇಂತಿಂಥಾ ಭಾಗಗಳಲ್ಲಿ ತೆಗೆದುಕೊಳ್ಳುತ್ತೇವೆ, ಆ ಕೆಲಸಗಳಿಗೆ ಇಷ್ಟಿಷ್ಟು ಹಣವನ್ನು ಒದಗಿಸಿದೆ ಎನ್ನುವುದು ಸ್ಪಷ್ಟವಾಗಿ ಗೊತ್ತಾಗಬೇಕು. ಈಗ ಆ ಕೆಲಸಗಳನ್ನು ಮಾನ್ಯ ಸದಸ್ಯರ ಗಮನಕ್ಕೆ ತರದೇ ಸರ್ಕಾರದವರು ಏನು ಮಾಡುತ್ತಿದ್ದಾರೆ, ಇದು ವಂಚನೆ ಎಂದು ನಾನು ಧೈರ್ಯವಾಗಿ, ದೃಢವಾಗಿ ಹೇಳುತ್ತೇನೆ. ಈ ಕೆಲಸವನ್ನು ಸರ್ಕಾರದವರು ಮಾಡಬಾರದು. ಇದು ಅಕ್ಷಮ್ಯ ಅಪರಾಧ ಎಂದು ನಾನು ಸಾರಿ ಸಾರಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮಗೆ ಆ ಕೆಲಸದ ಪಟ್ಟಿಯನ್ನು ಒದಗಿಸಿಕೊಡಬೇಕು. ಇವೊತ್ತೂ ಕೂಡ ಈ ಚರ್ಚೆ ಮುಗಿಯುವುದರೊಳಗೆ ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಕೆಲಸಗಳನ್ನು ತೆಗೆದುಕೊಂಡಿದ್ದೀರಿ ಎನ್ನುವ ಬಗ್ಗೆ ಇರತಕ್ಕ 15-2-1968 ರಲ್ಲಿ ಮಾಡಿದ ಆರ್ಡರಿನ ಪಟ್ಟಿಯನ್ನು ಈ ಸಭೆಯ ಮುಂದೆ ಇಡಬೇಕು. 30-11-1967 ರಲ್ಲಿ ಒಂದು ಪಟ್ಟಿಯನ್ನು ತಯಾರು ಮಾಡಿದ್ದಾರೆ. ಆ ಪಟ್ಟಿಯನ್ನೂ ಈ ಸಭೆಯ ಮುಂದೆ ಇಡಬೇಕು ಎಂದು ತಮ್ಮ ಮೂಲಕ ಆಗ್ರಹಪೂರ್ವಕವಾಗಿ ಸರ್ಕಾ ರಕ್ಕೆ ತಿಳಿಸುವುದಕ್ಕೆ ನಾನು ಇಷ್ಟಪಡುತ್ತೇನೆ. ಇದರಿಂದ ನಮಗೆ ಇರತಕ್ಕ ಅನುಮಾನ ಪರಿಹಾರವಾಗುವುದಕ್ಕೆ ಸಾಧ್ಯವಾಗುತ್ತದೆ. ಮತ್ತು ನಾವು ಯಾವ ವ್ಯತ್ಯಾಸವನ್ನೂ ಮಾಡಿಲ್ಲ ಎಂದು ತಮಗೂ ಒಂದು ಒಳ್ಳೆಯ ಹೆಸರು ಬರುವುದಕ್ಕೆ ಅವಕಾಶವಾಗುತ್ತದೆ ಎಂದು ನಾನು ಹೇಳುತ್ತೇನೆ.

ಇನ್ನು ಮೈಸೂರು ದೇಶದಲ್ಲಿರತಕ್ಕ ನೀರಾವರಿ ಕಾಮಗಾರಿಗಳು, ಕೆರೆಗಳು, ಕಟ್ಟೆಗಳ ವಿಷ ಯದಲ್ಲಿ ಒಂದೆರಡು ವಿಷಯಗಳನ್ನು ಇಲ್ಲಿ ಹೇಳಬೇಕಾಗಿದೆ. ಯಾವುದೇ ಕೆರೆಕಟ್ಟೆಗಳನ್ನು ಕಟ್ಟಿ ದರೂ ಕೂಡ ವರ್ಷಗಳು ಕಳೆದಹಾಗೆಲ್ಲಾ ಆ ಕೆರೆಗಳಲ್ಲಿ ಹೂಳು ತುಂಬಿಕೊಂಡು ಅವುಗಳಲ್ಲಿ ನೀರು ನಿಲ್ಲುವುದು ಕಡಿಮೆಯಾಗುತ್ತದೆ. ಈ ಕೆರೆಗಳ ಹಿಂದೆ ಇರತಕ್ಕಂಥ ಅಚ್ಚುಕಟ್ಟು ವರ್ಷೇ ವರ್ಷೇ ಜಾಸ್ತಿಯಾಗುತ್ತಿದೆ. ಕೆರೆ ಕಟ್ಟಿದ 5 ವರ್ಷಗಳಾದಮೇಲೆ ಕೆರೆಯಲ್ಲಿ ಎಷ್ಟು ನೀರು ಇದೆ, ಆ ಕೆರೆಯ ಕೈಪಾಸಿಟಿ ಎಷ್ಟು ಇದೆ, ಹಾಲಿ ಅಚ್ಚುಕಟ್ಟು ಎಷ್ಟು ಇದೆ ಎಂಬುದನ್ನು ಅಂದಾಜು ಮಾಡಿ ಆ ಕೆರೆಯ ಹಿಂದೆ ಅಚ್‌ಕಟ್ ಜಾಸ್ತಿ ಮಾಡುವುದಕ್ಕೆ ಅವಕಾಶವಿದ್ದರೆ ಮಾತ್ರ ಇಂಜಿನಿಯರು ಅಪ್ಪಣೆ ಕೊಡಬೇಕು. ಇಲ್ಲದೆ ಇದ್ದರೆ ಒಂದು ಕುಂಟೆ ಅಚ್ಚುಕಟ್ಟು ಜಾಸ್ತಿಮಾಡುವುದಕ್ಕೂ ಅವಕಾಶವನ್ನು ಕೊಡಬಾರದು. ಅದರ ಬಗ್ಗೆ ನಿರ್ದಿಷ್ಟವಾದ ಮಿತಿ ಇರಬೇಕು. ಆ ಬಗ್ಗೆ ಇಂಜಿನಿಯರು ಮತ್ತು ಅಧಿಕಾರಿಗಳಿಗೆ ಹೆಚ್ಚು ಅಧಿಕಾರವನ್ನು ಕೊಡಬೇಕು. ಅಚ್ಚುಕಟ್ಟು ಜಾಸ್ತಿ ಆಗುವುದನ್ನು ತಡೆ ಗಟ್ಟಬೇಕು ಎಂದು ನಾನು ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಅಚ್ಚುಕಟ್ಟನ್ನು ಜಾಸ್ತಿ ಮಾಡಿ ಹಾಲಿ ಇರತಕ್ಕ ಅಚ್ಚುಕಟ್ಟೂ ಸಹ ನಾಶವಾಗತಕ್ಕಂಥ ದುಸ್ಥಿತಿಗೆ ಬರುತ್ತಿದೆ. ಆದ್ದರಿಂದ ಅಚ್ಚುಕಟ್ಟು ಜಾಸ್ತಿ ಆಗುವುದಕ್ಕೆ ಅವಕಾಶವನ್ನು ಕೊಡಕೂಡದು. ಕುಣಿಗಲ್ ತಾಲ್ಲೂಕಿನಲ್ಲಿ

ಮಾರ್ಕೋನಹಳ್ಳಿ ಎನ್ನುವ ಒಂದು ದೊಡ್ಡ ಜಲಾಶಯ ಇದೆ. ಅದರ ಕೆಳಗಡೆ ಅಚ್ಚುಕಟ್ಟು ಜಾಸ್ತಿ ಇದ್ದರೂ ಕೂಡ ಮತ್ತೆ ಸರ್ಕಾರದವರು ಅಚ್ಚುಕಟ್ಟು ಜಾಸ್ತಿ ಮಾಡಿ ಇರತಕ್ಕಂಥ ಅಚ್ಚುಕಟ್ಟಿಗೆ ತೊಂದರೆ ಬರುವಹಾಗೆ ಮಾಡಿದ್ದಾರೆ. ಈ ವಿಚಾರದಲ್ಲಿ ಯಾರು ಅಪರಾಧ ಮಾಡಿದ್ದಾರೆಯೋ ಅವರಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸುವುದಕ್ಕೆ ನಾನು ಇಷ್ಟಪಡುತ್ತೇನೆ. ಕೆಲವು ಕೆರೆಯ ಕೆಳಗೆ ಹಂಗಾಮಿಯಾಗಿ ಸಾಗುವಳಿ ಮಾಡಿಕೊಂಡು ಬರುತ್ತಿದ್ದಾರೆ. ಈಗ ಉದಾಹರಣೆಗೆ ಹೇಳುವುದಾದರೆ ದೀಪಾಂಬುಧಿ ಕೆರೆಯ ಕೆಳಗೆ ಒಂದು ಸಾವಿರ ಎಕರೆ ಅಚ್ಚುಕಟ್ಟು ಪ್ರದೇಶ ಇದೆ. ಅಲ್ಲಿ ಈಗ 30–40 ವರ್ಷಗಳಿಂದ ಸುಮಾರು 200 ಎಕರೆ ಭೂಮಿಯನ್ನು ಹಂಗಾಮಿಯಾಗಿ ಸಾಗುವಳಿ ಮಾಡಿಕೊಂಡು ಕೆಲವರು ವರ್ಷೇ ವರ್ಷೇ ಅದರಿಂದ ವರಮಾನ ಮಾಡಿಕೊಂಡು ಬಂದಿದ್ದಾರೆ. ಸುಮಾರು 40 ವರ್ಷಗಳಿಂದಲೂ ಒಂದೇ ಸಮನಾಗಿ ಹಂಗಾಮಿಯಾಗಿ ಸಾಗುವಳಿ ಮಾಡಿದ್ದಾರೆ. ಇಂಥಾದ್ದನ್ನು ಕೂಡಲೇ ತಪ್ಪಿಸಬೇಕು. ಈಗ ಎಲ್ಲೆಲ್ಲಿ ಹಂಗಾಮಿಯಾಗಿ ಸಾಗುವಳಿ ಆಗುತ್ತಿದೆಯೋ ಅಂಥಾ ಕಡೆ ಅದನ್ನು ಖಾಯಂ ನೀರಾವರಿಯಾಗಿ ಮಾಡಲು ಸಾಧ್ಯವಾದರೆ ಮಾಡಿ. ಇಲ್ಲದಿದ್ದರೆ ಅದನ್ನು ವಜಾಮಾಡಿ. ಈ ಬಗ್ಗೆ ನಿರ್ದಿಷ್ಟವಾದ ಕ್ರಮವನ್ನು ಕೈಗೊಳ್ಳಬೇಕೆಂದು ನಾನು ಸೂಚನೆ ಕೊಡುವುದಕ್ಕೆ ಇಷ್ಟಪಡುತ್ತೇನೆ.

ಮಾನ್ಯ ಸದಸ್ಯರುಗಳು ಅನೇಕ ವಿಷಯಗಳನ್ನು ಈಗಾಗಲೇ ಹೇಳಿರುವುದರಿಂದ ನಾನು ಇನ್ನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಮುಖ್ಯವಾದ ವಿಚಾರವೆಂದರೆ ನೀರಾವರಿ ಪಂಪ್ ಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಉಪಯೋಗಿಸಿಕೊಳ್ಳುವ ಬಗ್ಗೆ ಒಂದು ಸಾವಿರ ರೂಪಾಯಿಗಳನ್ನು ಠೇವಣಿ ಮಾಡಬೇಕೆಂಬುದನ್ನು ಕಡ್ಡಾಯವಾಗಿ ಈ ಕೂಡಲೇ ನಿಲ್ಲಿಸಬೇಕೆಂದು ಸೂಚನೆ ಮಾಡುತ್ತೇನೆ. ಏಕೆಂದರೆ ಪಂಪ್‌ಸೆಟ್ಟು ಕೊಂಡುಕೊಳ್ಳುವುದಕ್ಕಾಗಿ 5 ಸಾವಿರ ರೂಪಾಯಿಗಳವರೆಗೆ ಸಾಲಮಾಡಿರುತ್ತಾರೆ. ಇವರ ಜೊತೆಗೆ ಒಂದು ಸಾವಿರ ರೂಪಾಯಿಗಳನ್ನು ಮತ್ತೆ ಸಾಲಮಾಡಬೇಕೆಂದರೆ ಯಾರು ಕೊಡುವವರು ಇದ್ದಾರೆ ; ಆದ್ದರಿಂದ ಇದನ್ನು ಕೂಡಲೇ ರದ್ದುಮಾಡಬೇಕು.

ಇನ್ನು ನಮ್ಮ ರಾಜ್ಯದಲ್ಲಿ ಉತ್ಪತ್ತಿಯಾಗುತ್ತಿರುವ ವಿದ್ಯುಚ್ಛಕ್ತಿ ಹೆಚ್ಚಾಗಿರುವುದರಿಂದ ಇನ್ನು 5 ವರ್ಷದವರೆಗೆ ಮತ್ತೆ ಹೊಸ ವಿದ್ಯುಚ್ಛಕ್ತಿ ಯೋಜನೆಗಳನ್ನು ಕೈಕೊಳ್ಳುವ ಆವಶ್ಯಕತೆ ಇಲ್ಲವೆಂದು ಭಾವಿಸುತ್ತೇನೆ. ಕಾಳೀನದಿ ಯೋಜನೆ ಇಡೀ ರಾಷ್ಟ್ರದ ಸ್ವತ್ತಾಗಿದೆ. ಅದಕ್ಕೆ ನಾವೊಬ್ಬರೇ ಹಕ್ಕುದಾರರಲ್ಲವಾದ್ದರಿಂದ ನಾವೇ ಹಣ ಕೊಡಬೇಕಾದ ಆವಶ್ಯಕತೆಯಿಲ್ಲ. ಈ ಯೋಜನೆಗೆ ಕೇಂದ್ರ ಸರ್ಕಾರದವರು ಹಣವನ್ನು ಕೊಡುವುದು ಅವಶ್ಯಕ. ಒಂದುವೇಳೆ ಕೇಂದ್ರದವರು ಹಣ ಕೊಡದಿದ್ದರೆ, ನಮ್ಮ ಸರ್ಕಾರದವರು ಇನ್ನು 5–10 ವರ್ಷಗಳವರೆಗೆ ಈ ಯೋಜನೆಗೆ ಹಣ ಖರ್ಚು ಮಾಡುವುದನ್ನು ಬಿಟ್ಟು ಅದೇ ಹಣವನ್ನು ಬೇರೆ ಕೆಲಸಗಳಿಗೆ ಉಪಯೋಗಿಸುವುದು ಒಳ್ಳೆಯದೆಂದು ಹೇಳುತ್ತೇನೆ. ಇದು ಅವಶ್ಯಕವಾದಂಥ ಕೆಲಸವಾದರೂ ಸಹ ಇವತ್ತಿನಪರಿಸ್ಥಿತಿಯಲ್ಲಿ ಈ ಯೋಜನೆಗೆ ಹಣ ಖರ್ಚುಮಾಡುವುದು ಸರಿಯಲ್ಲ. ಈ ಯೋಜನೆ ರಾಷ್ಟ್ರದ ಸ್ವತ್ತಾಗಿರುವುದರಿಂದ ಕೇಂದ್ರ ಸರ್ಕಾರದವರೇ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡಿ ಅವರು ಇದನ್ನು ಕಡ್ಡಾಯವಾಗಿ ತೆಗೆದುಕೊಳ್ಳುವಂತೆ ಮಾಡಬೇಕೇ ಹೊರತು, ನಮ್ಮ ಸರ್ಕಾರದವರೇ ತೆಗೆದುಕೊಳ್ಳುವುದು ಸಾಧ್ಯವಿಲ್ಲವೆಂದು ಸೂಚಿಸುವುದಕ್ಕೆ ಇಷ್ಟಪಡುತ್ತೇನೆ. ಬೇರೆ ಕಡೆ ವಿದ್ಯುಚ್ಛಕ್ತಿ ಯೋಜನೆಗೆ ಎಷ್ಟು ಖರ್ಚು ಬರುತ್ತದೋ ಅದರ ಮೂರನೆ ಒಂದು ಅಂಶ ಮಾತ್ರ ಈ ಯೋಜನೆಗೆ ಖರ್ಚು ಬರುವುದರಿಂದ, ಈ ಯೋಜನೆಗೆ ಖರ್ಚಾಗತಕ್ಕಂಥ ಪೂರ್ತಿ ಹಣವನ್ನು ಕೇಂದ್ರದವರೇ ಕೊಡಬೇಕೆಂದು ಒತ್ತಾಯ ಹಾಕುವುದು ಒಳ್ಳೆಯದು.

ಇನ್ನು ಲೋಕೋಪಯೋಗಿ ಇಲಾಖೆಯಲ್ಲಿ ಇಬ್ಬರು ದಕ್ಷರಾದಂಥ ಚೀಫ್ ಇಂಜನಿಯರ್‌ಗಳು ಇದ್ದಾರೆ. ಇವರಿಗೆ ಸಾಕಷ್ಟು ಪ್ರೋತ್ಸಾಹ ಕೊಟ್ಟು ರಾಜ್ಯದ ನೀರಾವರಿ ಪರಿಸ್ಥಿತಿಯನ್ನು ಉತ್ತಮಪಡಿಸುವುದಕ್ಕೆ ಏರ್ಪಾಡು ಮಾಡಬೇಕು. ಪ್ರತಿಯೊಂದು ನದಿ ಕಣಿವೆಯನ್ನು ಪರಿಶೀಲನೆ ಮಾಡಿ ಯಾವ್ಯಾವ ಕಣಿವೆಯಲ್ಲಿ ಹೊಸ ಅಚ್ಚುಕಟ್ಟು ಎಷ್ಟು ತರಬಹುದು, ಯಾವ ಕಣಿವೆಯಲ್ಲಿ ಪ್ರಗತಿ ಸಾಧ್ಯವಿಲ್ಲವೆಂಬುದನ್ನು ನಿರ್ಧರಿಸಬೇಕು. ದಾಕ್ಷಿಣ್ಯಕ್ಕೆ ಒಳಗಾಗಿ ಈ ಪರಿಣತರ ಅಭಿಪ್ರಾಯವನ್ನು ಮೀರಿ ನಡೆಯಲು ಯಾರಿಗೂ ಅವಕಾಶ ಕೊಡಬಾರದು. ಈಗ ತಯಾರಾಗಿರುವ ಮಾಸ್ಟರ್ ಪ್ಲಾನ್‌ಗಳನ್ನು ಚೀಫ್‌ಇಂಜಿನಿಯರ ಪರಿಶೀಲನೆಗೊಳಪಡಿಸಿ ಅಂತ್ಯ ತೀರ್ಮಾನ ಕೈಕೊಳ್ಳಬೇಕು. ಮಾನ್ಯ ಉಪಮಂತ್ರಿಗಳು ನಾನು ಕುಹಕದಿಂದ ಹೇಳುತ್ತಿದ್ದೇನೆಂದು ತಿಳಿಯಬಾರದು. ಈ ಬಗ್ಗೆ ಎಲ್ಲಿ ಲೋಪದೋಷಗಳಿವೆ, ಭ್ರಷ್ಟಾಚಾರ ನಡೆಯುತ್ತಿದೆ ಅವುಗಳನ್ನೆಲ್ಲಾ ತಪ್ಪಿಸುವುದಕ್ಕೆ ಸರ್ವ ಪ್ರಯತ್ನವನ್ನೂ ಮಾಡಬೇಕು. ಆ ರೀತಿ ಮಾಡಿದರೆ ನಿಮಗೆ ಈ ಖಾತೆ ಬಂದಿದ್ದಕ್ಕೆ ಸಾರ್ಥಕವಾಗುತ್ತದೆ. ಇಲ್ಲದಿದ್ದರೆ ನಿಮ್ಮ ಮುಖಾಂತರ ಇಡೀ ರಾಜ್ಯದ ಜನತೆಗೆ ತೊಂದರೆ ಕೊಟ್ಟಂತಾಗುತ್ತದೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†Sri ALLUM KARIBASAPPA (Kurugod).—Mr. Chairman, Sir, in supporting the Public Works Demand, I would like to bring a few points to the notice of the Government. Sir, I am extremely sorry to say that the atchkat roads in the Kampli Sugar Factory area have not at all been taken up because the Cess Fund collection has been stopped now according to the Supreme Court order. I have no idea as to what other funds have been allotted for taking up these roads I am told that two or three roads were sanctioned but at the final stage the Minister concerned has stopped it on the ground that Kampli Sugar Factory should bear one-third of the cost. They have refused to do it because they have no funds and it is the duty of the Government to see that such roads are taken up by themselves entirely.

Further, there are many roads in Hospet as well as in Bellary and Sirguppa taluks which are not completed and some are partialy completed. Such roads should be given top priority and Government should see that they are completed at least now. Otherwise, the huge amounts that Government have already expended on these would be a waste.

Sir, I would like to propose one small bridge across Nadihalla in Bellary taluk and not in Sandur taluk. I am sure about two to three thousand acres may be irrigated at very cheap cost. Therefore, I request the Public Works Minister to take up this small bridge where waste water is connected to the Tungabhadra river and help the poor ryots who are actually suffering there. I also request the Government to restore the Gudekwata tank old bank and also the tank in Sandur taluk. I have been requesting the Deputy Minister these six years in this regard but I am very sorry to say that God has not given him good-will to take up these works. Awaiting technical opinion may be for one year and not for six or seven years; I am very sorry to say it. He is also elected and I am also elected and he is holding the same portfolio this time also. After all, this is a simple matter. Let them say: 'no'; I do not mind. But simply keeping them hanging in the air for years together is not good. I do not know what is in his mind. The Minister is here and I request that he must look into the matter and see that this work is taken up.

Then, I feel under the Tungabhadra Project the work under high level canal and also low level canal is almost complete and it is high time that the Thungabhadra Board is desolved. Now the work of the Board is allocation of water between Mysore and Andhra and that would be entrusted to Mysore Government. Therefore, the Board may be dessolved ; that is my sincere opinion.

Then, Sir, the high level canal water has already been supplied to Bellary taluk but I am very sorry to say that no ryot has taken advantage of the water which is flowing in our area because the land in the taluk is not developed. Further no proper information is given to the ryots. Unless Government gives notice to the ryots and apprise

them of the fact, they cannot take any steps for the development of the land. This is my sincere opinion. Recently, I have expressed this at Bellary when the Hon'ble Minister was there and so it is their first duty to make the ryots know about this.

Sir, another important point about this high level canal area in Bellary taluk is, the area which is beyond Hagari is not at all localised under this high level canal. I feel it is the important duty of myself being the representative from that area and also the duty of the Government to see 20,000 to 30,000 acres are allowed on the other side of Hagari area. There was an old scheme to construct an aqueduct which would cost about two crores of rupees. But you may take water from the Andhra area where the high level canal is flowing. About two to three miles you can take water from Andhra area which benefits 20,000 to 30,000 acres where we are facing famine every year instead of resorting to the constructing of the aqueduct spending two crores. This would be a great help to the people of that area. This is my sincere request and Government should take keen interest and see that this is taken up immediately and help those suffering ryots.

7-00 P.M.

The burning problem in Bellary District is about Daroji tank which was being fed by Nathihalla of Sandur taluk. But now there is a proposal to have a bridge across Nathihalla and to feed this Daroji tank from the High level canal. The ryots are not concerned whether the Government gives Nathihalla water or high level canal water to the tank. The ryots must be given the same crop pattern which they were enjoying since hundreds of years ; Government should not insist the ryots to the crop pattern of high level canal. I am very sorry to express that the Deputy Commissioner, Bellary District has levied penalty up to Rs. 30 lakhs to Rs. 40 lakhs, because they have sown Sugar and Paddy, with retrospective effect from 1964-65, and I feel it is a great burden on the ryots. No doubt, he may be correct as per law to collect penalty. But, from the humanitarian point of view it is quite impracticable and the penalty should not be considered on those lines. I request the Government to scrutinise this and see that relief is given to the ryots, as otherwise, they will have to sell away their lands.

Thank, you, Sir.

Sri D. M. SIDDAIAH.—I request the Chair to extend the time by another half-an-hour so that we may complete the list.

Mr. CHAIRMAN.— Even with half-an-hour, it is difficult to complete.

I now call upon Sri Doddabore Gowda to speak.

ಶ್ರೀ ಬಿ. ದೊಡ್ಡಬೋರೇಗೌಡ (ಶ್ರೀರಂಗಪಟ್ಟಣ).—ಮಾನ್ಯ ಸಭಾಪತಿಯವರೇ, ಈಗ ನಮ್ಮ ಮುಂದೆ ಮಂಡಿಸಿರುವ ಲೋಕೋಪಯೋಗಿ ಇಲಾಖೆಯ 92 ಕೋಟಿ ರೂಪಾಯಿಯ ಆಯವ್ಯಯ ಪಟ್ಟಿಯನ್ನು ನಾನು ವಿರೋಧಿಸುತ್ತಾ, ಆಡಳಿತ ಪಕ್ಷದಲ್ಲಿರತಕ್ಕ ಭ್ರಷ್ಟಾಚಾರವನ್ನು ಎರಡು ಕಡೆಯ ಸದಸ್ಯರೂ ಹೇಳಿದ್ದಾರೆ. ಹಾಗೆ ನಾವು ಮಾತನಾಡುವುದನ್ನೂ 5 ನಿಮಿಷಕ್ಕೆ ಮಿತಿಗೊಳಿಸತಕ್ಕಂತದ್ದು, ಅದೂ ಕೂಡ ಈ ಸದನದ ಸಂಪ್ರದಾಯದಲ್ಲಿ ಒಂದು ಭ್ರಷ್ಟಾಚಾರವೆಂದು ಹೇಳಬೇಕಾಗಿದೆ. ನಾವು ನಮ್ಮ ಕ್ಷೇತ್ರಗಳಿಗೆ ಸಂಬಂದಪಟ್ಟ ಕಷ್ಟ ಸುಖಗಳನ್ನು ಹೇಳಿಕೊಳ್ಳುವುದಕ್ಕೆ ಪ್ರತಿಬಂಧಕ ಹಾಕುವುದು ನಿಜವಾಗಿಯೂ ಮನನೋಯುವಂತಾದ್ದು.

10 ವರ್ಷಗಳಿಂದ ಪ್ರತಿ ವರ್ಷ 90 ಕೋಟಿ ಖರ್ಚು ಮಾಡಿದ್ದರೂ ಯೋಜನೆಯಿಂದ ವರ್ಷದಲ್ಲಿ ಒಂದು ಗ್ರಾಮಕ್ಕೆ 5 ಎಕರೆಗೆ ನೀರಾವರಿ ಮಾಡಿದ್ದರೂ ಈ ರಾಜ್ಯದ ಎಲ್ಲಾ ಗ್ರಾಮಗಳಿಗೆ ನೀರಾವರಿಯಾಗುತ್ತಿತ್ತು. ಹಿಂದೆ ಹಳೆಯ ಮೈಸೂರಿನಲ್ಲಿ ಶೇಕಡಾ 20 ಎಕರೆ ನೀರಾವರಿ ಇತ್ತು. ಇಂದು ಇನ್ನೂ ಜಾಸ್ತಿಯಾಗಿದೆ ಎಂದು ಮಾನ್ಯ ಮಂತ್ರಿಯವರು ಹೇಳಲಿ. ನಾವು ಖರ್ಚು ಮಾಡುತ್ತಿರುವ ಹಣ ಇವತ್ತು ಎಲ್ಲಿ ಹೋಗುತ್ತದೆ, ಆದರೆ ನೀರಾವರಿ ಯೋಜನೆಗಳು ನಿಜವಾಗಿಯೂ ಕಾರ್ಯಗತವಾಗಿಲ್ಲ. ದೇಶದ ಜನತೆಯ ಭವಣೆ ನಿವಾರಣೆಯಾಗಿಲ್ಲ. 92 ಕೋಟಿ ರೂಪಾಯಿಯ ಯೋಜನೆ ಕಾರ್ಯಗತವಾಗಬೇಕಾದರೆ, ಮಾನ್ಯ ಸಚಿವರು ದಿಟ್ಟತನದಿಂದ, ವಿಶಾಲ ಮನಸ್ಸಿನಿಂದ ದಕ್ಷರಾದಂತ ಅಧಿಕಾರಿಗಳನ್ನು ನೇಮಿಸಿ, ಈ ಕಾರ್ಯಗಳನ್ನು ಮಾಡಬೇಕು. ಹಾಗೆ ಇದ್ದರೆ ಮಾತ್ರ ನೀರಾವರಿ ಯೋಜನೆ ಪೂರ್ಣವಾಗಿ ಫಲಕಾರಿಯಾಗುವುದು ಎಂದು ನಾನಾದರೂ ಹೇಳುತ್ತೇನೆ. ಯಾವ ಯೋಜನೆಯಾಗಲಿ, ಅದಕ್ಕೆ ಒಂದು ಎಸ್ಟಿಮೇಟ್ ಆದಾಗ, ಅದು ಪೂರ್ಣವಾಗಿ ಕೊನೆಗೆ ಬಂದಾಗ ಒಂದು ಕೋಟಿ ಇದ್ದದ್ದು, 20 ಕೋಟಿಯಾಗುತ್ತದೆ. ಕಪಿಲಾ ಯೋಜನೆಯನ್ನು ಮೊದಲು ಮೂರು ಕೋಟಿ 20 ಲಕ್ಷಕ್ಕೆ ತಯಾರು ಮಾಡಿದರು. ಇವತ್ತು ಅದು 21 ಕೋಟಿ ರೂಪಾಯಿಯಾಗಿದೆ. ವರ್ಷಕ್ಕೆ 20 ಲಕ್ಷ ಕೊಟ್ಟರೆ ಬಹುಶಃ 100 ವರ್ಷವಾಗಬಹುದು ರಾಜ್ಯದಲ್ಲಿರತಕ್ಕ ನಮ್ಮ ಯೋಜನೆಗಳ ಅಂದಾಜು ಹೀಗೆ ವರ್ಷಂಪ್ರತಿ ಹೆಚ್ಚುತ್ತಾ ಹೋದರೆ ನಮ್ಮ ರಾಜ್ಯದಲ್ಲಿರತಕ್ಕ ದೊಡ್ಡ ದೊಡ್ಡ ನೀರಾವರಿ ಯೋಜನೆಗಳಾದ, ಕಾವೇರಿ, ಕೃಷ್ಣಾ, ಕಪಿಲಾ, ಹೇಮಾವತಿ, ಲಕ್ಷ್ಮಣತೀರ್ಥ, ಹಾರಂಗಿ, ಕಂಬದಕಡ, ಷಿಂಷಾ, ಕಾಳೀನದಿ ಯೋಜನೆ, ತುಂಗಾ, ತುಂಗಭದ್ರಾ, ಘಟಪ್ರಭಾ, ಮಲಪ್ರಭಾ ಯೋಜನೆಗಳನ್ನೆಲ್ಲಾ ಸಾವಿರ ವರ್ಷವಾದರೂ ಮಾಡುವುದಕ್ಕಾಗುತ್ತದೆಯೇ ? ಪ್ರತಿಯೊಂದು ಯೋಜನೆಗೂ 20—30 ಕೋಟಿ ಅಂದಾಜು ಮಾಡಿ ಅದರಲ್ಲಿ 5—10 ಲಕ್ಷ ರೂಪಾಯಿಗಳನ್ನು ಮಾತ್ರ ಪ್ರತಿ ವರ್ಷ ಕೊಟ್ಟರೆ ಅಧಿಕಾರಿಗಳಿಗೆ, ಕಂಟ್ರಾಕ್ಟರುಗಳಿಗೆ ಕೊಡುತ್ತಿದ್ದಾರೆಂದು ಆಗುತ್ತೆ ಇದರಿಂದ ನೀರಾವರಿ ಯೋಜನೆ ತ್ವರಿತವಾಗಿ, ಆಗುವುದಿಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳು ಒಂದು ದಿಟ್ಟ ನಿಲುವನ್ನು ತಾಳಿ ಈ ಚಿಕ್ಕ ಚಿಕ್ಕ ನೀರಾವರಿ ಯೋಜನೆಗಳಾದ ಲಿಫ್ಟ್ ಇರಿಗೇಶನ್‌ಗೆ ಹೆಚ್ಚಿನ ಗಮನ ಕೊಟ್ಟು ಪ್ರತಿವರ್ಷ 10 ಕೋಟಿಯಷ್ಟಾದರೂ ರೂಪಾಯಿ ಖರ್ಚು ಮಾಡಿ ಒಂದೆರಡು ವರ್ಷಗಳಲ್ಲಿ ರಾಜ್ಯದ ಎಲ್ಲಾ ಗ್ರಾಮಗಳಿಗೂ ಪೂರ್ಣ ನೀರಾವರಿಯನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಶ್ರೀರಂಗಪಟ್ಟಣ ಕ್ಷೇತ್ರದಲ್ಲಿ ಸಾಧಾರಣ 70 ಗ್ರಾಮಗಳಲ್ಲಿ ಕುಡಿಯುವ ನೀರಿಲ್ಲ. ಇದನ್ನು ಮಾನ್ಯ ಸಚಿವರಿಗೆ ಅನೇಕ ಸಾರಿ ಹೇಳಿದ್ದೇನೆ. ಒಂದು ಸಾರಿ ಅವರು ದಯಮಾಡಿ ಈ ಗ್ರಾಮಗಳನ್ನು ನೋಡಬೇಕು. ಮತ್ತು ಕರಿಘಟ್ಟ ದೇವಸ್ಥಾನದ ಲೋಕಪಾವನಿ ಲಿಫ್ಟ್ ಇರಿಗೇಶನ್ ಯೋಜನೆಯನ್ನು ಮಾಡಿ 20—30 ಗ್ರಾಮಗಳಿಗೆ ವ್ಯವಸಾಯಕ್ಕೆ ನೀರನ್ನು ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ. 20 ವರ್ಷದಿಂದ ಕೆ. ಆರ್. ಸಾಗರ ವರ್ಕಿಂಗ್ ಕಮಿಟಿ ಏನಿತ್ತು, ಅದನ್ನು ಆಡಳಿತ ಪಕ್ಷದವರು ಅವರ ಪಕ್ಷದ ಜನರನ್ನು ಸೇರಿಸಲು ಒಂದು ಬೈಲಾವನ್ನು ಮಾಡಿ ಅದರಲ್ಲಿ ಹೊರಗಿನವರನ್ನು ತಂಮ ಸದಸ್ಯರನ್ನಾಗಿ ಮಾಡಿದ್ದಾರೆ. ಆ ಕ್ಷೇತ್ರದ ಜನರನ್ನು ಬಿಟ್ಟು ಬೇರೆ ಜನರನ್ನು ಆ ವರ್ಕಿಂಗ್ ಕಮಿಟಿಗೆ ತಂದರೆ, ಅವರಿಗೆ ಅಲ್ಲಿಯ ಕುಂದುಕೊರತೆಗಳು ಎಡರುತೊಡರುಗಳು ಏನು ಗೊತ್ತಾಗುತ್ತದೆ. ಸಚಿವರು ಕೆ. ಆರ್. ಸಾಗರ ವರ್ಕಿಂಗ್ ಕಮಿಟಿಯನ್ನು ರದ್ದು ಮಾಡಿ ಆ ಕ್ಷೇತ್ರದ ಶಾಸಕರಿಗೆ ಪ್ರಾತಿನಿಧ್ಯ ಕೊಡಬೇಕಾಗಿ ಒತ್ತಾಯ ಮಾಡುತ್ತೇನೆ ಹಿಂದೆ 45 ಸಾವಿರ ಎಕರೆಗೆ ನೀರು ಕೊಡುತ್ತಿದ್ದರು. ನಂತರ ನೀರು ಒದಗಿಸುವುದಕ್ಕಾಗುವುದಿಲ್ಲವೆಂದು ವಿಶ್ವೇಶ್ವರಯ್ಯ ನಾಲೆಯಿಂದ ಅನೇಕ ಗ್ರಾಮಗಳಿಗೆ ಎರಡು ಮೂರು ಕೋಟಿ ರೂಪಾಯಿ ಖರ್ಚು ಮಾಡಿರತಕ್ಕಂತಹ ನಾಲೆಗೆ ನೀರನ್ನು ನಿಲ್ಲಿಸಿದ್ದಾರೆ. ನಿಜ ಪರಿಸ್ಥಿತಿ ಹೀಗಿರುವಾಗ್ಗೆ ಇವತ್ತು ನಾಲ್ಕೈದು ಕೋಟಿ ರೂಪಾಯಿ ಖರ್ಚು ಮಾಡಿ ವರುಣ ನಾಲೆಯನ್ನು ತೆಗೆಯಬೇಕಾದ ಅವಶ್ಯಕತೆಯಾದರೂ ಏನು ? ಪೂರ್ಣವಾಗಿ ನೀರು ಇರುವ ಕಡೆ ಇಂತಹ ನಾಲ್ಕು ಕೋಟಿ ರೂಪಾಯಿಯ ಬೇರೆ ಯೋಜನೆ ಮಾಡಿದರೆ, ಅಲ್ಲಿ ಗ್ರಾಮಗಳಿಗೆ ಪೂರ್ಣವಾಗಿ ನೀರು ಒದಗಿಸಬಹುದು. ವಿಶ್ವೇಶ್ವರಯ್ಯ ನಾಲೆಯ ಕೊನೆ ನಾಲೆಯ ಗ್ರಾಮಗಳನ್ನು ಪೂರ್ಣವಾಗಿ ಸರ್ವೆ

ಮಾಡಿದರೆ ವರುಣ ನಾಲೆಗೆ ಈ ಹಣ ಖರ್ಚು ಮಾಡಬೇಕಾದ ಅವಶ್ಯಕತೆ ಇರಲಿಲ್ಲ. 1940ರಿಂದ 1945ರವರೆಗೆ ನೀರು ಕೊಟ್ಟು ನಂತರ ನೀರನ್ನು ಕೊಡುವುದಿಲ್ಲವೆಂದು ಅನೇಕ ಗ್ರಾಮಗಳಿಗೆ ನಿಲ್ಲಿಸಿದ್ದಾರೆ. ಆದ್ದರಿಂದ ಈಗಲಾದರೂ ವರುಣ ನಾಲೆಯನ್ನು ಕೈಬಿಟ್ಟು ವಿಶ್ವೇಶ್ವರಯ್ಯ ನಾಲೆಯಿಂದ ಹಿಂದೆ ಒದಗಿಸಿದಂತೆ 40—45 ಸಾವಿರ ಎಕರೆಗಳಿಗೆ ನೀರು ಒದಗಿಸಲಿ ಎಂದು ಕೇಳಿಕೊಳ್ಳುತ್ತೇನೆ. ಹಾಗೆ ವರುಣ ನಾಲೆಗೆ ಒಂದು ತಜ್ಞರ ಕಮಿಟಿ ಮಾಡಿದ್ದಾರೆ, ಅದು ಹಿಂದೆ ತದ್ವಿರುದ್ಧವಾಗಿ ರಿಪೋರ್ಟು ಕೊಟ್ಟ ಅಧಿಕಾರಿಗಳನ್ನೇ ಈ ದಿವಸ ಆ ಕಮಿಟಿಗೆ ಸದಸ್ಯರನ್ನಾಗಿ ಮಾಡಿದ್ದಾರೆ. ಯಾರನ್ನು ಹಾಕಿದರೆ, ಒಂದು ಸ್ವಚ್ಛವಾದ ವರದಿ ಬರುತ್ತದೆ ಎಂದು ಮನಗಂಡು, ದಕ್ಷರಾದ ಅಧಿಕಾರಿಗಳನ್ನು ನೇಮಕ ಮಾಡಬೇಕಾಗಿತ್ತು ಇದರಲ್ಲಿ ಎಷ್ಟುಮಟ್ಟಿಗೆ ನ್ಯಾಯ ಬರುತ್ತದೆ ಎಂಬುದನ್ನು ಮಾನ್ಯ ಸಚಿವರು ಯೋಚನೆ ಮಾಡಬೇಕು. ನಿವೃತ್ತಿಯಾಗಿರುವಂತಹ ಯಾರನ್ನಾದರೂ ಒಬ್ಬರನ್ನು ಹಾಕಿ. ಅವರು ಏನೊಂದು ವರದಿ ಕೊಡುತ್ತಾರೆಂಬುವುದನ್ನು ನೋಡಿ ತೀರ್ಮಾನ ಕೈಗೊಳ್ಳಬೇಕಾಗಿತ್ತು. ಹಿಂದೆ ಮಾಡಿದವರನ್ನೇ ಏಕೆ ಮಾಡಿದ್ದೀರಿ ? ಇದನ್ನು ನಾವು ಪ್ರತಿಭಟಿಸುತ್ತೇವೆ. ಆದ್ದರಿಂದ ಮಾನ್ಯ ಸಚಿವರು ವರುಣ ನಾಲೆ ಕಮಿಟಿಗೆ ಹಾಕಿರತಕ್ಕವರನ್ನು ರದ್ದು ಮಾಡಿ ನಿವೃತ್ತಿಯಾದ ಒಬ್ಬ ಚೀಫ್ ಇಂಜಿನಿಯರನ್ನು ಹಾಕಿ ಒಂದು ಸರಿಗಟ್ಟಾದ ವರದಿಯನ್ನು ತರಿಸಿಕೊಳ್ಳಬೇಕೆಂದು ಹೇಳಿ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ (ಹಡಗಲಿ).—ಮಾನ್ಯ ಸಭಾಪತಿಗಳೇ, ನಮ್ಮ ಲೋಕೋಪಯೋಗಿ ಖಾತೆಯ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಸಭೆಯ ಮುಂದೆ ಮಂಡಿಸಿರತಕ್ಕಂಥ ಈ ಖಾತೆಯ ಬೇಡಿಕೆಗಳನ್ನು ಅನುಮೋದಿಸುತ್ತಾ ಈ ಬಗ್ಗೆ ಕೆಲವು ವಿಷಯ ಹೇಳಲು ಬಯಸುತ್ತೇನೆ. ಲೋಕೋಪಯೋಗಿ ಖಾತೆ ಅಂದರೆ ರಾಷ್ಟ್ರಕ್ಕೆ ಸಂಪತ್ತನ್ನು ಕೊಡತಕ್ಕಂಥ ಕೆಲಸ ಈ ಖಾತೆಯಲ್ಲಿ ನಡೆಯುತ್ತಿದೆ. ಈ ಕೆಲಸ ನಮ್ಮ ರಾಜ್ಯದಲ್ಲಿ ಒಳ್ಳೇ ಸಮರ್ಥನೀಯವಾದ ರೀತಿಯಲ್ಲಿ ನಡೆದಿದೆ ಎಂದು ಹೇಳಲು ನನಗೆ ತುಂಬಾ ಸಂತೋಷವಾಗುತ್ತದೆ. ಇದಕ್ಕಾಗಿ ಮಾನ್ಯ ಮಂತ್ರಿಗಳನ್ನು ಅಭಿನಂದಿಸಲು ಇಷ್ಟಪಡುತ್ತೇನೆ. ಈ ಸಂದರ್ಭದಲ್ಲಿ ಒಂದು ಮಾತು ಮಾತ್ರ ವ್ಯಸನದಿಂದ ಹೇಳಬೇಕಾಗಿದೆ. ಈ ರಾಜ್ಯದಲ್ಲಿ ಅಷ್ಟೇ ಅಲ್ಲ, ಇಡೀ ದೇಶದಲ್ಲಿ ಇಂದು ಇಂಜನಿಯರಿಂಗ್ ಪದವೀಧರರಿಗೆ ಅವರು ಬುದ್ಧಿವಂತರು ಆಗಿದ್ದರೂ ಕೂಡ ಅವರಿಗೆ ಈ ಖಾತೆಯಲ್ಲಿ ಕೆಲಸ ಸಿಕ್ಕುತ್ತಿಲ್ಲ ಎಂಜಿನಿಯರುಗಳ ಮುಂದಿನ ಭವಿಷ್ಯ ನಿರಾಶಾದಾಯಕವಾಗಿದೆ ಎನ್ನುವುದನ್ನು ಪತ್ರಿಕೆಗಳಲ್ಲ ನೋಡಿದ್ದೇವೆ. ಮುಂದೆ ಈ ಎಂಜಿನಿಯರುಗಳ ಭವಿತವ್ಯ ಆಶಾದಾಯಕ ಭವಿಷ್ಯ ಇಲ್ಲ, ಅದು ನಿರಾಶಾದಾಯಕವಾಗಿದೆ ಎನ್ನುವ ಪರಿಸ್ಥಿತಿ ಉಂಟಾಗುತ್ತಿದೆ. ಹೀಗೆ ಆಗಬಾರದು. ದೇಶದ ಪ್ರಗತಿಯಾಗಬೇಕು. ತಾಂತ್ರಿಕ ತಜ್ಞರಿಗೆ ಹೆಚ್ಚು ಅವಕಾಶ ಕೊಡತಕ್ಕಂಥ ಅಭಿವೃದ್ಧಿ ಕಾರ್ಯ ದೇಶದಲ್ಲಿ ನಡೆಯಬೇಕು. ಯೋಜನೆಗಳು ಪ್ರಗತಿಪರವಾಗಿ ನಡೆದು ತಾಂತ್ರಿಕ ಕೆಲಸ ಕೊಡತಕ್ಕಂಥ ಅವಕಾಶ ಉಂಟಾಗಬೇಕು ಎಂದು ಹೇಳಿ ಮಾನ್ಯ ಸಚಿವರು ಹಾಗು ತಜ್ಞರು ಇದನ್ನು ವಿಚಾರ ಮಾಡಿ ತಾಂತ್ರಿಕ ಪ್ರಗತಿಯಾಗುವುದಕ್ಕೆ ಅವಕಾಶ ಮಾಡಿಕೊಡುವುದಕ್ಕೆ ವಿಚಾರ ಮಾಡಬೇಕು ಎಂದು ಹೇಳ ಬಯಸುತ್ತೇನೆ.

ಬಳ್ಳಾರಿ ಜಿಲ್ಲೆಯ ಬಗ್ಗೆ ಹೇಳುವುದಾದರೆ ವಿರೋಧ ಪಕ್ಷದ ಸದಸ್ಯರ ಕ್ಷೇತ್ರಗಳಲ್ಲಿ ಪ್ರಗತಿ ಕುಂಠಿತವಾಗಿದೆ ಎಂದು ವಿರೋಧ ಪಕ್ಷದ ಸದಸ್ಯರು ಹೇಳಿದರು. ಆದರೆ ಆ ರೀತಿ ಇರುವುದಿಲ್ಲ. ನಮ್ಮ ಬಳ್ಳಾರಿ ಜಿಲ್ಲೆಯಲ್ಲಿ 8 ಆಡಳಿತ ಭಾಗಗಳು ಇವೆ, ಜಿಲ್ಲಾ ಅಭಿವೃದ್ಧಿ ದೃಷ್ಟಿಯಿಂದ ನೀರಾವರಿ ದೃಷ್ಟಿಯಿಂದ ನೋಡಿದರೆ ಅದು ಬಹಳ ಹಿಂದುಳಿದಿದೆ. ಅಂಕಿ ಅಂಶಗಳನ್ನು ನೋಡಿದರೆ ನಮ್ಮ ರಾಜ್ಯದಲ್ಲಿ ನೀರಾವರಿ ಪ್ರದೇಶದ ಪ್ರಮಾಣ ಶೇಕಡ 10ರಷ್ಟು ಇದ್ದರೆ ನಮ್ಮ ಬಳ್ಳಾರಿ ಜಿಲ್ಲೆಯಲ್ಲಿ ಇದು ಕೇವಲ 3.2 ಪರ್ಸೆಂಟ್ ಇದೆ. ಇಷ್ಟೇ ಅಲ್ಲದೆ ಇಡೀ ರಾಜ್ಯದಲ್ಲಿ ಬಳ್ಳಾರಿ ಪ್ರಮಾಣ ಬಹಳ ಕಡಿಮೆ ಇದೆ. ಇಂಥ ದುರದೃಷ್ಟಕರ ಸನ್ನಿವೇಶ ಹೋಗಬೇಕು, ಬಳ್ಳಾರಿ ಜಿಲ್ಲೆಯು ಮುಂದುವರಿಯಬೇಕು ಎನ್ನುವ ಉದಾತ್ತ ಧ್ಯೇಯ ಇಟ್ಟುಕೊಂಡು ಮೈಸೂರು ರಾಜ್ಯದಲ್ಲಿ ನಾವು ಸೇರಿದೆವು. ನೀರಾವರಿ ಯೋಜನೆಯ ಸೌಲಭ್ಯದಿಂದ ಹೆಚ್ಚು ಬೆಳೆಯುವುದಕ್ಕೆ ಆಗುತ್ತದೆ ಎಂದು ಜನರು ಭಾವನೆ ಇಟ್ಟುಕೊಂಡಿದ್ದಾರೆ. ಜನರಿಗೆ ನಿರಾಶೆಯುಂಟಾಗದಂತೆ ಅಭಿವೃದ್ಧಿಯಾಗುವ ರೀತಿಯಲ್ಲಿ ನೀರಾವರಿ ಹೆಚ್ಚಾಗುವುದಕ್ಕೆ ಅವಕಾಶ ಮಾಡಿಕೊಡಬೇಕು. ನಮ್ಮ ಜಿಲ್ಲೆಯಲ್ಲಿ ಹೆಸರಿಗೆ ತುಂಗಭದ್ರ ಪ್ರಾಜೆಕ್ಟ್ ಇದೆ. ಆದರೆ ಅದು ಹೆಚ್ಚಾಗಿ ಆಂಧ್ರಕ್ಕೆ ಉಪಯೋಗವಾಗುತ್ತದೆ. ಆದುದರಿಂದ ಬಳ್ಳಾರಿ, ಹಡಗಲಿ, ಹರಪನಹಳ್ಳಿ, ಸೊಂಡೂರು, ಮಲ್ಲಾಪುರ, ಧಾರವಾಡ ಜಿಲ್ಲೆಯ ಹಾವೇರಿ, ರಾಣಿಬೆನ್ನೂರು, ಮುಂಡರಗಿ ಈ ತಾಲ್ಲೂಕುಗಳಿಗೆ ಅನುಕೂಲವಾಗತಕ್ಕಂಥ ಒಂದು ಅಪ್ಪರ್ ಪ್ರಾಜೆಕ್ಟ್ ಕೈಕೊಂಡು ಅನುಕೂಲ ಮಾಡಿಕೊಡಬೇಕು. ಯಾಕಂದರೆ ಈ ಪ್ರದೇಶದಲ್ಲ ನೀರಾವರಿ ಇಲ್ಲದೆ ಯಾವಾಗಲೂ ಬರಗಾಲದ ಬವಣಿಯಲ್ಲಿ ಬೆಂದು ಹೋಗುವ ಪರಿಸ್ಥಿತಿ ಅಲ್ಲಿ ಇದೆ. ಇಂಥ

(ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ)

ಕಷ್ಟದ ಪರಿಸ್ಥಿತಿ ನಿವಾರಣೆ ಮಾಡಲು ಒಂದು ಪ್ರಾಜೆಕ್ಟನ್ನು ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ತೆಗೆದುಕೊಳ್ಳಲು ಸರಕಾರ ಯೋಚನೆ ಮಾಡಬೇಕು ಎಂದು ಇಲ್ಲಿ ಆಗ್ರಹ ಪೂರ್ವಕವಾಗಿ ವಿನಂತಿ ಮಾಡಿಕೊಳ್ಳುತ್ತೇನೆ.

ತುಂಗಭದ್ರ ನದಿ ದಂಡೆಗುಂಟ ಇರತಕ್ಕಂಥ ಪ್ರದೇಶದಲ್ಲಿ ನೀರು ಒದಗಿಸಲು ಲಿಫ್ಟ್ ಇರಿಗೇಷನ್ ಸ್ಕೀಂ ಕೈಕೊಂಡಿದ್ದಾರೆ ಅದಕ್ಕಾಗಿ ಮಂತ್ರಿಗಳನ್ನು ಅಭಿನಂದಿಸುತ್ತೇನೆ. ಈ ರೀತಿ ಪ್ರಗತಿ ಪರವಾದ ಕೆಲಸ ನಡೆದಿದೆ. ತುಂಗಭದ್ರ ಯೋಜನೆಯಿಂದ ಮುಳುಗಡೆಯಾದ ಪ್ರದೇಶದ ಜನರಿಗೆ ಹೆಚ್ಚು ಸೌಕರ್ಯ ಒದಗಿಸಲು ನದಿ ದಂಡೆಗುಂಟ ಇರತಕ್ಕಂಥ ಎಲ್ಲಾ ಗ್ರಾಮಗಳಿಗೂ ಲಿಫ್ಟ್ ಇರಿಗೇಷನ್ ಸ್ಕೀಂ ಸೌಲಭ್ಯ ಒದಗಿಸಿ ಕೊಡಬೇಕು. ಹಗರಿ ಬೊಮ್ಮನಹಳ್ಳಿ ಪ್ರಾಜೆಕ್ಟನ್ನು ತೀವ್ರವಾಗಿ ಪೂರ್ತಿ ಕೆಲಸ ಮಾಡಿ ಕೂಡಲೇ ನೀರಾವರಿ ಯೋಜನೆಯ ಸೌಕರ್ಯ ಒದಗಿಸಲು ವ್ಯವಸ್ಥೆ ಮಾಡಬೇಕು, ಹಾಗು ಈ ವರ್ಷ ಮಳೆಗಾಲ ಬರುವುದರೊಳಗೆ ಅಲ್ಲಿಯ ಜನರಿಗೆ ನೀರಾವರಿ ಸೌಕರ್ಯ ಒದಗಿಸುವುದಕ್ಕೆ ಅವಕಾಶ ಮಾಡಿಕೊಡಬೇಕು.

ಇನ್ನು ರಸ್ತೆ ವಿಚಾರ. ಗ್ರಾಮಾಂತರ ಪ್ರದೇಶದ ರಸ್ತೆ, ತಾಲ್ಲೂಕ ಬೋರ್ಡ್ ರಸ್ತೆ ರಿಪೇರ್ಸ್ ಮಾಡಲು ಹಣವಿಲ್ಲದೆ ತೊಂದರೆಯಾಗಿದೆ. ಹಡಗಲಿ ಮತ್ತು ಮಲ್ಲಾಪುರ ತಾಲ್ಲೂಕ್ ರಸ್ತೆ ಕೆಲಸ ಸರಕಾರದವರು ವಹಿಸಿಕೊಂಡಿಲ್ಲ. ಈ ರಸ್ತೆ ಪಿ. ಡಬ್ಲ್ಯು. ಡಿ. ಖಾತೆಯವರು ವಹಿಸಿಕೊಂಡು ರಿಪೇರ್ಸ್ ಮಾಡಬೇಕು ಎಂದು ಸರಕಾರಕ್ಕೆ ವಿಜ್ಞಾಪನೆ ಮಾಡುತ್ತೇನೆ. ಹಡಗಲಿಯಲ್ಲಿ ಈ ಇಲಾಖೆಯ ಒಂದು ಪರ್ಮನೆಂಟ ಡಿವಿಜನ್ ಇಲ್ಲ. ಇನ್‌ವೆಸ್ಟಿಗೇಷನ್ ಡಿವಿಜನ್ ಮಾತ್ರ ಇದೆ. ಇಲ್ಲಿ ಒಂದು ಸಬ್‌ಡಿವಿಜನ್ ಮಾಡಿ ಕೆಲಸ ಕಾರ್ಯಗಳನ್ನು ಸಮರ್ಥನೀಯವಾದ ರೀತಿಯಲ್ಲಿ ನಡೆಯುವಂತೆ ಮಾಡಬೇಕೆಂದು ಮಾನ್ಯ ಮಂತ್ರಿಗಳಿಗೆ ಸೂಚಿಸ ಬಯಸುತ್ತೇನೆ.

ಭದ್ರಾ ಪ್ರಾಜೆಕ್ಟಿನ ಲೆವೆಲ್ಲನ್ನು ಎತ್ತರ ಮಾಡಿ, ಇನ್ನೂ ಹೆಚ್ಚು ಎತ್ತರ ಮಾಡಿ ಹಡಗಲಿ ಹರಪನಹಳ್ಳಿ ತಾಲ್ಲೂಕಿನ ಪ್ರದೇಶ ನಿರಾವರಿಯಾಗುವುದಕ್ಕೆ ಅವಕಾಶ ಮಾಡಿ ಕೊಡಬೇಕು. ಮುಂದೆ ಹಡಗಲಿ ತಾಲ್ಲೂಕು ಭದ್ರಾ ಪ್ರಾಜೆಕ್ಟಿನ ನೀರಾವರಿ ಪ್ರದೇಶದಲ್ಲಿ ಬರುತ್ತದೆ ಎಂದು ಇತ್ತು. ಆದರೆ ಆ ಪ್ರಾಜೆಕ್ಟಿನ ಎತ್ತರ ಕಡಿಮೆಯಾದುದರಿಂದ ನೀರಾವರಿ ಸೌಲಭ್ಯ ನಮ್ಮ ತಾಲ್ಲೂಕಿಗೆ ದೊರೆತಿಲ್ಲ. ಆದರೆ ಹರಿಹರದಲ್ಲಿ ಹತ್ತು ಸಾವಿರ ಎಕರೆ ನೀರಾವರಿಯಾಗುವ ಹಾಗೆ ಮಾಡಿದ್ದಾರೆ. ನಮ್ಮ ತಾಲ್ಲೂಕಿಗೂ ನೀರಾವರಿ ಅನುಕೂಲ ಒದಗಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

ಇನ್ನು ಹಾವನೂರು ಸೇತುವೆ ಕೆಲಸ ಅರ್ಧಕ್ಕೆ ನಿಂತಿದೆ. ಈ ಸೇತುವೆ ಕೆಲಸ ಪೂರ್ತಿ ಮುಗಿಸಬೇಕು ಎಂದು ಹೇಳುತ್ತೇನೆ. ಇನ್ನು ಇಲೆಕ್ಟ್ರಿಸಿಟಿ ಬಗ್ಗೆ ಅನೇಕ ಮಾನ್ಯ ಮಿತ್ರರು ಮಾತನಾಡಿ ಹೇಳಿದ್ದಾರೆ. ಕೊನೆಯದಾಗಿ ನಾನು ಸೂಚಿಸಿದ ಸಲಹೆಗಳನ್ನು ಕಾರ್ಯಗತ ಮಾಡಬೇಕೆಂದು ಮಾನ್ಯ ಮಂತ್ರಿಗಳಿಗೆ ವಿಜ್ಞಾಪನೆ ಮಾಡಿಕೊಂಡು ನನಗೆ ಮಾತನಾಡಲು ಅವಕಾಶ ಕೊಟ್ಟದ್ದಕ್ಕೆ ಅಧ್ಯಕ್ಷರನ್ನು ವಂದಿಸಿ ನನ್ನ ಮಾತು ಮುಗಿಸುತ್ತೇನೆ.

Sri DIGAMBARA RAO B. KALMANKAR (Aland).—Mr. Speaker Sir, as I have no sufficient time at my disposal, I touch only important points and finish my speech. Regarding the Upper Krishna Project, a very meagre sum of Rs. 50 lakhs has been provided in the budget. I do not know when this project is going to be completed at this rate. You have provided only Rs. 10 lakhs a year. If this is the position, it is impossible to complete this project. If this project is completed, about 67,000 acres will come under irigation in our area. So, I request the Hon'ble Minister to provide more money so that it may be completed early and the areas of Hyderabad Karnatak will be benefited. I want to stress on the lift irrigation Schemes. So far about 71 lift irrigation

schemes have been completed in our State. Such other projects which involve small grants may be taken up and the work may be speeded up, so that our food problem may be solved.

In Aland Taluk there is one Salegaon Tank which is scheduled to irrigate 1,500 acres. This tank has not been taken up. Even the Honavalli tank is not completed. These two tanks may be taken up and completed so that irrigation facilities may be given to our part. As far as electricity facilities are concerned, if we compare with the Districts of Kolar and some other Districts of old Mysore, our Gulbarga District is lagging behind. So far as Bidar, Raichur and Gulbarga Districts are concerned, only 149 villages have been electrified. If we compare the figures with any other District in old Mysore, it is far less. Therefore, I request the Hon'ble Minister to give more consideration for the backward area of Hyderabad Karnatak and see the electric facilities are given.

Regarding pumpsets, I would submit that Raichur district has got only 779, Gulbarga district 529 and Bidar district 1165. This is uncomparable with the figures of Kolar and Bangalore—in Kolar district 12,424 and in Bangalore district 10,195. This is a gross disparity as far as development of Hyderabad-Karnatak area is concerned. Therefore, it would not be wrong to suggest that more facilities may be given to the three districts of Hyderabad-Karnatak, and they deserve all consideration to come up to the standards of other districts.

The proposals to construct Court building and some other buildings at Aland were before the Government since a long time. But, they have not received consideration so far. The present Court building at Aland is very small and sufficient accommodation is not there. These works may be taken up early. Further, Bus stand facilities are not provided to Aland. I request the Government to take up this work also early.

With regard to roads it is said that at least 50 miles of metal road will be there in every taluk. I do not know how far this has progressed, particularly in Hyderabad-Karnatak area. This may please be attended to.

Then, Sir, I would like to refer to school buildings. In our Taluk, there are about 28 Middle schools, but none of them had Government building. Education being the primary necessity, I request the Government to take up construction of school buildings in Aland early.

With these words, I conclude and thank the Chair.

MR. CHAIRMAN.—I now call upon Sri Basavannappa to speak, he will be the last speaker in this Debate. As the hon'ble member is not present here, I take it that the Debate is over.

Since the House decided to sit upto 7-30 P.M. why not the Deputy Minister commence his reply?

Sri B. D. JATTI (Minister for Food and Civil Supplies).—Sir, let him commence to-morrow.

Mr. CHAIRMAN.—The House will now rise to meet to-morrow at 12 Noon.

The House adjourned at Twenty-five Minutes past Seven of the Clock to meet again at Twelve of the Clock on Wednesday, the 21st March 1968.